

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 26 ಸೋಮವಾರ 2022


ಸಂಪುಟ: 43 | ಸಂಚಿಕೆ: 249 | ಪುಟಗಳು: 10

43

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಮುಂದಿನ 4 ದಿನ ಮಳೆ

ಬೆಂಗಳೂರು: ಕಳೆದ ಕೆಲವು ದಿನಗಳ ಹಿಂದೆ ಮಾಂಡೌಸ್ ಚಂಡಮಾರುತದ ಹಿನ್ನೆಲೆ ರಾಜ್ಯಾದ್ಯಂತ ಮಳೆ ಸುರಿದಿದ್ದು, ಬಳಿಕ ವರುಣ ಸ್ವಲ್ಪ ಬಿಡುವು ನೀಡಿದ್ದ. ಇದೀಗ ಮತ್ತೆ ರಾಜ್ಯಕ್ಕೆ ಲಗ್ಗೆಯಿಡುವ ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ. ಮುಂದಿನ 4 ದಿನ ರಾಜ್ಯದ ಹಲವೆಡೆ ಸಾಧಾರಣ ಮಳೆಯಾಗಲಿದೆ. ಮಳೆ ದಕ್ಷಿಣ ಒಳನಾಡನ್ನು ಕಾಡಲಿದ್ದು, ಬೆಂಗಳೂರು ಸೇರಿದಂತೆ ದಕ್ಷಿಣ ಒಳನಾಡಿನ 9 ಜಿಲ್ಲೆಗಳಲ್ಲಿ ಮಳೆಯಾಗಲಿದೆ.

ಇಂದು ಹಾಗೂ ನಾಳೆ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಕೊಡಗು, ಕೋಲಾರ, ಮೈಸೂರು, ಮಂಡ್ಯ, ರಾಮನಗರ, ತುಮಕೂರು ಜಿಲ್ಲೆಗಳಲ್ಲಿ ಮಳೆ ಮುನ್ಸೂಚನೆಯಿದೆ. ಕೊನೆಯ 2 ದಿನ ಕೊಡಗು, ಮೈಸೂರು, ಚಾಮರಾಜನಗರ ಜಿಲ್ಲೆಗಳಲ್ಲಿ ಮಳೆಯಾಗುವ ಸಾಧ್ಯತೆಯಿದೆ.



ಖಾಸಗಿ ಸಂಸ್ಥೆ ನೌಕರರಿಗೂ ಯಶಸ್ವಿನಿ ವಿಸ್ತರಣೆ

- ರಾಜ್ಯ ಸರ್ಕಾರ ಸೂಚನೆ
- ಡಿ.31 ನೋಂದಣಿಗೆ ಕಡೇ ದಿನ
- ಜ.1ರಿಂದ ಯೋಜನೆ ಜಾರಿ
- ಡಿ.31ರವರೆಗೆ ಚಿಕಿತ್ಸಾ ಅವಧಿ



ಬೆಂಗಳೂರು, ಡಿ.25– ರೈತ ಸಮುದಾಯಕ್ಕೆ ಅನುಕೂಲವಾಗಿರುವ ಯಶಸ್ವಿನಿ ಯೋಜನೆಯ ಲಾಭ ಇನ್ನು ಮುಂದೆ ಖಾಸಗಿ ಸಂಸ್ಥೆ ನೌಕರರಿಗೂ ಲಭಿಸಲಿದೆ. ಈ ನಿಟ್ಟಿನಲ್ಲಿ ಸರ್ಕಾರ ಮಹತ್ವದ ಸೂಚನೆ ನೀಡಿದೆ.

2018ರಲ್ಲಿ ನಿಂತು ಹೋಗಿದ್ದ ಯೋಜನೆಯನ್ನು ಸರ್ಕಾರ ಮತ್ತೆ ಜಾರಿಗೆ ತಂದಿದೆ. ಫಲಾನುಭವಿ ಕುಟುಂಬಕ್ಕೆ ವಾರ್ಷಿಕ ವೈದ್ಯಕೀಯ ಚಿಕಿತ್ಸೆ ವೆಚ್ಚ 5 ಲಕ್ಷ ನಿಗದಿ ಮಾಡಲಾಗಿದೆ. 4 ಸದಸ್ಯರ ಕುಟುಂಬಕ್ಕೆ ವರ್ಷಕ್ಕೆ 500 ವಂತಿಕೆ ಕಟ್ಟಬೇಕಾಗಿದ್ದು, ನೋಂದಣಿ ಪ್ರಕ್ರಿಯೆಯನ್ನು ನ.1ರಿಂದ ಪ್ರಾರಂಭಿಸಲಾಗಿದೆ. 2022–23ನೇ ಬಜೆಟ್‌ನಲ್ಲಿ ಯೋಜನೆಗೆ 300 ಕೋಟಿ ಘೋಷಿಸಲಾಗಿದೆ. ಡಿ.31 ನೋಂದಾಯಿಸಿಕೊಳ್ಳಲು ಅಂತಿಮ ದಿನವಾಗಿದ್ದು, ಇದರ ಮಧ್ಯೆ ಖಾಸಗಿ ನೌಕರರೂ ಯಶಸ್ವಿನಿ ಯೋಜನೆಗೆ ಸೇರ್ಪಡೆಗೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಸಹಕಾರ ಸಂಘಗಳಲ್ಲಿ ಸದಸ್ಯರಾಗಿರುವ ಖಾಸಗಿ ನೌಕರರ ಮಾಸಿಕ ವೇತನ 30,000 ಅಥವಾ ವಾರ್ಷಿಕ 3.60 ಲಕ್ಷ ರೂ. ಗಳಿದ್ದರೆ ಅಂಥವರು ಯಶಸ್ವಿನಿ ಯೋಜನೆಗೆ ಸೇರ್ಪಡೆಗೊಳ್ಳಬಹುದು ಎಂದು ಸರ್ಕಾರ ತಿಳಿಸಿದೆ. ▶ 8ನೇ ಪುಟಕ್ಕೆ



ಸೌಲಭ್ಯ ಪಡೆಯುವುದು ಹೇಗೆ

ಯಶಸ್ವಿನಿ ಫಲಾನುಭವಿಗಳು ಶಸ್ತ್ರಚಿಕಿತ್ಸೆ ಬೇಕಾದಲ್ಲಿ ತಮ್ಮ ಯೂನಿಕ್ ಐಡಿ ಸಂಖ್ಯೆ ಹೊಂದಿರುವ ಸದಸ್ಯರ ಉಪಯೋಗಕ್ಕಾಗಿ ನೀಡಲಾದ ಮೂಲ ಗುರುತಿನ ಕಾರ್ಡ್ ಮತ್ತು ಮೂಲ ಹಣ ಪಾವತಿ ರಸೀದಿಯೊಂದಿಗೆ ಯೋಜನೆಯಡಿ ಅಂಗೀಕೃತವಾದ ಆಸ್ಪತ್ರೆಗೆ ಭೇಟಿ ನೀಡಬೇಕು. ವೈದ್ಯಾಧಿಕಾರಿಗಳು ಅಂತಹ ಫಲಾನುಭವಿಗಳ ತಪಾಸಣೆ ಮಾಡಿ, ಶಸ್ತ್ರಚಿಕಿತ್ಸೆ ಅವಶ್ಯ ಕಂಡುಬಂದಲ್ಲಿ ಮತ್ತು ಸದರಿ ಶಸ್ತ್ರಚಿಕಿತ್ಸೆಯು ಯೋಜನೆಯಲ್ಲಿ ಒಳಗೊಂಡಿದ್ದಲ್ಲಿ, ವಿವರಗಳೊಂದಿಗೆ ಅನುಷ್ಠಾನ ಸಂಸ್ಥೆಗೆ ಇಂಟರ್‌ನೆಟ್ ಮುಖಾಂತರ ಪ್ರಸ್ತಾಪ ಕಳಿಸುವರು. ಅನುಷ್ಠಾನ ಸಂಸ್ಥೆಯವರು ಪ್ರಸ್ತಾಪವನ್ನು ಪರಿಶೀಲಿಸಿ ಚಿಕಿತ್ಸಾ ಪೂರ್ವಾನುಮತಿ ನೀಡಿದ ನಂತರ ಆಸ್ಪತ್ರೆಯವರು ಶಸ್ತ್ರಚಿಕಿತ್ಸೆಯನ್ನು ನಿರ್ವಹಿಸುವರು. ಯಶಸ್ವಿನಿ ಫಲಾನುಭವಿಗಳು ಆಸ್ಪತ್ರೆಗೆ ಸೇರಿದಾಗ ಶಸ್ತ್ರಚಿಕಿತ್ಸೆಗೆ ಹಣ ಪಾವತಿ ಮಾಡಬೇಕಾಗಿಲ್ಲ. ಈ ಯೋಜನೆಯಲ್ಲಿ ಗುರುತಿಸಿದ ಶಸ್ತ್ರಚಿಕಿತ್ಸೆಗಳು ಕೆಲವು ಷರತ್ತುಗಳಿಗೊಳಪಟ್ಟು ನಗದು ರಹಿತವಾಗಿರುತ್ತೆ. ಅದರ ವೆಚ್ಚ ಆಸ್ಪತ್ರೆಗೆ ಟ್ರಸ್ಟ್ ಭರಿಸುತ್ತದೆ.

ಕರ್ನಾಟಕ ರಾಜ್ಯದ ಗ್ರಾಮೀಣ ಸಹಕಾರಿಗಳಿಗಾಗಿಯೇ ರೂಪುಗೊಂಡಿರುವ ಒಂದು 'ಸ್ವಯಂ–ನಿಧಿ ಶಸ್ತ್ರಚಿಕಿತ್ಸಾ ಯೋಜನೆ ಯಶಸ್ವಿನಿ. ಈ ಯೋಜನೆಯಡಿ ಗ್ರಾಮೀಣ ಸಹಕಾರಿಯೊಬ್ಬರು ತಿಂಗಳಿಗೆ ಇಂತಿಷ್ಟರಂತೆ ನಿಗದಿತ ಪ್ರಮಾಣದಲ್ಲಿ 1 ವರ್ಷದ ಅವಧಿಯಲ್ಲಿ ಯಾವುದೇ ಶಸ್ತ್ರ ಚಿಕಿತ್ಸೆಯನ್ನು ನಿಗದಿತ ಮಿತಿಯೊಳಗೆ, ಷರತ್ತು ಮತ್ತು ನಿಯಮಗಳಿಗೆ ಒಳಪಟ್ಟು ಟ್ರಸ್ಟ್‌ನಿಂದ ಅಂಗೀಕೃತ ಯಾವುದೇ ಆಸ್ಪತ್ರೆಗಳಲ್ಲಿ ನಗದುರಹಿತವಾಗಿ ಪಡೆಯಬಹುದು.

ಬೆನ್ನಿಗೆ ಚೂರಿ ಹಾಕಿದವರನ್ನು ಕೆ.ಆರ್.ಪೇಟೆಯಿಂದ ಹೊರಹಾಕಿ

ಸಚಿವ ನಾರಾಯಣಗೌಡರ ವಿರುದ್ಧ ಮಾಜಿ ಸಿಎಂ ಕುಮಾರಸ್ವಾಮಿ ಆಕ್ರೋಶ



"2019ರ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್, ಬಿಜೆಪಿ, ರೈತಸಂಘದ ಕುತಂತ್ರಗಾರಿಕೆಗೆ ನಿಖಿಲ್ ಕುಮಾರಸ್ವಾಮಿ ಬಲಿಯಾದರು. ಆದರೆ ಜನರ ಮನಸ್ಸಿನಲ್ಲಿ ನಿಖಿಲ್ ಕುಮಾರಸ್ವಾಮಿ ಸೋತಿಲ್ಲ. ಒಂದು ವರ್ಷ ಮಾತ್ರ ಅವರು ರಾಮನಗರದಲ್ಲಿ ಶಾಸಕರಾಗಿರಬೇಕು. ಬಳಿಕ 2024ಕ್ಕೆ ಮಂಡ್ಯ ಲೋಕಸಭೆಗೆ ಸ್ಪರ್ಧಿಸಬೇಕು.
–ಸಿ.ಎಸ್.ಪುಟ್ಟರಾಜು, ಶಾಸಕ, ಮೇಲುಕೋಟೆ.

"ಕುಮಾರಸ್ವಾಮಿ ಕೆಲವೇ ತಿಂಗಳ ಕಾಲ ಆಡಳಿತ ನಡೆಸಿದರು. ಅವರ ಆಡಳಿತದಲ್ಲಿ ಕೊಟ್ಟ ಕಾರ್ಯಕ್ರಮಗಳು ಜನ ಮಾನಸದಲ್ಲಿವೆ. ಕೆ.ಆರ್.ಪೇಟೆ ಜನ ಹೊರ ಬಂದಿರೋದು ಅವರ ಹೋರಾಟಕ್ಕೆ ಸ್ಫೂರ್ತಿ.
–ನಿಖಿಲ್ ಕುಮಾರಸ್ವಾಮಿ, ಯುವ ನಾಯಕ

ಕೆ.ಆರ್.ಪೇಟೆ, ಡಿ.25(ಮೋಹನ್‌ರಾಜ್)– ರಾಜಕೀಯ ಹಿನ್ನೆಲೆ ಇಲ್ಲದ ಕೆ.ಸಿ.ನಾರಾಯಣಗೌಡರನ್ನು ಇಲ್ಲಿನ ಜೆಡಿಎಸ್ ಮುಖಂಡರ ವಿರೋಧದ ನಡುವೆ ಎರಡು ಬಾರಿ ಟಿಕೆಟ್ ಕೊಟ್ಟು ಶಾಸಕರನ್ನಾಗಿ ಮಾಡಿದರೆ, ನನ್ನ ಬೆನ್ನಿಗೆ ಚೂರಿ ಹಾಕಿ ಬಿಜೆಪಿಗೆ ಹೋದರು. ಇವರನ್ನು ಮುಂದಿನ ಚುನಾವಣೆಯಲ್ಲಿ ಕೆ.ಆರ್.ಪೇಟೆ ತಾಲೂಕಿನಿಂದಲೇ ಹೊರಹಾಕಬೇಕು ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಸಚಿವ ಕೆ.ಸಿ.ನಾರಾಯಣಗೌಡ ವಿರುದ್ಧ ಕಿಡಿಕಾರಿದರು.

ಪಂಚರತ್ನ ಯಾತ್ರೆ ಹಿನ್ನೆಲೆಯಲ್ಲಿ ಕೆ.ಆರ್.ಪೇಟೆ ಪಟ್ಟಣದಲ್ಲಿ ಬೃಹತ್ ಬಹಿರಂಗ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಂದು ಕೆ.ಆರ್. ಪೇಟೆಯಲ್ಲಿ ಜೆಡಿಎಸ್ ಇನ್ನೂ ಬದುಕಿದೆ ಅಂತ ತೋರಿಸಿದ್ದೀರಾ. ಕೆ.ಆರ್.ಪೇಟೆಗೂ ದೇವೇಗೌಡರ ಕುಟುಂಬಕ್ಕೂ ಇರುವ ಭಾವನಾತ್ಮಕ ಸಂಬಂಧ ಮರೆಯಲಾಗದು. ಯಾರು ಟೋಪಿ ಹಾಕಿದ್ದಾರೆ, ಬೆನ್ನಿಗೆ ಚೂರಿ ಹಾಕಿದ್ದಾರೋ ಅವರನ್ನು ಕೆ.ಆರ್.ಪೇಟೆಯಿಂದ ಹೊರಹಾಕುವ ಸಂದೇಶ ನೀಡಿ ಎಂದು ಕುಮಾರಸ್ವಾಮಿ ಮನವಿ ಮಾಡಿದರು.

ಕಳೆದ ಉಪಚುನಾವಣೆಯಲ್ಲಿ ಜೆಡಿಎಸ್ ಸೋಲಿಸಿದ್ದು ಕೆ.ಆರ್.ಪೇಟೆ ಜನರಲ್ಲ, ನಮ್ಮ ತಪ್ಪುಗಳಿಂದ, ಬಿಜೆಪಿಯ ಹಣದ ಹೊಳೆಯಿಂದ. ಆದರೆ ಈ ಬಾರಿ ಹಣದ ರಾಜಕೀಯ ನಡೆಯಲ್ಲ. 2006ರಲ್ಲಿ ಇಂಜಿನಿಯರಿಂಗ್ ಕಾಲೇಜು, ವಿದ್ಯುತ್ ಸಬ್ ಸ್ಟೇಷನ್ ಸೇರಿದಂತೆ ಕೆ.ಆರ್.ಪೇಟೆ ಅಭಿವೃದ್ಧಿಗೆ 700 ರಿಂದ 800 ಕೋಟಿ ಕೊಟ್ಟಿದ್ದೆ. ಕಳೆದ ಮೈತ್ರಿ ಸರ್ಕಾರದಲ್ಲೂ ಕೆ.ಆರ್.ಪೇಟೆಗೆ ಹೆಚ್ಚಿನ ಅನುದಾನ ಕೊಡಲು ತೀರ್ಮಾನಿಸಿದ್ದೆ. ಅಷ್ಟರಲ್ಲಿ ಮೈತ್ರಿ ಸರ್ಕಾರವನ್ನು ತೆಗೆದರು ಎಂದು ಹೇಳಿದರು.

34 ಮೃತ ರೈತ ಕುಟುಂಬಗಳನ್ನು ಭೇಟಿಯಾಗಲು ಬಂದಾಗ ಇಲ್ಲಿನ ಮಹಾನುಭಾವ ಜೇಬಿಗೆ ಕೈ ಹಾಕಲಿಲ್ಲ. ಸ್ವಂತ ಹಣದಲ್ಲಿ ನಾನು ಮೃತ ಕುಟುಂಬಗಳಿಗೆ ಪರಿಹಾರ ನೀಡಿದೆ ಎಂದು ಸಚಿವ ನಾರಾಯಣಗೌಡ ವಿರುದ್ಧ ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು. ರೈತರ ಸಾಲ ಮನ್ನಾ ಮಾಡುವ ಕಾರಣಕ್ಕಾಗಿ ಕಾಂಗ್ರೆಸ್ ಜೊತೆ ಸರ್ಕಾರ ಮಾಡಿದೆ. ▶ 8ನೇ ಪುಟಕ್ಕೆ

ಕೆಆರ್‌ಎಸ್ ಹಿನ್ನೀರು ಭಾಗದಲ್ಲಿ ಚಿರತೆ ಹಿಂಡಿನ ಉಪಟಳ

ತೋಟದ ಮನೆಗೆ ದಾಳಿ: 4 ಮೇಕೆ ಬಲಿ

ಶ್ರೀರಂಗಪಟ್ಟಣ,ಡಿ.25–ವಿಶ್ವವಿಖ್ಯಾತ ಕೆಆರ್‌ಎಸ್ ಬೃಂದಾವನದ ಆಸುಪಾಸಿನಲ್ಲಿ ಚಿರತೆಗಳ ಹಿಂಡೇ ಪ್ರತ್ಯಕ್ಷವಾಗಿದ್ದು, 4 ಮೇಕೆಗಳನ್ನು ತಿಂದು ಈ ಭಾಗದ ಜನರು ಹಾಗೂ ಪ್ರವಾಸಿಗರಲ್ಲಿ ಮತ್ತೆ ಆತಂಕ ಸೃಷ್ಟಿಸಿವೆ.

ಕೆಆರ್‌ಎಸ್ ಹಿನ್ನೀರಿನ ದಡದಲ್ಲಿರುವ ವೇಣುಗೋಪಾಲಸ್ವಾಮಿ ದೇವಸ್ಥಾನದ ಪಕ್ಕದ ಚಂದ್ರಶೇಖರ್ ಎಂಬುವರಿಗೆ ಸೇರಿದ ತೋಟಕ್ಕೆ ನುಗ್ಗಿರುವ 3 ಚಿರತೆಗಳು ದಾಳಿ ನಡೆಸಿ, ತೋಟದ ಮನೆಯಲ್ಲಿದ್ದ 4 ಮೇಕೆಗಳನ್ನು ಕೊಂದು ಹಾಕಿವೆ. ಅವುಗಳನ್ನು ಕಲ್ಲು ತೂರಿ ಓಡಿಸುವ ಪ್ರಯತ್ನ ಮಾಡಲಾಗಿದ್ದು, ಈ ದೃಶ್ಯಗಳು ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ.


ಚಿರತೆ ಸೆರೆಗೆ ಬೋನ್ ಇಟ್ಟಿರುವುದು.

ತೋಟದ ಮಾಲೀಕ ಚಂದ್ರಶೇಖರ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಚಿರತೆಗಳು ಕಂಡು ಬಂದ ಸ್ಥಳದಲ್ಲಿ ಬೋನು ಇರಿಸುವಂತೆ ಅರಣ್ಯ ಇಲಾಖೆಗೆ ಮನವಿ ಮಾಡಿದ್ದೆವು. ಆದರೆ, ಅಧಿಕಾರಿಗಳು ಈಗ ಬೋನ್ ತಂದು ಇರಿಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಳೆದ ಮೂರ್ನಾಲ್ಕು ತಿಂಗಳಿಂದ ಈ ಭಾಗದಲ್ಲಿ ಚಿರತೆಗಳು ಕಾಣಿಸಿಕೊಂಡು ಮೇಕೆ, ಕುರಿ, ನಾಯಿಗಳ ಮೇಲೆ ದಾಳಿ ಮಾಡಿವೆ. ಇಂದು ಹೊಸ ಕನ್ನಂಬಾಡಿ ಹಾಗೂ ಬನ್ನಂಗಾಡಿಗಳಲ್ಲಿ ಚಿರತೆ ಕಾಣಿಸಿಕೊಂಡಿವೆ. ಆದ್ದರಿಂದ ಅಲ್ಲಿ ಬೋನ್ ಇರಿಸಿ 8 ಮಂದಿ ಸಿಬ್ಬಂದಿ ಹಾಗೂ ಸಾರ್ವಜನಿಕರು ಸೇರಿ ಕೂಂಬಿಂಗ್ ನಡೆಸಿದ್ದೇವೆ. ಸಾಧ್ಯವಾದಷ್ಟು ಬೇಗ ಚಿರತೆ ಸೆರೆ ಹಿಡಿಯಲಾಗುವುದು ಎಂದು ತಿಳಿಸಿದ ಅರಣ್ಯಾಧಿಕಾರಿ ಪುಟ್ಟಸ್ವಾಮಿ, ಸೋಮವಾರ ಸ್ಥಳಕ್ಕೆ ಎಸಿಎಫ್ ಶಂಕರೇಗೌಡ ಭೇಟಿ ನೀಡಲಿದ್ದಾರೆ ಎಂದು ತಿಳಿಸಿದರು. ಕೆಆರ್‌ಎಸ್ ಅಕ್ಕಪಕ್ಕ ಚಿರತೆ ಕಾಣಿಸಿಕೊಂಡಿದ್ದರೂ ಬೃಂದಾವನ್ ಗಾರ್ಡನ್‌ಗೆ ▶ 8ನೇ ಪುಟಕ್ಕೆ

ಸಿದ್ದಾಪುರ ಬಳಿ ಹಾಡಹಗಲೇ ಕಾಫಿ ಪ್ಲಾಂಟರ್ ಮನೆ ದರೋಡೆ

ಸಿದ್ದಾಪುರ, ಡಿ.25– ಹಾಡಹಗಲೇ ತೋಟದ ಮನೆಗೆ ನುಗ್ಗಿ ಕಾಫಿ ಬೆಳೆಗಾರನನ್ನು ಕಟ್ಟಿಹಾಕಿ, ಚಿನ್ನಾಭರಣ ಹಾಗೂ ನಗದು ದರೋಡೆ ಮಾಡಿರುವ ಘಟನೆ ಇಲ್ಲಿಗೆ ಸಮೀಪದ ಅವರೆಗುಂದ ಗ್ರಾಮದಲ್ಲಿ ನಡೆದಿದೆ.

ಮಾಲೀಕನ ಬೆದರಿಸಿ ಚಿನ್ನಾಭರಣ, ನಗದು ಕಳವು

ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಂತಿರುವ ಕಾಫಿ ತೋಟಕ್ಕೆ ಭಾನುವಾರ ಮಧ್ಯಾಹ್ನ 2.30ರ ವೇಳೆಯಲ್ಲಿ ನುಗ್ಗಿದ ನಾಲ್ವರು ದರೋಡೆಕೋರರು ತೋಟದ ಮನೆಯಲ್ಲಿದ್ದ ಮಾಲೀಕ ಮಂಡೇಪಂಡ ಚಂಗಪ್ಪ (60) ಅವರನ್ನು ಕರೆದು, ಹಸು ತಪ್ಪಿಸಿಕೊಂಡಿರುವುದರಿಂದ ಹುಡುಕಲು ಬಂದಿದ್ದೇವೆ ಎಂದು ಹೇಳಿ, ಏಕಾಏಕಿ ಮನೆಯೊಳಗೆ ತಳ್ಳಿ ಬಾಗಿಲು ಹಾಕಿಕೊಂಡಿದ್ದಾರೆ.



ಚಿನ್ನಾಭರಣ ಮತ್ತು ಹಣ ಕೊಡುವಂತೆ ದರೋಡೆಕೋರರು ಕೇಳಿದಾಗ ಚಂಗಪ್ಪ ಅವರು, 'ನಮ್ಮ ಮನೆಯಲ್ಲಿ ಚಿನ್ನಾಭರಣ ಇಲ್ಲ. ಇನ್ನೂ ಕಾಫಿ ಮಾರದೇ ಇರುವುದರಿಂದ ಹಣವೂ ಇಲ್ಲ' ಎಂದು ಹೇಳಿದಾಗ ಅವರ ಕುತ್ತಿಗೆಗೆ ಕತ್ತಿಯನ್ನಿಟ್ಟು ಓರ್ವ ಹೆದರಿಸಿದರೆ ಉಳಿದ ಮೂವರು ಮನೆಯನ್ನೆಲ್ಲಾ ಜಾಲಾಡಿ ಬೀರುವಿನಲ್ಲಿದ್ದ 16 ಗ್ರಾಂ ತೂಕದ ಚಿನ್ನಾಭರಣ ಹಾಗೂ 90 ಸಾವಿರ ನಗದು ದೋಚಿದ ನಂತರ ಚಂಗಪ್ಪ ಅವರ ಕೈಕಾಲುಗಳನ್ನು ಕಟ್ಟಿ, ಬಾಯಿಗೆ ಬಟ್ಟೆ ತುರುಕಿ ಮನೆಯ ಪಕ್ಕದಲ್ಲಿದ್ದ ತೋಡಿಗೆ ಬಿಸಾಡಿ ಹೋಗಿದ್ದಾರೆ. ಕಟ್ಟಿದ ಕೈಕಾಲುಗಳನ್ನು ಬಿಡಿಸಿಕೊಳ್ಳಲು ಚಂಗಪ್ಪ ತೀವ್ರವಾಗಿ ಪ್ರಯತ್ನಿಸಿದ್ದಾರೆ. ಸುಮಾರು ಒಂದೂವರೆ ಗಂಟೆ ನಂತರ ಕಟ್ಟುಗಳು ಸ್ವಲ್ಪ ಸಡಿಲಗೊಂಡ ನಂತರ ತೆವಳಿಕೊಂಡೇ ಪಕ್ಕದಲ್ಲಿರುವ ಮುತ್ತಣ್ಣ ಎಂಬುವರ ಮನೆ ಬಳಿ ತೆರಳಿದ್ದಾರೆ. ಇವರನ್ನು ಕಂಡ ಮುತ್ತಣ್ಣ ಕೂಡಲೇ ನೆರವಿಗೆ ಧಾವಿಸಿ, ಕಟ್ಟುಗಳನ್ನು ಬಿಡಿಸಿ, ಆರೈಕೆ ಮಾಡಿದ ನಂತರ ವಿಷಯ ತಿಳಿದು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಜಿಲ್ಲಾ ಎಸ್ಪಿ ಕ್ಯಾಪ್ಟನ್ ಅಯ್ಯಪ್ಪ, ಸಿದ್ದಾಪುರ ಇನ್ಸ್‌ಪೆಕ್ಟರ್ ಮೋಹನ್‌ರಾಜ್ ಹಾಗೂ ಸಿಬ್ಬಂದಿ ಭೇಟಿ ನೀಡಿದ್ದರು. ಶ್ವಾನದಳ ಹಾಗೂ ಬೆರಳಚ್ಚು ತಂಡ ಪರಿಶೀಲನೆ ನಡೆಸಿದೆ. ಈ ಸಂಬಂಧ ಸಿದ್ದಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜನಾರ್ಧನ ರೆಡ್ಡಿ ಹೊಸ ಪಕ್ಷ 'ಕಲ್ಯಾಣ ರಾಜ್ಯ ಪ್ರಗತಿ ಪಕ್ಷ'


2ನೇ ಇನಿಂಗ್ಸ್ ಆರಂಭಿಸಿದ ರೆಡ್ಡಿ; ಬಿಜೆಪಿಗೆ ಆಘಾತ

- ಗೆಳೆಯ ಶ್ರೀರಾಮುಲು ಕರೆದಿಲ್ಲ; ನನ್ನ ಪತ್ನಿ ಅರುಣಾ ಲಕ್ಷ್ಮಿ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳಲಿದ್ದಾರೆ
- ರಾಜಕೀಯದಲ್ಲಿ ನನ್ನವರಿಂದಲೇ ನಾನು ಮೋಸ ಹೋದೆ...

ಬೆಂಗಳೂರು,ಡಿ.25–ರಾಜ್ಯ ಬಿಜೆಪಿಗೆ ರಾಜಕೀಯದಿಂದ ಕಣ್ಮರೆಯಾಗಿದ್ದ ಬಿಜೆಪಿ ಮುಖಂಡ, ಮಾಜಿ ಸಚಿವ ಜನಾರ್ಧನರೆಡ್ಡಿ ಈಗ ಮತ್ತೆ ಬಿಜೆಪಿಗೆ ಕಗ್ಗಂಟಾಗಿ ಪರಿಣಮಿಸಿದ್ದಾರೆ. ಇಂದು ಸುದ್ದಿಗೋಷ್ಠಿ ನಡೆಸಿದ ರೆಡ್ಡಿ, ಹೊಸ ಪಕ್ಷ ಘೋಷಣೆ ಮಾಡಿದ್ದಾರೆ.

ಬೆಂಗಳೂರಿನ ಪಾರಿಜಾತ ನಿವಾಸದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂದು ಧೀಮಂತ ನಾಯಕ, ರಾಜಕೀಯ ಇತಿಹಾಸದಲ್ಲಿ ಸುವರ್ಣಾಕ್ಷರದಲ್ಲಿ ಬರೆದಿಡಬೇಕಾದ ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನ. ಕ್ರಿಸ್‌ಮಸ್ ಹಬ್ಬದ ಶುಭಾಶಯಗಳು. 18ನೇ ವಯಸ್ಸಿನಿಂದಲೇ ಬಸವಣ್ಣನವರ ಕಾಯಕವೇ ಕೈಲಾಸ ಎಂಬುದನ್ನು ನಂಬಿಕೊಂಡು ಬಂದವನು ನಾನು ಎಂದರು. ಇದೇ ವೇಳೆ ಹೊಸ ಕಲ್ಯಾಣ ರಾಜ್ಯ ಪ್ರಗತಿ ಪಕ್ಷವನ್ನು ಘೋಷಿಸಿ, ರಾಜ್ಯಾದ್ಯಂತ ಹೊಸ ಪಕ್ಷವನ್ನು ▶ 8ನೇ ಪುಟಕ್ಕೆ

ಗಂಗಾವತಿಯಿಂದ ಸ್ಪರ್ಧೆ



ಮುಂದಿನ ಚುನಾವಣೆಯಲ್ಲಿ ನಾನು ಸ್ಪರ್ಧಿಸುವುದು ಖಚಿತ. ಗಂಗಾವತಿ ಕ್ಷೇತ್ರದಿಂದಲೇ ಸ್ಪರ್ಧಿಸುತ್ತೇನೆ. ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ವಿರುದ್ಧ ಸ್ಪರ್ಧಿಸಲು ಬಳ್ಳಾರಿಗೆ ಸುಷ್ಮಾ ಸ್ವರಾಜ್ ಬಂದರು. ಶ್ರೀರಾಮುಲು ಜೊತೆಗೆ ಸುಷ್ಮಾ ಸ್ವರಾಜ್ ಅವರು ಘಟಾನುಘಟಿ ನಾಯಕರೊಂದಿಗೆ ನಮ್ಮ ಕಚೇರಿಗೆ ಬಂದರು. ಅಂದು, ಕಚೇರಿ ಬಿಟ್ಟು ನನ್ನ ಪರ ಕೆಲಸ ಮಾಡಬೇಕು ಎಂದು ಹೇಳಿದರು. ಅವರಲ್ಲಿ ತಾಯಿ ರೂಪ ಕಂಡೆ. ಪಾದ ಮುಟ್ಟಿ ನಮಸ್ಕರಿಸಿದೆ. ಜನಾರ್ಧನ ನೀನೇ ನಮ್ಮ ಮಾಸ್ಟರ್ ಮೈಂಡ್. ನಮ್ಮ ಜೊತೆ ಬಂದು ಕೆಲಸ ಮಾಡು ಎಂದಾಗ ನಾನು ಏನೂ ಮಾತಾಡದೆ ಒಪ್ಪಿಕೊಂಡೆ.
–ಜನಾರ್ಧನ ರೆಡ್ಡಿ.

ಚಾಮುಂಡಿಬೆಟ್ಟದ ಗೇಟ್ ಧ್ವಂಸ

ಅನೈತಿಕ ಚಟುವಟಿಕೆಗೆ ಕಡಿವಾಣ ಹಾಕಲು, ಅನಧಿಕೃತ ವಾಹನ ಪ್ರವೇಶ ತಡೆಗೆ ನಾಲ್ಕು ವರ್ಷದ ಹಿಂದೆ ನಾಲ್ಕು ಸಂಪರ್ಕ ರಸ್ತೆಗಳಲ್ಲಿ ಗೇಟ್ ಅಳವಡಿಸಲಾಗಿತ್ತು



ಮೈಸೂರು, ಡಿ.25(ಎಂಟಿವೈ)– ಚಾಮುಂಡಿಬೆಟ್ಟದಲ್ಲಿ ಅನೈತಿಕ ಚಟುವಟಿಕೆಗಳ ತಡೆಗೆ ಬ್ರೇಕ್ ಹಾಕುವ ಸಲುವಾಗಿ ರಾತ್ರಿ ವೇಳೆ ಬೆಟ್ಟಕ್ಕೆ ಅನಧಿಕೃತ ವಾಹನ ಪ್ರವೇಶ ನಿರ್ಬಂಧಿಸಿ ಅಳವಡಿಸಲಾಗಿದ್ದ ಗೇಟ್ ಧ್ವಂಸಗೊಳಿಸಲಾಗಿದೆ.

ಬೆಟ್ಟಕ್ಕೆ ಸಂಪರ್ಕ ಕಲ್ಪಿಸುವ ನಾಲ್ಕು ಕಡೆ ಇಂತಹ ಗೇಟ್‌ಗಳನ್ನು ಅಳವಡಿಸಲಾಗಿದ್ದು, ಅದರಲ್ಲಿ ನಂದಿ ರಸ್ತೆಗೆ ಅಳವಡಿಸಿದ್ದ ಗೇಟ್ ಧ್ವಂಸ ಮಾಡಲಾಗಿದೆ. ತ್ವರಿತವಾಗಿ ಹೊಸ ಗೇಟ್ ಅಳವಡಿಸಿ, ಬೆಟ್ಟದಲ್ಲಿ ನಡೆಯುವ ಅನೈತಿಕ ಚಟುವಟಿಕೆಗಳಿಗೆ ಕಡಿವಾಣ ಹಾಕುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

ಚಾಮುಂಡಿಬೆಟ್ಟದಲ್ಲಿ ರಾತ್ರಿ ವೇಳೆ ನಡೆಯುತ್ತಿದ್ದ ಅನೈತಿಕ ಚಟುವಟಿಕೆಗೆ ಕಡಿವಾಣ ಹಾಕಲು ಕಳೆದ ನಾಲ್ಕು ವರ್ಷದ ಹಿಂದೆ ಬೆಟ್ಟಕ್ಕೆ ಸಂಪರ್ಕ ಕಲ್ಪಿಸುವ 4 ರಸ್ತೆಗಳಿಗೂ ಗೇಟ್ ಅಳವಡಿಸಿ, ರಾತ್ರಿ 9 ಗಂಟೆಯ ನಂತರ ಅನಧಿಕೃತ ಪ್ರವೇಶ ನಿರ್ಬಂಧಿಸಲಾಗಿತ್ತು. ನಂದಿ ರಸ್ತೆಯಲ್ಲಿ ಭೂ ಕುಸಿತ ಉಂಟಾಗಿದ್ದರಿಂದ ಕಳೆದ ಒಂದೂವರೆ ವರ್ಷದಿಂದ ವಾಹನ ಸಂಚಾರ ಸಹಜವಾಗಿಯೇ ಸ್ಥಗಿತಗೊಂಡಿತ್ತು. ಆದರೆ, ಉತ್ತನಹಳ್ಳಿ ಕಡೆಯಿಂದ ಬರುವ ವಾಹನಗಳಿಗೆ ನಂದಿ ಬಳಿಗೆ ಬರುವುದಕ್ಕೆ ಅವಕಾಶ ಕಲ್ಪಿಸಲಾಗಿತ್ತು. ನಂದಿಯಿಂದ ತಾವರೆಕಟ್ಟೆ ಕಡೆಗೆ ಹೋಗುವ ರಸ್ತೆಯಲ್ಲಿ ನಿರ್ಗಮಿಸಲು ಅವಕಾಶ ನೀಡಲಾಗಿತ್ತು. ಆದರೆ ರಾತ್ರಿ ವೇಳೆ ನಾಲ್ಕೂ ಕಡೆ ▶ 8ನೇ ಪುಟಕ್ಕೆ

ಗೇಟ್ ದುರಸ್ತಿಗೆ ಕ್ರಮ


"ರಾತ್ರಿ ವೇಳೆ ವೇಗವಾಗಿ ಬಂದ ವಾಹನವೊಂದು ಡಿಕ್ಕಿ ಹೊಡೆದ ಪರಿಣಾಮ ತಾವರೆಕಟ್ಟೆಯಿಂದ ನಂದಿಗೆ ಹೋಗುವ ರಸ್ತೆಗೆ ಅಳವಡಿಸಿದ್ದ ಗೇಟ್ ಮುರಿದು ಬಿದ್ದಿರುವುದು ನಮ್ಮ ಗಮನಕ್ಕೆ ಬಂದಿದೆ. ಈ ಗೇಟ್ ದುರಸ್ತಿಗೆ ಕ್ರಮ ಕೈಗೊಳ್ಳಲಾಗಿದ್ದು, ಇನ್ನೆರಡು ದಿನದಲ್ಲಿ ಗೇಟ್ ಅಳವಡಿಸಲಾಗುತ್ತದೆ.
–ರಾಜು, ಪಿಡಬ್ಲ್ಯೂಡಿ ಎಕ್ಸಿಕ್ಯೂಟಿವ್ ಇಂಜಿನಿಯರ್





ಮೈಸೂರು ಅರಮನೆಗೆ ಭಾನುವಾರ ಕುಟುಂಬಸಹಿತ ಭೇಟಿ ನೀಡಿದ ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ. ವರಾಲೆ ಅವರನ್ನು ಅರಮನೆ ಆಡಳಿತ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಗಂಧದ ಹಾರ ಹಾಕಿ, ಶಾಲು ಹೊದಿಸಿ, ಮೈಸೂರು ಪೇಟ ತೊಡಿಸಿ, ಆತ್ಮೀಯವಾಗಿ ಸನ್ಮಾನಿಸಿದರು. ಅರಮನೆಯನ್ನು ವೀಕ್ಷಿಸಿದ ವರಾಲೆ ಅವರು ಇಲ್ಲಿನ ಕಲಾಕೃತಿ, ಚಿನ್ನದ ಅಂಬಾರಿ, ಖಾಸಗಿ ದರ್ಬಾರ್ ಹಾಗೂ ಉದ್ಯಾನವನಗಳ ಸೊಬಗನ್ನು ಕಂಡು ಹರ್ಷಚಿತ್ತರಾದರು.

ಮಣೆಗಾರ್ ಎಂ.ವೆಂಕಟಯ್ಯನವರ ಪುಣ್ಯಸ್ಮರಣೆ...



ಸಂಸದ ವಿ.ಶ್ರೀನಿವಾಸಪ್ರಸಾದ್ ಅವರ ತಂದೆ ದಿವಂಗತ ಮಣೆಗಾರ್ ಎಂ. ವೆಂಕಟಯ್ಯನವರ 13ನೇ ಪುಣ್ಯಸ್ಮರಣೆ ಅಂಗವಾಗಿ ಮೈಸೂರಿನ ಭೀಮಸದನ ನಿವಾಸದಲ್ಲಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ವೇಳೆ ಸಂಸದ ವಿ.ಶ್ರೀನಿವಾಸಪ್ರಸಾದ್, ಶ್ರೀಮತಿ ಭಾಗ್ಯಲಕ್ಷ್ಮಿ ಶ್ರೀನಿವಾಸ ಪ್ರಸಾದ್, ಭರತ್ ರಾಮಸ್ವಾಮಿ, ಹಿರಿಯ ಆಪ್ತ ಸಹಾಯಕ ಎಚ್.ಜಿ.ರಮೇಶ್, ಸಂಸದರ ಆಪ್ತ ಕಾರ್ಯದರ್ಶಿ ಪ್ರಸನ್ನ, ಶ್ರೀಕಂಠ ದತ್ತ, ಎಚ್.ಕೆ.ಅನಂತ, ಜಯರಾಜ್ ಇದ್ದರು.



ಮೈಸೂರಿನ ಕೋ–ಆಪರೇಟಿವ್ ಸೊಸೈಟಿಯ 2023ರ ಕ್ಯಾಲೆಂಡರ್ ಅನ್ನು ಭಾವಸಾರ ಕ್ಷತ್ರಿಯ ಮಂಡಳಿ ಅಧ್ಯಕ್ಷ ಶಿವಾಜಿರಾವ್ ರಂಪೂರೆ ಬಿಡುಗಡೆ ಮಾಡಿದರು. ಈ ವೇಳೆ ಪದಾಧಿಕಾರಿಗಳಾದ ಸುಭಾಷ್‌ರಾವ್ ಪತಂಗೆ, ಸೊಸೈಟಿ ಅಧ್ಯಕ್ಷ ದಯಾಶಂಕರ್ ಲಾಲೆ, ಮಾಜಿ ಅಧ್ಯಕ್ಷ ಜಯರಾಮ್‌ರಾವ್ ಲಾಳಿಗೆ, ಮುಖಂಡರಾದ ಬಾಲಾಜಿರಾವ್ ನಾಯಕ್, ರಮೇಶ್ ನಾಜರೆ, ನಾಗರಾಜ ಪತಂಗೆ, ಶ್ರೀನಿವಾಸರಾವ್ ಪಿಸ್ಸೆ ಜಯಪಾಲ್ ನಾಯಕ್, ಅಶ್ವಥ್‌ರಾವ್, ದಾಕ್ಷಾಯಿಣಿ ಪ್ರದೀಪ್ ರಂಪೂರೆ, ರಶ್ಮಿ ಕುತ್ನೀಕರ್, ಸತ್ಯನಾಥರಾವ್ ಸುಲಾಕೆ, ವೆಂಕಟೇಶ್‌ರಾವ್ ಕುತ್ನೀಕರ್, ಚೈತನ್ಯಕುಮಾರ್ ಹಿರಾಸ್ಕರ್, ಜೈಕುಮಾರ್ ಲಾಳಿಗೆ, ಸಂಜಯ್‌ಕುಮಾರ್ ರಂಪೂರೆ, ಚಂದ್ರಶೇಖರ್ ಇದ್ದಾರೆ.

ಟ್ರೈನ್ ಮಾಡಲು ಕೊಟ್ಟ ಕುದುರೆಯನ್ನೇ ಮಾರಿದ ಟ್ರೈನರ್

ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಮೈಸೂರು, ಡಿ.25–ರೇಸ್ ಕುದುರೆಯನ್ನು ಮಾಲೀಕನ ಅರಿವಿಗೇ ಬಾರದಂತೆ ಅದರ ಟ್ರೈನರ್ ಮಾರಾಟ ಮಾಡಿರುವ ಬಗ್ಗೆ ನಜರ್‌ಬಾದ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬೆಂಗಳೂರಿನ ಜಿ.ಕೆ.ಕೇಶವಮೂರ್ತಿ(44) ಎಂಬುವರ ವಿಜಯ್ ಫಾಲ್ಕನ್ ಎಂಬ ಕುದುರೆಯನ್ನು ಅದರ ಟ್ರೈನರ್ ಜೋಸೆಫ್ ಬಿ.ಆವ್ಲೆ ಎಂಬಾತ ಮಾರಾಟ ಮಾಡಿದ್ದಾನೆ ಎಂದು ಆರೋಪಿಸಲಾಗಿದೆ.

ವಿವರ: ರಿಯಲ್ ಎಸ್ಟೇಟ್ ಉದ್ಯಮಿಯಾದ ಜಿ.ಕೆ. ಕೇಶವಮೂರ್ತಿ ಅವರು ವಿಜಯ್ ಎಂಪೈರ್ ಫಾರ್ಮ್ಸ್ ಪ್ರೈ.ಲಿ. ಎಂಬ ಹೆಸರಿನಲ್ಲಿ ಮೈಸೂರು ರೇಸ್ ಕ್ಲಬ್‌ಗೆ 9 ಕುದುರೆಗಳನ್ನು ರಿಜಿಸ್ಟರ್ ಮಾಡಿದ್ದಾರೆ. ಅವುಗಳ ಪೈಕಿ ವಿಜಯ್ ಫಾಲ್ಕನ್ (ಅಬ್ಸಲ್ಯೂಟ್ ಸ್ಟಾರ್) ಎಂಬ 4 ವರ್ಷದ ಕುದುರೆಯನ್ನು ಮುಂಬೈನ ಕಂಪನಿಯೊಂದರಿಂದ ಕಳೆದ ಮಾ.29ರಂದು ಖರೀದಿ ಮಾಡಿ ಅದನ್ನು ಏ.27ರಂದು ರೇಸ್ ಕ್ಲಬ್‌ಗೆ ರಿಜಿಸ್ಟರ್ ಮಾಡಿಸಿದ್ದರು. ಈ ವೇಳೆ ಜೋಸೆಫ್ ಬಿ.ಆವ್ಲೆ ಎಂಬ ಟ್ರೈನರ್‌ಗೆ ಕುದುರೆಯನ್ನು ಟ್ರೈನ್ ಮಾಡಲು ನೀಡಿದ್ದರು. ಆತನಿಗೆ ಕುದುರೆಯನ್ನು ಎಂಟ್ರಿ ಮತ್ತು ಸ್ಕ್ಯಾಚ್ ಮಾಡುವ ಫಾರಂ ನೀಡಿ ಅದಕ್ಕೆ ಕೇಶವಮೂರ್ತಿ ಸಹಿ ಮಾಡಿ, ಸೀಲ್ ಹಾಕಿ ಕೊಟ್ಟಿದ್ದರು.



ಈ ನಡುವೆ ಎಂ.ಅರವಿಂದರಾಜ್ ಎಂಬುವರು ಸದರಿ ಕುದುರೆಯನ್ನು ಖರೀದಿ ಮಾಡಲು ಕೇಶವಮೂರ್ತಿಯವರ ಜೊತೆ ಮಾತುಕತೆ ನಡೆಸಿದ್ದು, ಅವರೂ ಕೂಡ ಕುದುರೆ ಮಾರಾಟ ಮಾಡಲು ಒಪ್ಪಿಕೊಂಡಿದ್ದರು. ಆದರೆ ಕುದುರೆ ಮಾರಾಟ ವ್ಯವಹಾರಕ್ಕೆ ಸಂಬಂಧಿಸಿದಂತೆ ಸೇಲ್ ಫಾರಂಗೆ ಸಹಿ ಮಾಡಿ ಕೊಟ್ಟಿರಲಿಲ್ಲ.

ಆದರೆ ಡಿ.7ರಂದು ನಡೆಯಲಿದ್ದ ರೇಸ್ ವಿವರಗಳಲ್ಲಿ ವಿಜಯ್ ಫಾಲ್ಕನ್ ಕುದುರೆಯ ಮಾಲೀಕರ ಜಾಗದಲ್ಲಿ ಕೇಶವಮೂರ್ತಿ ಅವರ ಹೆಸರಿನ ಬದಲು ಅರವಿಂದರಾಜ್ ಹೆಸರು ಇದ್ದುದನ್ನು ಗಮನಿಸಿ ರೇಸ್ ಕ್ಲಬ್ ಅವರನ್ನು ವಿಚಾರಿಸಿದಾಗ ಸದರಿ ಕುದುರೆಯನ್ನು ಮಾರಾಟ ಮಾಡುವ ಅಧಿಕಾರವನ್ನು ಟ್ರೈನರ್ ಜೋಸೆಫ್ ಬಿ.ಆವ್ಲೆ ಅವರಿಗೆ ನೀಡಿ ಸಹಿ ಹಾಕಿ ಕೊಟ್ಟಿರುವ ದಾಖಲೆಗಳು ದೊರೆತಿವೆ ಎಂದು ದೂರಿನಲ್ಲಿ ತಿಳಿಸಿರುವ ಕೇಶವಮೂರ್ತಿ ಕುದುರೆ ಮಾರಾಟ ಮಾಡಲು ಅನುಮತಿ ನೀಡಿರುವ ಕಾಲಂನಲ್ಲಿರುವ ಸಹಿ ನನ್ನದಲ್ಲ. ಟ್ರೈನರ್ ಜೋಸೆಫ್ ಬಿ.ಆವ್ಲೆ ನನ್ನ ಸಹಿಯನ್ನು ನಕಲು ಮಾಡಿ ಕುದುರೆಯನ್ನು ಅರವಿಂದರಾಜ್ ಅವರಿಗೆ ಮಾರಾಟ ಮಾಡಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ನಜರ್‌ಬಾದ್ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಮನೆಯಲ್ಲಿದ್ದ 200 ಗ್ರಾಂ ತೂಕದ ಚಿನ್ನಾಭರಣ ಕಳವು: ಭಾಮೈದನ ಮೇಲೆ ಅನುಮಾನ

ಮೈಸೂರು,ಡಿ.25–ವ್ಯಕ್ತಿಯೊಬ್ಬರ ಮನೆಯಲ್ಲಿಟ್ಟಿದ್ದ 200 ಗ್ರಾಂ ತೂಕದ ಚಿನ್ನಾಭರಣ ಕಳುವಾಗಿದ್ದು, ಅವರ ಭಾಮೈದನ ಮೇಲೆ ಸಂಶಯ ವ್ಯಕ್ತಪಡಿಸಿ, ಪೊಲೀಸರಿಗೆ ದೂರು ಸಲ್ಲಿಸಲಾಗಿದೆ. ಮೈಸೂರು ತಾಲೂಕು ಹಡಜನ ಗ್ರಾಮದ ಮಹೇಶ್(32) ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಇವರ ಮನೆಯ ರೂಂನಲ್ಲಿರುವ ಅಟ್ಟದ ಮೇಲೆ ಚಿನ್ನಾಭರಣವಿರುವ ಬ್ಯಾಗ್ ಅನ್ನು ಇಡಲಾಗಿತ್ತು. ಇವರ ಭಾಮೈದ ಮೈಸೂರು ತಾಲೂಕು ಶ್ರೀನಿವಾಸಪುರ ಗ್ರಾಮದ ರವಿ ಎಂಬಾತ ಅ.21ರಿಂದ ನ.21ರವರೆಗೆ ಇವರ ಮನೆಗೆ ಬಂದು ಹೋಗುತ್ತಿದ್ದ. ಆ ಪೈಕಿ 6 ದಿನ ಒಡವೆ ಇಟ್ಟಿದ್ದ ರೂಂನಲ್ಲಿ ಮಲಗುತ್ತಿದ್ದ ಎಂದು ದೂರಿನಲ್ಲಿ ತಿಳಿಸಿದ್ದು, ಅಟ್ಟದ ಮೇಲಿಟ್ಟಿದ್ದ ಚಿನ್ನಾಭರಣ ಕಳುವಾಗಿದ್ದು, ಈತನೇ ಅದನ್ನು ಕಳವು ಮಾಡಿರಬಹುದು ಎಂಬ ಸಂಶಯವಿರುವುದಾಗಿ ದೂರಿನಲ್ಲಿ ತಿಳಿಸಲಾಗಿದೆ. ಪ್ರಕರಣ ದಾಖಲಿಸಿಕೊಂಡಿರುವ ಮೈಸೂರು ದಕ್ಷಿಣ ಗ್ರಾಮಾಂತರ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ವಿದೇಶಿ ಪ್ರವಾಸಿಗರ ಐ ಫೋನ್ ಕಿತ್ತುಕೊಂಡು ಪರಾರಿಯಾದ ಖದೀಮರು

ಮೈಸೂರು, ಡಿ.25–ವಿದೇಶಿ ಪ್ರವಾಸಿಯೊಬ್ಬರ ಐ–ಫೋನ್ ಅನ್ನು ಖದೀಮರು ಕಿತ್ತುಕೊಂಡು ಪರಾರಿಯಾದ ಘಟನೆ ಮೈಸೂರಿನ ಹೈವೇ ಸರ್ಕಲ್ ಬಳಿ ಜೋಡಿ ತೆಂಗಿನಮರ ರಸ್ತೆಯಲ್ಲಿ ನಡೆದಿದೆ. ಮೈಸೂರು ಪ್ರವಾಸಕ್ಕೆ ಆಗಮಿಸಿದ್ದ ಲಂಡನ್‌ನ ಶಿಕ್ಷಕಿ ಸ್ಟೆಫಾನೆ ಥಂಗೂರ್(28) ಅವರು ಬಂಬೂ ಬಜಾರ್‌ನಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದರು. ಡಿ.22ರಂದು ಸಂಜೆ 5.27ರ ಸುಮಾರಿನಲ್ಲಿ ಜೋಡಿ ತೆಂಗಿನಮರ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಬೈಕ್‌ನಲ್ಲಿ ಬಂದ ಇಬ್ಬರು ಖದೀಮರು ಅವರ ಕೈಯ್ಯಲ್ಲಿದ್ದ ಐ–ಫೋನ್ ಅನ್ನು ಕಿತ್ತುಕೊಂಡು ಪರಾರಿಯಾಗಿದ್ದಾರೆ. ಈ ಸಂಬಂಧ ನರಸಿಂಹರಾಜ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್‌ಗೆ ಟಿಪ್ಪರ್ ಡಿಕ್ಕಿ; ಸ್ಥಳದಲ್ಲೇ ಸವಾರ ಸಾವು

ಮೈಸೂರು, ಡಿ.25–ಬೈಕ್‌ಗೆ ಟಿಪ್ಪರ್ ಡಿಕ್ಕಿ ಹೊಡೆದ ಪರಿಣಾಮ ಸವಾರ ಸಾವನ್ನಪ್ಪಿದ ಘಟನೆ ಇಲವಾಲದ ಕೆಆರ್‌ಎಸ್ ರಸ್ತೆಯಲ್ಲಿ ಸಂಭವಿಸಿದೆ. ಮೈಸೂರು ತಾಲೂಕು ಚಿಕ್ಕನಹಳ್ಳಿ ಗ್ರಾಮದ ಅನಿಲ್ ಕುಮಾರ್(26) ಅಪಘಾತದಲ್ಲಿ ಮೃತಪಟ್ಟವನಾಗಿದ್ದು, ಡಿ.22ರಂದು ಸಂಜೆ 6.45ರ ಸುಮಾರಿನಲ್ಲಿ ಇಲವಾಲದ ಕೆಆರ್‌ಎಸ್ ರಸ್ತೆಯಲ್ಲಿರುವ ಗಣಪತಿ ದೇವಸ್ಥಾನದ ಬಳಿ ಈತ ತೆರಳುತ್ತಿದ್ದ ರಾಯಲ್ ಎನ್‌ಫೀಲ್ಡ್ ಬೈಕ್‌ಗೆ (ಕೆಎ 09 ಜೆಇ 2240) ಟಿಪ್ಪರ್ ಡಿಕ್ಕಿ ಹೊಡೆದ ಪರಿಣಾಮ ಆತ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಅಪಘಾತದ ನಂತರ ಟಿಪ್ಪರ್ ಸಮೇತ ಅದರ ಚಾಲಕ ಪರಾರಿಯಾಗಿದ್ದಾನೆ. ಈ ಸಂಬಂಧ ಇಲವಾಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಂಗಕರ್ಮಿ, ಸಾಹಿತಿ ಲಿಂಗದೇವರು ಹಳೆಮನೆ ಸ್ಮರಣಾರ್ಥ ಹಿತ ಚಿಂತಕ ಪುಸ್ತಕ ಬಿಡುಗಡೆ ಕಾರ್ಯಕ್ರಮ

ಇತಿಹಾಸ ತಿಳಿಯದವರೇ ಇತಿಹಾಸ ಕುರಿತು ಮಾತನಾಡುತ್ತಿದ್ದಾರೆ

ಹಿರಿಯ ರಂಗಕರ್ಮಿ ಪ್ರೊ. ಸಿ.ಬಸವಲಿಂಗಯ್ಯ ಬೇಸರ

ಮೈಸೂರು,ಡಿ.25(ಆರ್‌ಕೆಬಿ)–ಇತಿಹಾಸ ತಿಳಿಯದವರೇ ಇಂದು ಇತಿಹಾಸದ ಬಗ್ಗೆ ಮಾತನಾಡುತ್ತಿದ್ದಾರೆ. ಭಾಷೆ, ಮತ, ಧರ್ಮಗಳ ವಿರುದ್ಧ ಎತ್ತಿ ಕಟ್ಟಿ ದ್ವೇಷ ಹುಟ್ಟು ಹಾಕುತ್ತಿದಾರೆ. ಆಳುವ ಪ್ರಭುತ್ವವೇ ಕೊಲ್ಲುವ, ದ್ವೇಷವನ್ನು ಜನಗಳ ಮೇಲೆ ಹೇರುತ್ತಿದೆ. ಪ್ರಜೆಗಳನ್ನು ಭ್ರಷ್ಟರನ್ನಾಗಿ ಮಾಡುತ್ತಿದ್ದಾರೆ. ಹೀಗಾಗಿ ಪ್ರಜಾಪ್ರಭುತ್ವ ಇಂದು ಅಪಾಯ ಸ್ಥಿತಿಗೆ ತಲುಪಿದೆ ಎಂದು ಹಿರಿಯ ರಂಗಕರ್ಮಿ ಪ್ರೊ.ಸಿ.ಬಸವಲಿಂಗಯ್ಯ ಇಂದಿಲ್ಲಿ ಆತಂಕ ವ್ಯಕ್ತಪಡಿಸಿದರು.

ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ ಆಯೋಜಿಸಿದ್ದ ರಂಗಭೂಮಿ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ ಲಿಂಗದೇವರು ಹಳೆಮನೆ ಸ್ಮರಣಾರ್ಥ 'ಹಿತ ಚಿಂತಕ' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹೊಸ ಮೌಲ್ಯಗಳ ಬದಲಿಗೆ ಇಂದು ಹಳೇ ಮೌಲ್ಯಗಳತ್ತ ದೇಶ ಹೋಗುತ್ತಿದೆ. ಪ್ರಜಾಪ್ರಭುತ್ವದ ಪ್ರಭುಗಳೇ ಗುಲಾಮರಾಗುವ ಸ್ಥಿತಿ ಇದೆ. ಕವಿಗಳು, ಚಿಂತಕರು, ಕಲಾವಿದರು ಬಳಸುವ ಪದಗಳನ್ನು ಎಚ್ಚರದಿಂದ ಬಳಸದಿದ್ದರೆ ನಮ್ಮನ್ನು ಗುಲಾಮರನ್ನಾಗಿ ಮಾಡುತ್ತಾರೆ ಎಂದು ಬೇಸರ ವ್ಯಕ್ತಪಡಿಸಿದರು.



ಮೈಸೂರಿನ ಕಿರುರಂಗಮಂದಿರದಲ್ಲಿ ರಂಗಕರ್ಮಿ, ಸಾಹಿತಿ ಲಿಂಗದೇವರು ಹಳೆಮನೆ ಸ್ಮರಣಾರ್ಥ 'ಹಿತ ಚಿಂತಕ' ಪುಸ್ತಕವನ್ನು ನಾಟಕಕಾರ ನ.ರತ್ನ ಬಿಡುಗಡೆ ಮಾಡಿದರು. ಚಿತ್ರದಲ್ಲಿ ರಂಗಕರ್ಮಿಗಳಾದ ಪ್ರೊ.ಸಿ.ಬಸವಲಿಂಗಯ್ಯ, ಹೆಚ್.ಎಸ್.ಉಮೇಶ್, ಪ್ರಕಾಶಕ ಯು.ಎಸ್.ಮಹೇಶ್, ನಂದಾ ಹಳೆಮನೆ, ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ ಕಾರ್ಯದರ್ಶಿ ಕೃಷ್ಣ ಜನಮನ ಇನ್ನಿತರರನ್ನು ಕಾಣಬಹುದು.

ಇತಿಹಾಸ ತಿಳಿಯದವರು ಇತಿಹಾಸ ಸೃಷ್ಟಿಸಲಾರರು ಎಂದು ಡಾ.ಬಿ.ಆರ್.ಅಂಬೇಡ್ಕರ್ ಅವರ ಮಾತನ್ನು ಉಲ್ಲೇಖಿಸಿದ ಅವರು, ಇಂದು ಅದಕ್ಕೆ ತದ್ವಿರುದ್ಧವಾಗಿ ನಡೆದುಕೊಳ್ಳಲಾಗುತ್ತಿದೆ. ಇತಿಹಾಸ ತಿಳಿಯದವರೇ ಇತಿಹಾಸದ ಬಗ್ಗೆ ಮಾತನಾಡುತ್ತಿದ್ದಾರೆ. ಈ ದೇಶದ ಸಂವಿಧಾನದಲ್ಲಿ ಮೇಲು–ಕೀಳಿಲ್ಲದೆ ಎಲ್ಲಾ ಧರ್ಮಗಳಿಗೂ ಸಮಾನ ಅವಕಾಶವಿದೆ. ಆದರೆ ದೇಶದ ಧರ್ಮ ಚಕ್ರ ಹಿಂದಕ್ಕೆ ತಿರುಗುತ್ತಿದೆ. ಅವರ ವಿರುದ್ಧ ನಾವು ಮಾತನಾಡಿದರೆ ಬೆದರಿಕೆ ಕರೆಗಳು ಬರುತ್ತವೆ. ಭಯ ಪಡುವ ಸ್ಥಿತಿ ಬಂದಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಬಹು ಭಾಷೆಗಳ, ಬಹು ಜನಾಂಗಗಳನ್ನು ಹೊಂದಿರುವ ನಮ್ಮ ದೇಶವನ್ನು ಮುಂದಿನ ಪೀಳಿಗೆಗೆ ಉಳಿಸಬೇಕಾಗಿದೆ. ಚುನಾವಣೆ ಹತ್ತಿರ ಬರುತ್ತಿದ್ದಂತೆ ಚೂರಿ, ಜಾತಿ, ಧರ್ಮ ಮುಂದೆ ಬರುತ್ತವೆ. ಎಲ್ಲರೂ ಬಹಳ ಎಚ್ಚರಿಕೆಯಿಂದ ಇರಬೇಕಾಗುತ್ತದೆ ಎಂದು ಬಸವಲಿಂಗಯ್ಯ ಹೇಳಿದರು.

ಲಿಂಗದೇವರು ಹಳೆಮನೆ ಭಾಷಾ ತಜ್ಞ, ಸೃಜನಾತ್ಮಕ ಬರಹಗಾರರಾಗಿದ್ದರು. ಅಂದರೆ ಅವರ ಓದಿನ ವಿಸ್ತಾರ ಅಷ್ಟೊಂದು ಆಳವಾಗಿತ್ತು. ದಮನಿತರ, ಜನಪರವಾದ ದನಿ ಎತ್ತಿದ ಮಾನವತಾವಾದಿ. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಬರವಣಿಗೆ ಮತ್ತು ಚಿಂತನೆಗಳಲ್ಲಿ ಲಿಂಗದೇವರು ಹಳೆಮನೆ ಅಳವಡಿಸಿಕೊಂಡಿದ್ದರು. ಅಂಥವರ ಸ್ಮರಣಾರ್ಥ 'ಹಿತ ಚಿಂತಕ' ಪುಸ್ತಕ ಹಳೆಮನೆಯವರನ್ನು ಕುರಿತು ಉತ್ತಮ ಮಾಹಿತಿಗಳನ್ನು ಒಳಗೊಂಡಿದೆ ಎಂದು ತಿಳಿಸಿದರು. ಇದಕ್ಕೂ ಮುನ್ನ ನಾಟಕಕಾರ ನ.ರತ್ನ ಅವರು 'ಹಿತ ಚಿಂತಕ' ಪುಸ್ತಕವನ್ನು ಬಿಡುಗಡೆಗೊಳಿಸಿದರು. ಕಾರ್ಯಕ್ರಮದಲ್ಲಿ ರಂಗಕರ್ಮಿ ಹೆಚ್.ಎಸ್.ಉಮೇಶ್, ಲಿಂಗದೇವರು ಹಳೆಮನೆ ಅವರ ಪತ್ನಿ ನಂದಾ ಹಳೆಮನೆ, ಪ್ರಕಾಶಕ ಯು.ಎಸ್.ಮಹೇಶ್, ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ ಕಾರ್ಯದರ್ಶಿ ಕೃಷ್ಣ ಜನಮನ ಉಪಸ್ಥಿತರಿದ್ದರು.

ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಸ್ಮರಣೆ



ಮೈಸೂರು, ಡಿ.25–ಮಾಜಿ ಪ್ರಧಾನಿ, ಭಾರತರತ್ನ ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನವನ್ನು ಬಿಜೆಪಿ ಚಾಮುಂಡೇಶ್ವರಿ ನಗರ ಮಂಡಲದಿಂದ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ವಾಜಪೇಯಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದ ನಂತರ ವಾಜಪೇಯಿ ಅವರ ಆಡಳಿತದ ಸಂದರ್ಭದಲ್ಲಿ ದೇಶದ ಜನತೆ ಹಾಗೂ ಪಕ್ಷಕ್ಕೆ ನೀಡಿದ ಕೊಡುಗೆಗಳ ಬಗ್ಗೆ ಸ್ಮರಿಸಲಾಯಿತು.

ಈ ಸಂದರ್ಭದಲ್ಲಿ ಕ್ಷೇತ್ರದ ಅಧ್ಯಕ್ಷ ಬಿ.ಎಂ.ರಘು, ಮುಖಂಡರಾದ ಎಂ.ವಿ. ಧನಂಜಯ, ರೇವಣ್ಣ, ಹೆಚ್.ಜಿ.ರಾಜಮಣಿ, ಈರೇಗೌಡ, ರಾಕೇಶ್‌ಭಟ್, ಪ್ರತಾಪ್, ವಿಜಯ ಮಂಜುನಾಥ್, ಹಿರಿಯಣ್ಣ, ರಮೇಶ್ ರಾಂಪುರೆ, ಶಿವಕುಮಾರ್, ಮಧು, ಗೀತಾ, ತಿಮ್ಮೇಗೌಡ, ಗೋಪಾಲಕೃಷ್ಣ, ರಮಾಬಾಯಿ, ಚಂದ್ರಶೇಖರ, ನಾಗೇಶ್, ಶಾಂತರಂ, ಹೇಮಲತಾ, ಪದ್ಮಾವತಿ, ಸುಮನ್, ಕಲಾವತಿ, ರಾಧಾಮಣಿ, ಕುಮಾರ್, ನಂಜಪ್ಪ, ರಾಮಕೃಷ್ಣಪ್ಪ, ಗಗನ್, ಸಾಗರ್, ಸೂರ್ಯ, ಅಪ್ಪು, ರಾಜೇಶ್, ನೂರಾರು ಕಾರ್ಯಕರ್ತರು ಉಪಸ್ಥಿತರಿದ್ದರು.



ಮೈಸೂರು ನಗರ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಹಾಗೂ ವಿದ್ಯಾರಣ್ಯ ಆಸ್ಪತ್ರೆ ಸಹಯೋಗದೊಂದಿಗೆ ಅಟಲ್ ಬಿಹಾರಿ ವಾಜಪೇಯಿ ಜನ್ಮದಿನದ ಪ್ರಯುಕ್ತ ಬನ್ನಿಮಂಟಪ ಹುಡ್ಕೋ ಕಾಲೋನಿ (ಎಲ್ಲಮ್ಮ ತಾಯಿ) ದೇವಸ್ಥಾನದ ಸಮೀಪ ಸಾರ್ವಜನಿಕರಿಗೆ ಆರೋಗ್ಯ ತಪಾಸಣೆ ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ಓಬಿಸಿ ಮೋರ್ಚಾ ನಗರಾಧ್ಯಕ್ಷ ಮಂಜುನಾಥ್, ಉಪಾಧ್ಯಕ್ಷ ಮಾದೇವ್, ವಕೀಲ ಶಿವರಾಜ್, ಪ್ರಧಾನ ಕಾರ್ಯದರ್ಶಿಗಳಾದ ಮಣಿರತ್ನಂ, ಗೋಪಾಲ್, ಸೋಶಿಯಲ್ ಮೀಡಿಯಾ ಸಂಚಾಲಕರಾದ ಜೀವನ್, ಮಂಜುನಾಥ್ ಹಾಗೂ ಮುಖಂಡರು ಉಪಸ್ಥಿತರಿದ್ದರು.



ಭಾರತೀಯ ರಿಸರ್ವ್ ಬ್ಯಾಂಕ್ ನೋಟು ಮುದ್ರಣ ಬ್ರಾಹ್ಮಣ ಉದ್ಯೋಗಿಗಳ ಸಂಘ ವೇದಮಾತೆ ಶ್ರೀ ಗಾಯತ್ರಿ ವೃಂದದ 2023ರ ದಿನದರ್ಶಿನಿಯನ್ನು ವೃಂದದ ಗೌರವಾಧ್ಯಕ್ಷರೂ ಆದ ಶಾಸಕ ಎಸ್.ಎ.ರಾಮದಾಸ್ ಬಿಡುಗಡೆ ಮಾಡಿದರು. ಈ ವೇಳೆ ವಾಸು, ರಾಮಚಂದ್ರ, ಶ್ರೀಪತಿ, ಮಧುಸೂದನ್, ಮುರಳಿ, ದಿನೇಶ್, ಬಾಲಗೋಪಾಲ್ ಇನ್ನಿತರರು ಉಪಸ್ಥಿತರಿದ್ದರು.

ಅನಧಿಕೃತ ಕೇಬಲ್ ವೈರ್‌ಗಳ ತೆರವಿಗೆ ಚೆಸ್ಕಾಂ ಸೂಚನೆ




ಮೈಸೂರು,ಡಿ.25– ಚೆಸ್ಕಾಂ ವತಿಯಿಂದ ವಿ.ವಿ ಮೊಹಲ್ಲಾ ಕಾರ್ಯ ಮತ್ತು ಪಾಲನಾ ವಿಭಾಗ ವ್ಯಾಪ್ತಿಯ ವಿ.ವಿ ಮೊಹಲ್ಲಾ, ಕುವೆಂಪುನಗರ, ಹೂಟಗಳ್ಳಿ ಮತ್ತು ರಾಮಕೃಷ್ಣನಗರ ಉಪ ವಿಭಾಗಗಳಲ್ಲಿನ ಹಲವಾರು ಪ್ರದೇಶಗಳಲ್ಲಿ ನಿಗಮದ ವಿದ್ಯುತ್ ಕಂಬಗಳನ್ನು ಬಳಸಿ ಅವುಗಳ ಮೇಲೆ ಡಿಶ್ ಕೇಬಲ್ ಹಾಗೂ ನೆಟ್‌ವರ್ಕ್ ಕೇಬಲ್‌ಗಳನ್ನು ಅನಧಿಕೃತವಾಗಿ ಹಾಗೂ ಸರಿಯಾದ ಕ್ರಮ ಅನುಸರಿಸದೇ ಅವೈಜ್ಞಾನಿಕ ರೀತಿಯಲ್ಲಿ ಎಳೆದಿರುವುದನ್ನು ತೆರವುಗೊಳಿಸುವಂತೆ ಚೆಸ್ಕಾಂ ಸೂಚಿಸಿದೆ.

ಈ ರೀತಿ ಡಿಶ್ ಕೇಬಲ್ ಮತ್ತಿತರೆ ಕೇಬಲ್‌ಗಳನ್ನು ಸರಿಯಾದ ರೀತಿಯಲ್ಲಿ ಎಳೆಯದೇ ಇರುವುದರಿಂದ ವಿದ್ಯುತ್ ಅಪಘಾತಗಳು ಘಟಿಸುವ ಸಂಭವವಿರುತ್ತದೆ. ಇದರಿಂದ ಸಾರ್ವಜನಿಕ ಆಸ್ತಿ–ಪಾಸ್ತಿಗಳಿಗೆ ಹಾನಿಯುಂಟಾಗಬಹುದಾಗಿರುತ್ತದೆ. ಇಂತಹ ಘಟನೆಗಳು ಸಂಭವಿಸಿದಲ್ಲಿ ಚೆಸ್ಕಾಂ ಜವಾಬ್ದಾರಿಯಾಗಿರುವುದಿಲ್ಲ. ಕೇಬಲ್ ನೆಟ್‌ವರ್ಕ್ ಏಜೆನ್ಸಿಗಳೇ ನೇರ ಜವಾಬ್ದಾರಿ ಎಂದು ಎಚ್ಚರಿಸಲಾಗಿದೆ. ಈ ಬಗ್ಗೆ ಹಿಂದೆಯು ಸೂಚಿಸಿದ್ದರೂ ಹಲವಾರು ಡಿಶ್ ಕೇಬಲ್ ನೆಟ್‌ವರ್ಕ್ ಸಂಸ್ಥೆಗಳು ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಆದುದರಿಂದ ಸಂಬಂಧಪಟ್ಟ ಕೇಬಲ್ ಆಪರೇಟರ್, ನೆಟ್‌ವರ್ಕ್ ಸಂಸ್ಥೆಗಳು ಕೂಡಲೇ ಈ ಬಗ್ಗೆ ತುರ್ತು ಕ್ರಮವಹಿಸಿ ಚೆಸ್ಕಾಂ ವಿದ್ಯುತ್ ಕಂಬಗಳನ್ನು ಬಳಸಿ ಎಳೆಯಲಾದ ಕೇಬಲ್‌ಗಳನ್ನು ಪರಿವೀಕ್ಷಣೆ ನಡೆಸಿ ತಪಶೀಲು ಪಟ್ಟಿ (Pole Inventory) ಹಾಗೂ ಪ್ರತಿ ಕಂಬಗಳಲ್ಲಿ ಎಳೆದಿರುವ ತಮ್ಮ ಸಂಸ್ಥೆಯ ಕೇಬಲ್ ಸಂಖ್ಯೆಗಳನ್ನು ಗುರುತಿಸಿ ಚೆಸ್ಕಾಂನಿಂದ ನೀಡಲಾಗುವ ಮಂಜೂರಾತಿ ಆದೇಶದಂತೆ ನಿಯಮಾನುಸಾರ ಕ್ರಮವಹಿಸಿ ತಮ್ಮ ನೆಟ್‌ವರ್ಕ್ ಕೇಬಲ್‌ಗಳನ್ನು ಮುಂದಿನ 7 ದಿನಗಳೊಳಗಾಗಿ ಸರಿಪಡಿಸಿಕೊಳ್ಳುವುದು. ಅನಧಿಕೃತವಾಗಿ ಕೇಬಲ್‌ಗಳನ್ನು ಎಳೆದಿದ್ದಲ್ಲಿ ಕೂಡಲೇ ಸಂಬಂಧಪಟ್ಟ ಉಪವಿಭಾಗಗಳನ್ನು ಸಂಪರ್ಕಿಸಿ, ನಿಗಮದ ನಿಯಮಾನುಸಾರ ಮಂಜೂರಾತಿ ಪಡೆದು ಹಣವನ್ನು ಪಾವತಿಸುವುದು. ತಪ್ಪಿದಲ್ಲಿ ಚೆಸ್ಕಾಂ ವಿ.ವಿ ಮೊಹಲ್ಲಾ ವಿಭಾಗದಿಂದಲೇ ಪುನಃ ಯಾವುದೇ ಮುನ್ಸೂಚನೆ ನೀಡದೇ ಅಂತಹ ಕೇಬಲ್‌ಗಳನ್ನು ಮತ್ತು ಅನಧಿಕೃತ ಕೇಬಲ್ ನೆಟ್‌ವರ್ಕ್‌ಗಳನ್ನು ತೆರವುಗೊಳಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಎಂದು ಚೆಸ್ಕಾಂ ಪ್ರಕಟಣೆ ತಿಳಿಸಿದೆ.



ಮೈಸೂರು ಚಾಮುಂಡಿಪುರಂನ ಆರಾಧ್ಯ ಮಹಾಸಭಾ ವತಿಯಿಂದ ಭಾನುವಾರ ದಿನದರ್ಶಿಕೆ ಬಿಡುಗಡೆ ಮಾಡಲಾಯಿತು. ಚಿತ್ರದಲ್ಲಿ ಆರಾಧ್ಯ ಮಹಾಸಭಾ ಅಧ್ಯಕ್ಷ ಹಾಗೂ ವಕೀಲ ಪಿ.ನಾಗಭೂಷಣ ಆರಾಧ್ಯ, ಭಾರತೀಯ ಜ್ಯೋತಿರ್ವಿಜ್ಞಾನ ಸಂಶೋಧನಾ ಸಂಸ್ಥೆಯ ಅಧ್ಯಕ್ಷ ಸಿದ್ಧಾಂತಿ ಕೆ.ಜಿ.ಪುಟ್ಟಹೊನ್ನಯ್ಯ, ಸಂಸ್ಕೃತ ಉಪನ್ಯಾಸಕ ನಾಗಭೂಷಣ ಆರಾಧ್ಯ, ಉಪಾಧ್ಯಕ್ಷ ಸೋಮಶೇಖರ ಆರಾಧ್ಯ ಅವರನ್ನು ಕಾಣಬಹುದು.



ಮೈಸೂರಿನ ವಿಜಯವಿಠ್ಠಲ ಶಾಲೆಯಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಆಶ್ರಯದಲ್ಲಿ ಪರಿಷದ್‌ನ ಆನ್‌ಲೈನ್ ವೆಬಿನಾರ್‌ನ 150ರ ಸಂಭ್ರಮ ಕಾರ್ಯಕ್ರಮ ನಡೆಯಿತು. ಸಮಾರಂಭದಲ್ಲಿ ಕೆ.ರಘುಶೆಟ್ಟಿಯವರ ಉತ್ತಂಗ ಹಾಗೂ ಇತರೆ ಕಥೆಗಳು ಮತ್ತು ಶ್ರೀಮತಿ ಚಂದ್ರಕಲಾ ಕುಮಾರ್ ಅವರ ಹೇಮಂತ ಕವನ ಸಂಕಲನಗಳನ್ನು ಪರಿಷದ್‌ನ ವಲಯ ಪ್ರಮುಖ್ ಡಾ.ವಿ.ರಂಗನಾಥ್ ಬಿಡುಗಡೆ ಮಾಡಿದರು. ಕಾರ್ಯಕ್ರಮದಲ್ಲಿ ಪರಿಷದ್‌ನ ರಾಜ್ಯ ಪ್ರಧಾನ ಕಾರ್ಯದರ್ಶಿ ರಘುನಂದನ ಭಟ್, ವಿಜಯವಿಠ್ಠಲ ಶಾಲೆಯ ಕಾರ್ಯದರ್ಶಿ ವಾಸುದೇವ ಭಟ್, ಪರಿಷದ್‌ನ ಜಿಲ್ಲಾ ಅಧ್ಯಕ್ಷ ಪ್ರೊ. ರಾಮರತನ್, ಲೇಖಕರಾದ ರಘುಶೆಟ್ಟಿ, ಚಂದ್ರಕಲಾ ಕುಮಾರ್, ಗಾಯತ್ರಿ ಸುಂದರೇಶ್ ಇನ್ನಿತರರಿದ್ದರು.

ನಿಧನ



ಸಿ.ದೊಡ್ಡಯ್ಯ

ಮೈಸೂರು, ಡಿ.25– ಮೈಸೂರಿನ ಗಾಯತ್ರಿಪುರಂ ನಿವಾಸಿ ಹಾಗೂ ನಿವೃತ್ತ ಕೆಎಂಎಫ್ ಹಾಲಿನ ಡೈರಿ ಅಧಿಕಾರಿ ಸಿ.ದೊಡ್ಡಯ್ಯ (70) ಶನಿವಾರ ನಿಧನರಾದರು. ಮೃತರು ಮಾಜಿ ಮೇಯರ್ ಪುಷ್ಪಲತಾ ಚಿಕ್ಕಣ್ಣ ಅವರ ಚಿಕ್ಕಪ್ಪ. ಇವರು ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ.

ಇವರ ಅಂತ್ಯಕ್ರಿಯೆ ಶನಿವಾರ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಸಿ.ದೊಡ್ಡಯ್ಯ ಅವರು ಮೈಸೂರು ಹಾಗೂ ಗುಲ್ಬರ್ಗಾದಲ್ಲಿ ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.12.2022 ಸೋಮವಾರ, ಮಳೆ ನಕ್ಷತ್ರ: ಮೂಲ, 16.12.2022ರಿಂದ 29.12.2022 ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಶ್ರವಣ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ– ಜಿ.ಎಸ್. ಗಣೇಶ್, 6.15 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: 'ನೃತ್ಯ ಶಿಲ್ಪ ಯಾತ್ರೆ', ಲೇಖನ ಮತ್ತು ಪ್ರಸ್ತುತಿ–ಡಾ.ಬಿ.ಎನ್.ಮನೋರಮ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ–ಮತ್ತೂರು ಕುಮಾರಸ್ವಾಮಿ, ಜಿ. ಪುಷ್ಪಲತಾ, ನಿತಿನ್ ರಾಜಾರಾಂ ಶಾಸ್ತ್ರಿ, ವ್ಯಾಖ್ಯಾನ– ಡಾ.ಸಿ. ನಾಗಣ್ಣ, 9.00 ನೆನಪಿನಂಗಳ: ಧ್ವನಿ ಭಂಡಾರದಿಂದ ಆಯ್ದ ಕಾರ್ಯಕ್ರಮಗಳು, 10.00 ಲಯ ಸಂಭ್ರಮ: ಪ್ರಸ್ತುತಿ– ಹೆಚ್.ಎಲ್. ಶಿವಶಂಕರ ಸ್ವಾಮಿ. **ಮಧ್ಯಾಹ್ನ:** 12.30 ದೇವರನಾಮ– ಎಲ್. ಅರ್ಚನಾ, ಸಂಗೀತಾ ಕಟ್ಟಿ ಮತ್ತು ಗಣೇಶ್ ದೇಸಾಯಿ, 12.45 ನಮ್ಮ ಆರೋಗ್ಯ 'ಆಟೋ ಇಮ್ಯೂನ್ ಡಿಸೀಸಸ್' ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಡಾ. ಸಂಗೀತಾ ಕೆ.ಎನ್. ಅವರೊಂದಿಗೆ ಮಾತುಕತೆ, 1.20 ಭಾವಗೀತೆ, 3.00 ಹರಿಯನ್ನರಸಿದ ವನಿತೆಯರು: ಮಹಿಳಾ ಹರಿದಾಸರನ್ನು ಕುರಿತ ಕಾರ್ಯಕ್ರಮ, ರಚನೆ ಮತ್ತು ಪ್ರಸ್ತುತಿ– ಡಾ. ಸುಕನ್ಯಾ ಪ್ರಭಾಕರ್. **ಸಂಜೆ:** 4.00 ಮಹಿಳಾರಂಗ 'ಡಾಕ್ಟರ್ ಸಮಯ' ವಿಷಯ: ಸಂತಾನಹೀನತೆಯ ಆತಂಕ. ಭಾಗವಹಿಸುವವರು ಡಾ.ಜಯಶ್ರೀ, ಪ್ರಸ್ತುತಿ–ಕೆ.ಬಿ. ಮೀನಾ, 4.30 ಝೇಂಕಾರ: ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, 6.50 ಕೃಷಿರಂಗ: ಕಿಸಾನ್ ವಾಣಿ– ಸಮಗ್ರ ಕೃಷಿಯಲ್ಲಿನ ಅನುಭವ ಕುರಿತು ಮಹೇಶ್ ಕುಮಾರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು– ಎಸ್.ಸಿ.ಹೇಮಕುಮಾರ್. **ರಾತ್ರಿ:** 9.30 ಡಾ. ಆರ್.ಎನ್. ಶ್ರೀಲತಾ– ಹಾಡುಗಾರಿಕೆ.

- **ಅಚ್ಯುತ ವಿದ್ಯಾಲಯ:** 23ನೇ ವಾರ್ಷಿಕೋತ್ಸವ, ಮುಖ್ಯಅತಿಥಿ: ಮೈಸೂರು ವಿವಿ ಲಲಿತ ಕಲಾ ಕಾಲೇಜಿನ ನೃತ್ಯ ವಿಭಾಗದ ಮುಖ್ಯಸ್ಥ ಡಾ. ಕೆ.ಕುಮಾರ್, ಅಧ್ಯಕ್ಷತೆ: ಅಚ್ಯುತ ವಿಶ್ವವಿದ್ಯಾಪೀಠಮ್‌ನ ದೃಶ್ಯ ಮತ್ತು ಸಂವಹನ ವಿಭಾಗದ ಅಸಿಸ್ಟೆಂಟ್ ಪ್ರೊಫೆಸರ್ ಡಾ.ರಮ್ಯಾ ಕೆ. ಪ್ರಸಾದ್, ಸ್ಥಳ: ಅಮೃತ ವಿದ್ಯಾಲಯ ಆವರಣ, ಬೋಗಾದಿ 2ನೇ ಹಂತ, ಬೆಳಗ್ಗೆ 9.30ಕ್ಕೆ.
- **ವಿಶ್ವಪ್ರಜ್ಞ ಸೋಷಿಯಲ್ ಅಂಡ್ ಎಜುಕೇಷನಲ್ ಟ್ರಸ್ಟ್:** ಬಹುಮಾನ ವಿರತಣಾ ಸಮಾರಂಭ. ಮುಖ್ಯ ಅತಿಥಿ: ವಿಪಿಇಐ ಕಾರ್ಯದರ್ಶಿ ಎಂ.ಎಸ್. ಮಹೇಂದ್ರ, ಆಡಳಿತ ಮಂಡಳಿ ಸದಸ್ಯ ಎಸ್. ಸತ್ಯಾನಂದ. ಅಧ್ಯಕ್ಷತೆ: ಆರ್.ಕೆ. ರಾಜು, ಆಡಳಿತ ಮಂಡಳಿ ಸದಸ್ಯರು, ಸ್ಥಳ: ಪಿವಿಕೆ ಆಚಾರ್ಯ ಸಭಾ ಭವನ, ಕನಕದಾಸ ನಗರ, ಬೆಳಗ್ಗೆ 9.30ಕ್ಕೆ.
- **ಯೂನಿವರ್ಸಿಟಿ ಕೆರಿಯರ್ ಹಬ್, ಮೈಸೂರು ವಿವಿ ಮತ್ತು ಮಹಾರಾಣಿ ಕಲಾ ಕಾಲೇಜು:** 'ಯಶಸ್ವಿ ಸ್ಪರ್ಧಾ ಪಯಣ' ಮತ್ತು 'ಕಲಿಕೆ ಜೊತೆ ಕೌಶಲ್ಯ. ಸ್ಪರ್ಧಾತ್ಮಕ ಪರೀಕ್ಷೆಯ ಅರಿವು ಕಾರ್ಯಕ್ರಮ. ಉದ್ಘಾಟನೆ: ಮೈಸೂರು ನಗರ ಪಾಲಿಕೆ ಅಡಿಷನಲ್ ಕಮಿಷನರ್ ಎಂ.ಜಿ. ರೂಪ. ಅಧ್ಯಕ್ಷತೆ: ಕಾಲೇಜಿನ ಪ್ರಾಂಶುಪಾಲ ಪ್ರೊ.ಶ್ರೀನಿವಾಸ, ಸ್ಥಳ: ಕಾಲೇಜಿನ ಆವರಣ. ಬೆಳಗ್ಗೆ 10ಕ್ಕೆ.
- **ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು:** ಸೋಲೋ ಪೆಯಿಂಟಿಂಗ್ ಎಕ್ಸ್‌ಪೋ, ನರಸಿಂಹಲು ಪಿ. ಬೈಗೇರಿ ಅವರಿಂದ ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 1ನೇ ಹಂತ, ಬೆಳಗ್ಗೆ 10 ರಿಂದ ಸಂಜೆ 5ರವರೆಗೆ.
- **ಮೈಸೂರು ಅರಮನೆ ಮಂಡಳಿ:** ಫಲಪುಷ್ಪ ಪ್ರದರ್ಶನ ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ. ಬಿ.ಎನ್. ಗಾಯತ್ರಿ ದೇವಿ ಅವರಿಂದ ಶಾಸ್ತ್ರೀಯ ಸಂಗೀತ, ಸಂಜೆ 6ರಿಂದ 6.45ರವರೆಗೆ, ನಿತ್ಯ ನಿರಂತರ ಟ್ರಸ್ಟ್‌ನ ವಿಶೇಷಚೇತನ ಮಕ್ಕಳಿಂದ ನೃತ್ಯ ಸಂಜೆ 7ಕ್ಕೆ. ಹಿನ್ನೆಲೆ ಗಾಯಕರಾದ ವಿಜಯ ಪ್ರಕಾಶ್, ಅನುರಾಧ ಭಟ್, ಲಕ್ಷ್ಮಿ ನಾಗರಾಜ್ ಮತ್ತು ತಂಡದವರಿಂದ ಹಿನ್ನೆಲೆ ಗಾಯನ ಸಂಜೆ 7.30 ರಿಂದ ರಾತ್ರಿ 9.30 ರವರೆಗೆ. ಸ್ಥಳ: ಮೈಸೂರು ಅರಮನೆ ಆವರಣ.
- **ಲಾ ಗೈಡ್:** ಕ್ಯಾಲೆಂಡರ್ ಮತ್ತು ಡೈರಿ ಬಿಡುಗಡೆ: ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರಿಂದ ಸ್ಥಳ: ಏರ್‌ಲೈನ್ ಹೋಟೆಲ್. ಬೆಳಗ್ಗೆ 11ಕ್ಕೆ
- **ಮಹಾಬೋಧಿ ಶಾಲೆ:** 50ನೇ ಶಾಲಾ ವಾರ್ಷಿಕೋತ್ಸವ ಚಿಗುರು ಹಬ್ಬ, ಉಪಸ್ಥಿತ: ಮಹಾಬೋಧಿ ಸೊಸೈಟಿ, ಬೆಂಗಳೂರು ಪ್ರಧಾನ ಕಾರ್ಯದರ್ಶಿ, ಪರಮಪೂಜ್ಯ ಆನಂದ್ ಭಂತೇಜಿ. ಮುಖ್ಯಅತಿಥಿ: ಕರ್ನಾಟಕ ನಾಟಕ ಅಕಾಡೆಮಿ ಮಾಜಿ ಅಧ್ಯಕ್ಷ ಡಾ.ರಾಜಾರಾಂ, ಸ್ಥಳ: ಕಲಾಮಂದಿರ, ಮಧ್ಯಾಹ್ನ 3.30ಕ್ಕೆ
- **ಶ್ರೀ ರಾಘವೇಂದ್ರ ಸ್ವಾಮಿ ಸೇವಾ ಸಮಿತಿ:** ಪದ್ಮ ಪುರಾಣ ಪ್ರವಚನ. ಅನಿರುದ್ಧಾಚಾರ್ ಪಾಂಡುರಂಗಿ ಅವರಿಂದ. ಸ್ಥಳ: ರಾಘವೇಂದ್ರ ಸ್ವಾಮಿ ಮಠ. ಜಯಲಕ್ಷ್ಮೀಪುರಂ ಸಂಜೆ 5ಕ್ಕೆ.
- **ಶ್ರೀ ಆಂಡಾಳ್ ಮಂದಿರಂ:** ಧನುರ್ಮಾಸ ಪೂಜೆ, ವಿದ್ವಾನ್ ಎಂ.ಕೆ. ಶೆಲ್ವ ನಾರಾಯಣ ಅವರಿಂದ ತಿರುಪ್ಪಾವೈ ಪ್ರವಚನ. ಸ್ಥಳ: ಆಂಡಾಳ್ ಮಂದಿರಂ ಆವರಣ. ವಿವಿ ಮೊಹಲ್ಲಾ, ಸಂಜೆ 6 ರಿಂದ 7.30ರವರೆಗೆ.
- **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ:** ವಿದುಷಿ ಬಿ.ಕೆ. ಸೀತಾಲಕ್ಷ್ಮಿ ಅವರಿಂದ ತಿರುಪ್ಪಾವೈ ಪ್ರವಚನ. ಸ್ಥಳ: ದೇವಸ್ಥಾನ ಆವರಣ, ತ್ಯಾಗರಾಜ ರಸ್ತೆ, ಸಂಜೆ 6ಕ್ಕೆ.
- **ಭಾರತೀಯ ನೃತ್ಯ ಪರಿಷತ್:** ನಾಟ್ಯಾಚಾರ್ಯ ಎಂ.ವಿಷ್ಣುದಾಸ್ ಮೆಮೋರಿಯಲ್ 32ನೇ ನೃತ್ಯೋತ್ಸವ, ಬೆಂಗಳೂರಿನ ನರ್ತನ ಯೋಗ ಮತ್ತು ಕಲಾ ಸ್ನೇಹಿ ನೃತ್ಯ ಸಂಸ್ಥೆಯ ವಿದ್ವಾನ್ ಯೋಗೇಶ್ ಕುಮಾರ್ ಮತ್ತು ವಿದುಷಿ ಸ್ನೇಹ ನಾರಾಯಣ್ ಅವರಿಂದ ಭರತ ನಾಟ್ಯ, ಸಂಜೆ 6ಕ್ಕೆ ಡಾ.ಕೃಪಾ ಫಡ್ಕೆ ಅವರಿಂದ ಭರತನಾಟ್ಯ ಸಂಜೆ 7 ರಿಂದ ರಾತ್ರಿ 8ರವರೆಗೆ. ಸ್ಥಳ : ವೀಣೆ ಶೇಷಣ್ಣ ಭವನ, ಕುವೆಂಪುನಗರ.

ಕೆ.ಎನ್.ಲಿಂಗಪ್ಪ ಅವರ 'ಮೀಸಲಾತಿಯ ಒಳನೋಟ' ಕೃತಿ ಬಿಡುಗಡೆ

ಇಡಬ್ಲ್ಯೂಎಸ್ ಮೀಸಲಾತಿ ವಿರುದ್ಧ ಹೋರಾಟ ಅಗತ್ಯ

ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಪ್ರೊ.ರವಿವರ್ಮಕುಮಾರ್



ಮೈಸೂರಿನ ಮುಕ್ತ ವಿವಿಯ ಕಾವೇರಿ ಸಭಾಂಗಣದಲ್ಲಿ ಭಾನುವಾರ ಕೆ.ಎನ್.ಲಿಂಗಪ್ಪ ಅವರ 'ಮೀಸಲಾತಿಯ ಒಳನೋಟ' ಕೃತಿಯನ್ನು ಹಿರಿಯ ನ್ಯಾಯವಾದಿ ಪ್ರೊ.ರವಿವರ್ಮಕುಮಾರ್ ಬಿಡುಗಡೆ ಮಾಡಿದರು.

ಮೈಸೂರು,ಡಿ.25(ಪಿಎಂ)– ಎಲ್ಲೆಡೆ ಇದ್ದ ಬ್ರಾಹ್ಮಣ ಸಮುದಾಯದ ಪ್ರಾಬಲ್ಯ ತಗ್ಗಿಸಿ ಸಾಮಾಜಿಕ ನ್ಯಾಯ ಒದಗಿಸುವ ಉದ್ದೇಶದಿಂದ ಮೀಸಲಾತಿ ಪರಿಕಲ್ಪನೆ ಜಾರಿಗೊಂಡಿತು. ಆದರೆ ಇಂದು ಅದೇ ಬ್ರಾಹ್ಮಣ ಸಮಾಜ ಶೇ.10ರಷ್ಟು ಮೀಸಲಾತಿ ಪಡೆದಿದ್ದು, ಈ ಶೇ.10ರಷ್ಟು ಇಡಬ್ಲ್ಯೂಎಸ್ ಮೀಸಲಾತಿ ವಿರುದ್ಧ ಹೋರಾಟಗಳು ಅಗತ್ಯ ಎಂದು ಹಿರಿಯ ನ್ಯಾಯವಾದಿ, ಮಾಜಿ ಅಡ್ವೋಕೇಟ್ ಜನರಲ್ ಹಾಗೂ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಪ್ರೊ.ರವಿವರ್ಮಕುಮಾರ್ ಹೇಳಿದರು.

ಮೈಸೂರಿನ ಮುಕ್ತ ವಿವಿಯ ಕಾವೇರಿ ಸಭಾಂಗಣದಲ್ಲಿ ಅಭಿರುಚಿ ಪ್ರಕಾಶನ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸದರಿ ಪ್ರಕಾಶನ ಹೊರತಂದಿರುವ ಕೆ.ಎನ್.ಲಿಂಗಪ್ಪ ಅವರ 'ಮೀಸಲಾತಿಯ ಒಳನೋಟ' ಕೃತಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಶೇ.10ರಷ್ಟು ಮೀಸಲಾತಿ ಮೂಲಕ ಸಾಮಾಜಿಕ ನ್ಯಾಯದ ಪರಿಕಲ್ಪನೆಯ ಮೂಲ ಸ್ವರೂಪವನ್ನು ಮೀಸಲಾತಿ ಕಳೆದುಕೊಂಡಿದೆ. ಈ ಮೀಸಲಾತಿ ಒಳಗೆ ಎಸ್‌ಸಿ–ಎಸ್‌ಟಿ ಬರಬಾರದು ಎಂಬ ಹಿಡನ್ ಅಜೆಂಡಾ ಇದೆ ಹಾಗಾಗಿ ಸುಪ್ರೀಂಕೋರ್ಟ್, ಈ ಮೀಸಲಾತಿಯಿಂದ ಇನ್ನಿತರ ವರ್ಗಗಳ ಆರ್ಥಿಕ ಹಿಂದುಳಿದವರನ್ನು ಏಕೆ ಹೊರಗಿಟ್ಟಿದ್ದೀರಿ. ಇದು ತಾರತಮ್ಯ ಅಲ್ಲವೇ? ಎಂದು ಮಾರ್ಮಿಕವಾಗಿ ಪ್ರಶ್ನಿಸಿದೆ ಎಂದು ತಿಳಿಸಿದರು.

ಇಡಬ್ಲ್ಯೂಎಸ್ ಮಸೂದೆ ಕುರಿತು ಸಾಧಕ–ಬಾಧಕಗಳ ಬಗ್ಗೆ ರಾಷ್ಟ್ರಕ್ಕೆ ಯಾವುದೇ ಮಾಹಿತಿ ನೀಡಲಿಲ್ಲ. ಕ್ಷಿಪ್ರಗತಿಯಲ್ಲಿ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಇದಕ್ಕೆ ಅಂಗೀಕಾರ ಪಡೆಯಲಾಯಿತು. ಆ ಮೂಲಕ ಸಂವಿಧಾನದ ಆಶಯ ಬುಡಮೇಲು ಮಾಡುವ ಪ್ರಕ್ರಿಯೆನ್ನು ಕೇಂದ್ರ ಸರ್ಕಾರ ಪ್ರಾರಂಭ ಮಾಡಿತು. ಆದರೆ ಈ ಯಾವುದನ್ನೂ ಹಿಂದುಳಿದ ವರ್ಗಗಳು ಗಮನಿಸಲಿಲ್ಲ. ಅದಕ್ಕಿಂತಲೂ ಮುಖ್ಯವಾಗಿ ಮೀಸಲಾತಿ ಆಧಾರದಲ್ಲಿ ಆಯ್ಕೆಯಾದ ಸಂಸತ್ ಸದಸ್ಯರು ಇಡಬ್ಲ್ಯೂಎಸ್ ಮೀಸಲಾತಿಯಿಂದ ಎಸ್‌ಟಿ–ಎಸ್‌ಟಿ ವರ್ಗಗಳನ್ನು ಹೊರಗಿಡುವುದರ ಪರವಾಗಿ ಓಟ್ ಮಾಡಿದರು. ಇದಕ್ಕಿಂತ ವಿಪರ್ಯಾಸ ಉಂಟೇ ಎಂದು ಮಾರ್ಮಿಕವಾಗಿ ಪ್ರಶ್ನಿಸಿದರು.

ಬ್ರಾಹ್ಮಣರು ಅಲ್ಪಸಂಖ್ಯಾತರು : ಅಂದು ಭಾರತದಲ್ಲಿ ಸಾಮಾನ್ಯವಾಗಿ ಎಲ್ಲಾ ಸರ್ಕಾರಿ ಹುದ್ದೆಗಳನ್ನು ಬ್ರಾಹ್ಮಣರೇ ಅಲಂಕರಿಸುತ್ತಿದ್ದರು. ಅದರಲ್ಲೂ ಮೈಸೂರು ಸಂಸ್ಥಾನ ಸರ್ಕಾರದ ಎಲ್ಲಾ ಹುದ್ದೆಗಳಲ್ಲಿ ಬ್ರಾಹ್ಮಣರೇ ಇದ್ದರು. ಈ ಹಿನ್ನೆಲೆಯಲ್ಲಿ ಬ್ರಾಹ್ಮಣರೇ ದೇಶದಲ್ಲಿ ಬಹುಸಂಖ್ಯಾತರು ಎಂಬ ನಂಬಿಕೆ ಇತ್ತು. ಏಕೆಂದರೆ ಎಲ್ಲೆಲ್ಲಿಯೂ ಅವರೇ ಇರುತ್ತಿದ್ದರು. ಈ ನಂಬಿಕೆಗೆ ಬಿದ್ದ ದೊಡ್ಡ ಕೊಡಲಿ ಪೆಟ್ಟು ಅಂದರೆ 1872ರ ಭಾರತದ ಮೊದಲ ಜನಗಣತಿ. ಈಗಿನ ಜನಗಣತಿಯಂತೆ ಅಂದು ಕೇವಲ ತಲೆ ಎಣಿಕೆ ಮಾಡಿರಲಿಲ್ಲ. ಬ್ರಿಟಿಷರ ಆಡಳಿತದಲ್ಲಿ ನಡೆದ ಈ ಮೊದಲ ಜನಗಣತಿಯು ಕರಾರುವಕ್ಕಾಗಿ ಪ್ರತಿಯೊಂದು ಪ್ರಜೆಯ ಎಲ್ಲಾ ಮಾಹಿತಿಗಳನ್ನು ಕಲೆ ಹಾಕಿತ್ತು. ಜಾತಿ, ವಿದ್ಯಾಭ್ಯಾಸ, ಔದ್ಯೋಗಿಕ ಸ್ಥಿತಿಗತಿ ಮೊದಲಾದ ಮಹತ್ವದ ಮಾಹಿತಿ ದಾಖಲಿಸಲಾಗಿತ್ತು. 1872ರಲ್ಲಿ ಈ ಜನಗಣತಿ ವರದಿ ಪ್ರಕಟವಾದಾಗ, ಬ್ರಾಹ್ಮಣರು ಅಲ್ಪಸಂಖ್ಯಾತರು ಎಂಬ ಸತ್ಯಸಂಗತಿ ಬೆಳಕಿಗೆ ಬಂತು ಎಂದು ತಿಳಿಸಿದರು.

ಜನಗಣತಿಯಲ್ಲಿ ಜಾತಿ ಕೈಬಿಟ್ಟರು: ಸ್ವಾತಂತ್ರ್ಯ ನಂತರ ಅಧಿಕಾರಕ್ಕೆ ಬಂದ ಭಾರತೀಯರು ಎಂದರೆ ಬ್ರಾಹ್ಮಣರು. ಇವರು ಬ್ರಿಟಿಷರು ಕಲ್ಪಿಸಿದ ಮೀಸಲಾತಿ ಮತ್ತಷ್ಟು ಹೆಚ್ಚಳಗೊಳ್ಳಬಾರದು ಎಂದು ಜನಗಣತಿಯಿಂದ ಜಾತಿ ಕಾಲಮ್ ಕೈಬಿಟ್ಟರು. ಈ ಹಿನ್ನೆಲೆಯಲ್ಲಿ 1951ರಲ್ಲಿ ಜನಗಣತಿ ನಡೆದಾಗ ಜಾತಿ ಪರಿಗಣಿಸಲಿಲ್ಲ. ಇತ್ತೀಚಿನ ಉದಾಹರಣೆ ಎಂದರೆ ಹೆಚ್.ಕಾಂತರಾಜು ಅವರ ವರದಿ. ಇದನ್ನು ಬಿಡುಗಡೆ ಮಾಡಲು ತಯಾರಿಲ್ಲ. ಏಕೆಂದರೆ ತಾವು ಅನುಭವಿಸಿದ ಮೂರು ಪಟ್ಟು ಸೌಲಭ್ಯಗಳು ಬಹಿರಂಗಗೊಳ್ಳುವ ಭಯವು ಮೇಲ್ಜಾತಿಗಳಿಗೆ ಕಾಡುತ್ತಿದೆ. ಹೀಗೆ ಅಂದಿನಿಂದಲೂ ಮುಚ್ಚಿಕೊಂಡು ಬಂದಿದ್ದಾರೆ ಎಂದು ಕಿಡಿಕಾರಿದರು.

ಬ್ಯಾಂಕ್‌ಗಳ ರಾಷ್ಟ್ರೀಕರಣ ಸೇರಿದಂತೆ ಇಂದಿರಾ ಗಾಂಧಿ ಕಾಲದಲ್ಲಿ ಸಾರ್ವಜನಿಕ ಕ್ಷೇತ್ರ ವಿಸ್ತಾರ ಪಡೆಯಿತು. ಇದರಿಂದ ಕ್ರಾಂತಿಕಾರಕ ಬದಲಾವಣೆ ಆರ್ಥಿಕ ವಲಯದಲ್ಲಿ ಉಂಟಾಯಿತು. ನಂತರದಲ್ಲಿ ಬಂದ ವಿಶ್ವನಾಥ ಪ್ರತಾಪ್ ಸಿಂಗ್ ಸರ್ಕಾರವು ಮಂಡಲ್ ಆಯೋಗದ ವರದಿ ಜಾರಿಗೊಳಿಸಿತು. ಆದರೆ ತದನಂತರ ಬಂದ ಪಿ.ವಿ.ನರಸಿಂಹರಾವ್ ಸರ್ಕಾರವು ಹಿಂದುಳಿದ ವರ್ಗಗಳು ಆಡಳಿತ ಕೈಗೆತ್ತಿಕೊಳ್ಳುವುದನ್ನು ತಪ್ಪಿಸಲು ಮುಂದಾಯಿತು. ರಾಷ್ಟ್ರೀಕರಣ ನೀತಿಯನ್ನು ತಿರುಗು–ಮುರುಗು ಮಾಡಿದ ಈ ಸರ್ಕಾರವು ಖಾಸಗೀಕರಣ, ಉದಾರೀಕರಣಕ್ಕೆ ಚಾಲನೆ ನೀಡಿತು. ಇಂದು ಖಾಸಗೀಕರಣ ಬೃಹದಾಕಾರವಾಗಿ ಬೆಳೆದಿದೆ ಇಂದು ರಾಜ್ಯದಲ್ಲಿ ಮೀಸಲಾತಿ ಬೇಡಿಕೆ ಮುಂದಿಟ್ಟಿರುವ ಸಮುದಾಯಗಳು ಅಂದು ಹಾವನೂರು ಆಯೋಗದ ವರದಿ ವಿರುದ್ಧ ದೊಡ್ಡ ಹೋರಾಟ ನಡೆಸಿದ್ದರು ಎಂದು ಹೇಳಿದರು.

ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಹೆಚ್.ಕಾಂತರಾಜು, ಅಂಕಣಕಾರ ಡಿ.ಉಮಾಪತಿ, ಮೈಸೂರು ವಿವಿ ಕಲಾನಿಕಾಯದ ಡೀನ್ ಪ್ರೊ.ಮುಜಾಫರ್ ಅಸ್ಸಾದಿ, ನಿವೃತ್ತ ಕೆಎಎಸ್ ಅಧಿಕಾರಿ ಮತ್ತು ಕೃತಿ ಕರ್ತೃ ಕೆ.ಎನ್.ಲಿಂಗಪ್ಪ ಮತ್ತಿತರರು ಹಾಜರಿದ್ದರು.

ಸಾಮಾಜಿಕ ನ್ಯಾಯದಲ್ಲಿ ಭಾರತ ವಿಶ್ವಗುರು

ನನಗೆ ತಿಳಿದಂತೆ 21 ರಾಷ್ಟ್ರಗಳು ಭಾರತ ಮಾದರಿಯಲ್ಲಿ ಮೀಸಲಾತಿ ನೀತಿ ಅಳವಡಿಸಿಕೊಂಡಿವೆ. ಭಾರತದ ಸಂವಿಧಾನದ ಮೀಸಲಾತಿ ಪ್ರಯೋಗ ಗಮನಿಸಿ ವಿಶ್ವ ಸಂಸ್ಥೆ 2016ರಲ್ಲಿ ಡಾ.ಅಂಬೇಡ್ಕರ್ ಅವರ 125ನೇ ಜನ್ಮದಿನದ ಪ್ರಯುಕ್ತ 'ವಿಶ್ವ ಸಮಾನತೆ ದಿನ' ಆಚರಿಸಿದೆ. ಹಾಗಾಗಿ ಸಾಮಾಜಿಕ ನ್ಯಾಯದಲ್ಲಿ ಭಾರತ ವಿಶ್ವಗುರು. ಬಹುಸಂಸ್ಕೃತಿ ಜನರು ಸಹಬಾಳ್ವೆ ನಡೆಸಲು ಸಾಧ್ಯ ಎಂದು ನಮ್ಮ ದೇಶ ತೋರಿಸಿಕೊಟ್ಟಿದೆ. ಇಡಬ್ಲ್ಯೂಎಸ್ ಮುಂದುವರೆಯಲು ಅವಕಾಶ ನೀಡಿದರೆ ಈ ವಿಶ್ವಗುರು ಸ್ಥಾನ ಕಳೆದುಕೊಳ್ಳಲಿದ್ದೇವೆ ಎಂದು ಪ್ರೊ.ರವಿವರ್ಮಕುಮಾರ್ ಹೇಳಿದರು.

ಮಿಲ್ಲರ್ ಸಮಿತಿ ರಚನೆ ಮೂಲಕ ನಾಲ್ವಡಿಯವರು ಮೀಸಲಾತಿಗೆ ವೈಜ್ಞಾನಿಕ ತಳಹದಿ ಹಾಕಿದರು. ಇದಕ್ಕೂ ಪೂರ್ವದಲ್ಲಿ ಮೀಸಲಾತಿ ಅನುಷ್ಠಾನದಿಂದ ಆದ ಪ್ರಯೋಜನಗಳ ಬಗ್ಗೆ ವ್ಯಾಪಕ ಚರ್ಚೆಯನ್ನು ನಾಲ್ವಡಿಯವರೊಂದಿಗೆ ಬ್ರಾಹ್ಮಣೇತರ ನಾಯಕರು ನಡೆಸಿದರು. ಒಕ್ಕಲಿಗರ ಪರವಾಗಿ ಎಂ.ಸಿ.ಲಿಂಗೇಗೌಡ, ಲಿಂಗಾಯತರ ಪರವಾಗಿ ಬಸವಯ್ಯ ಚರ್ಚೆಯಲ್ಲಿ ಭಾಗವಹಿಸಿದ್ದರು. ಶೇ.100ರಷ್ಟು ಕಂದಾಯ ರೈತರಿಂದ ತೆಗೆದುಕೊಳ್ಳುತ್ತೀರಿ. ಬ್ರಾಹ್ಮಣರಲ್ಲಿ ರೈತರು ಯಾರಿದ್ದಾರೆ. ನಿಮ್ಮ ಬೊಕ್ಕಸಕ್ಕೆ ನಾವು ತುಂಬಿದ ಹಣವನ್ನೆಲ್ಲಾ ಬ್ರಾಹ್ಮಣರಿಗೆ ಕೊಡುವುದು ನ್ಯಾಯವೇ? ಎಂದು ಬಸವಯ್ಯ ನಾಲ್ವಡಿಯವರಲ್ಲಿ ಹೇಳಿದ್ದರು. ಇದು ಮಹಾರಾಜರಿಗೆ ಒಪ್ಪಿಗೆ ಆಯಿತು ಎಂದು ಹೇಳಿದರು.

ಎಷ್ಟೇ ಅಡೆತಡೆ ಬಂದರೂ ನಾಲ್ವಡಿಯವರು ಮೀಸಲಾತಿ ಪರ ನಿಂತರು. ಸರ್ ಎಂ.ವಿಶ್ವೇಶ್ವರಯ್ಯ ಮೀಸಲಾತಿ ವಿರೋಧಿಸಿ ದಿವಾನ್ ಸ್ಥಾನಕ್ಕೆ ರಾಜೀನಾಮೆ ಕೊಟ್ಟರು. ಮಹಾರಾಜರು ನನಗೆ ಸಾಮಾಜಿಕ ನ್ಯಾಯ ಮುಖ್ಯ ಎಂದು ಅವರ ರಾಜೀನಾಮೆ ಸ್ವೀಕರಿಸಿದರು. ಬುದ್ಧ, ಬಸವಣ್ಣನ ಚಿಂತನೆಗಳನ್ನು ಸಂವಿಧಾನದಲ್ಲಿ ಅಂಬೇಡ್ಕರ್ ಅಡಕ ಮಾಡಿ ಸಾಮಾಜಿಕ ನ್ಯಾಯ ನೀಡಿದ್ದಾರೆ. 1950ರಲ್ಲಿ ಸಂವಿಧಾನ ಜಾರಿ ಬಂದ ನಂತರ ಎಸ್‌ಸಿ–ಎಸ್‌ಟಿ ಸಮುದಾಯಕ್ಕೆ ಮೀಸಲಾತಿ ಜಾರಿಗೊಳಿಸಲಾಯಿತು. ದಕ್ಷಿಣ ರಾಜ್ಯಗಳಲ್ಲಿ ಆಗಲೇ ಇದ್ದ ಹಿಂದುಳಿದ ವರ್ಗಗಳ ಮೀಸಲಾತಿಯೂ ಮುಂದುವರೆಯಿತು. ಹೀಗೆ ರೋಚಕ ಇತಿಹಾಸವನ್ನು ಮೀಸಲಾತಿ ಹೊಂದಿದೆ ಎಂದು ವಿವರಿಸಿದರು.

ಮಲ್ಲಿಕಾರ್ಜುನ ಖರ್ಗೆ ಹೇಗೆ ಓಟು ಮಾಡಿದರು?

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೂ ಪರಿಶಿಷ್ಟ ಜಾತಿಗಳನ್ನು ಇಡಬ್ಲ್ಯೂಎಸ್ ಮೀಸಲಾತಿಯಿಂದ ಹೊರಗಿಡುವ ಪರವಾಗಿ ಹೇಗೆ ತಾನೆ ಓಟು ಮಾಡಿದರು ಎಂಬ ಪ್ರಶ್ನೆ ಕಾಡುತ್ತಿದೆ. ಇನ್ನಾದರೂ ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗಗಳು ಎಚ್ಚೆತ್ತುಕೊಳ್ಳಬೇಕು. ಸಂವಿಧಾನ ನಮಗೆ ಮೀಸಲಾತಿ ಕೊಟ್ಟಿದ್ದು ಸಾಮಾಜಿಕ ನ್ಯಾಯದ ಒಂದು ಕನಿಷ್ಠ ಕಾರ್ಯಕ್ರಮವೇ ಹೊರತು ಬಡತನ ನಿವಾರಣೆಗಾಗಿ ಅಲ್ಲ. ಬಹುತೇಕ ಮೀಸಲಾತಿ ಫಲಾನುಭವಿಗಳು ಇಂದು ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯವಾಗಿ ತಮ್ಮ ಹಿಂದಿನ ಗುಲಾಮಗಿರಿಯನ್ನೇ ಅನುಸರಿಸುತ್ತಿದ್ದಾರೆ ಎಂದು ಪ್ರೊ.ರವಿವರ್ಮಕುಮಾರ್ ಬೇಸರ ವ್ಯಕ್ತಪಡಿಸಿದರು.

ಮೀಸಲಾತಿ ಪರಿಕಲ್ಪನೆ ಕೊಟ್ಟ ಮೈಸೂರು ಸಂಸ್ಥಾನ

ನಾಲ್ವಡಿ ಕೃಷ್ಣರಾಜ ಒಡೆಯರ್ ಹುಟ್ಟುವುದಕ್ಕೂ ಮೊದಲೇ ಮೈಸೂರು ಸಂಸ್ಥಾನದಲ್ಲಿ ಮೀಸಲಾತಿ ಜಾರಿಯಾಗಿತ್ತು. 1874ರಲ್ಲಿ ಮೊಟ್ಟ ಮೊದಲ ಬಾರಿಗೆ ಮೈಸೂರು ಸಂಸ್ಥಾನದಲ್ಲಿ ಮೀಸಲಾತಿ ಜಾರಿಗೊಂಡಿತು. ಆಗ ಪ್ರಪಂಚದ ಯಾವುದೇ ಮೂಲೆಯಲ್ಲಿ ಮೀಸಲಾತಿ ಇರಲಿಲ್ಲ ಹಾಗಾಗಿ ಮೈಸೂರು ಸಂಸ್ಥಾನದ ಎಲ್ಲಾ ಜನತೆ ಪ್ರಪಂಚಕ್ಕೆ ಸಾಮಾಜಿಕ ನ್ಯಾಯದ ಮೀಸಲಾತಿ ಕೊಟ್ಟವರು ನಾವು ಎಂದು ಹೆಮ್ಮೆಯಿಂದ ಹೇಳಿಕೊಳ್ಳಬಹುದು.

– ಪ್ರೊ.ರವಿವರ್ಮಕುಮಾರ್

ಮೈಸೂರಿನ ಅಭಿವೃದ್ಧಿಗೆ ಶ್ರಮಿಸುತ್ತೇನೆ

ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್ ಭರವಸೆ



ಮೈಸೂರು, ಡಿ.25(ಎಸ್‌ಪಿಎನ್)– ನನ್ನ ಅವಧಿಯಲ್ಲಿ ಮೈಸೂರಿನ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದು ಮುಡಾ ನೂತನ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಭರವಸೆ ನೀಡಿದರು.

ಮೈಸೂರು ರಾಮಾನುಜ ರಸ್ತೆಯಲ್ಲಿರುವ ನಮೋ ಯೋಗಭವನದಲ್ಲಿ ಯೋಗಪಟುಗಳು ಮತ್ತು ಮೈಸೂರು ಯೋಗ ಅಸೋಸಿಯೇಷನ್ ಸಹಕಾರದೊಂದಿಗೆ ಆಯೋಜಿಸಿದ್ದ ಸಮಾರಂಭದಲ್ಲಿ ಮುಡಾ ನೂತನ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಅವರನ್ನು ಭಾನುವಾರ ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಸೋಮಶೇಖರ್, ಮೈಸೂರಿನ ಅಭಿವೃದ್ಧಿಗೆ ಮಹಾರಾಜರ ಕೊಡುಗೆ ಅಪಾರ. ಹಾಗಾಗಿ ಮೈಸೂರು ವಿಶ್ವಮಟ್ಟದಲ್ಲಿ ಗುರುತಿಸಿಕೊಂಡಿದೆ ಎಂದರು.

ಬಿಜೆಪಿ ಕೇಂದ್ರ ಮತ್ತು ರಾಜ್ಯದ ಹಿರಿಯ ನಾಯಕರು ನನ್ನ ಪ್ರಾಮಾಣಿಕ ಸೇವೆಯನ್ನು ಗುರುತಿಸಿ, ಮುಡಾ ಅಧ್ಯಕ್ಷ ಸ್ಥಾನ ನೀಡಿದ್ದಾರೆ. ಅವರ ನಂಬಿಕೆಯನ್ನು ಉಳಿಸಿಕೊಂಡು ಮೈಸೂರಿನ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ನಂತರ ಮೈಸೂರು ನಗರ ಮತ್ತು ಗ್ರಾಮಾಂತರ ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಮಾತನಾಡಿ, ಯಶಸ್ವಿ ಎಸ್.ಸೋಮಶೇಖರ್ ಅವರು ಮುಡಾ ಅಧ್ಯಕ್ಷರಾಗಿ ಮೈಸೂರಿನ ಜನತೆಯ ಸಮಸ್ಯೆಗಳಿಗೆ ಸ್ಪಂದಿಸಲಿ ಎಂದು ಹಾರೈಸಿದರು.

ಯಶಸ್ವಿ ಎಸ್.ಸೋಮಶೇಖರ್, ರೋಟರಿ ಸಂಸ್ಥೆಯ ವಿವಿಧ ಹುದ್ದೆಗಳಲ್ಲಿ ಜವಾಬ್ದಾರಿ ವಹಿಸಿಕೊಂಡು ಸಮಾಜ ಸೇವೆಯಲ್ಲಿ ತೊಡಗಿದ್ದರು. ಸಮಾಜ ಸೇವೆ ಜೊತೆಗೆ ಬಿಜೆಪಿಯಲ್ಲಿ ಹಲವು ವರ್ಷಗಳಿಂದ ಗುರುತಿಸಿಕೊಂಡು ಸಂಘಟನೆ ಮಾಡಿದ್ದಾರೆ. ಇದೀಗ ಬಿಜೆಪಿ, ಸೋಮಶೇಖರ್ ಅವರನ್ನು ಮುಡಾ ಅಧ್ಯಕ್ಷ ಸ್ಥಾನಕ್ಕೆ ನೇಮಕ ಮಾಡಿ, ಅವರ ಸೇವೆಗೆ ನ್ಯಾಯ ಒದಗಿಸಿರುವುದು ಸಂತೋಷದ ವಿಷಯ ಎಂದರು.

ಈ ವೇಳೆ ವಿವಿಧ ಕ್ಷೇತ್ರದ ಸಾಧಕರಾದ ಕಲ್ಯಾಣ ಕುಮಾರ್, ಎಂ.ರೂಪ, ಅರುಣ ಎಂ.ಗವಾಡ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ರಾಷ್ಟ್ರೀಯ ಯೋಗಪಟು ಯೋಗ ಪ್ರಕಾಶ್, ಪಿ.ಆರ್.ವೆಂಕಟೇಶ್, ಎಸ್.ಸೇತುರಾವ್ ಉಪಸ್ಥಿತರಿದ್ದರು.

ವಿಷ್ಣುವರ್ಧನ್ ಚಿತ್ರರಂಗದ 50ನೇ ವರ್ಷದ ಸ್ಮರಣಾರ್ಥ ಐದು ದಿನಗಳ ಪಾದಯಾತ್ರೆ

ಮೈಸೂರಿನಿಂದ ಬೆಂಗಳೂರಿನತ್ತ ಹೊರಟ 'ವಿಷ್ಣು ಆದರ್ಶ ಯಾತ್ರೆ'



ಮೈಸೂರು, ಡಿ. 25(ಆರ್‌ಕೆಬಿ)– ಸಾಹಸಸಿಂಹ ಡಾ.ವಿಷ್ಣುವರ್ಧನ್ ಅವರ ಚಿತ್ರರಂಗದ 50ನೇ ವರ್ಷದ ಸ್ಮರಣಾರ್ಥ 'ಯಜಮಾನ್ರು ಆದರ್ಶ ಯಾತ್ರೆ' ಎಂಬ ಐದು ದಿನಗಳ ಪಾದಯಾತ್ರೆ ಭಾನುವಾರ ಮೈಸೂರಿನಿಂದ ಬೆಂಗಳೂರಿನತ್ತ ತೆರಳಿತು.

ವಿಷ್ಣುಸೇನಾ ಸಮಿತಿಯ ರಾಜ್ಯಾಧ್ಯಕ್ಷ ಶ್ರೀನಿವಾಸ್ ನೇತೃತ್ವದಲ್ಲಿ ವಿಷ್ಣು ಅಭಿಮಾನಿಗಳು ಮೈಸೂರಿನ ನ್ಯಾಯಾಲಯದ ಎದುರಿನ ಗಾಂಧಿ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಪಾದಯಾತ್ರೆಗೆ ಚಾಲನೆ ನೀಡಲಾಯಿತು.

ಮೈಸೂರಿನ ಪ್ರಮುಖ ರಸ್ತೆಗಳ ಮೂಲಕ ಪಾದಯಾತ್ರೆಯಲ್ಲಿ ತೆರಳಿದ ವಿಷ್ಣು ಅಭಿಮಾನಿಗಳು ಭಾನುವಾರ ಶ್ರೀರಂಗಪಟ್ಟಣ ತಲುಪಿ ಅಲ್ಲಿ ತಂಗಿದ್ದಾರೆ. ಸೋಮವಾರ ಅಲ್ಲಿಂದ ಹೊರಟು ಮಂಡ್ಯ, ಮದ್ದೂರು, ಚನ್ನಪಟ್ಟಣ, ರಾಮನಗರ ಮೂಲಕ ಬೆಂಗಳೂರಿಗೆ ಯಾತ್ರೆ ತೆರಳಲಿದೆ. ಐದು ದಿನಗಳ ಪಾದಯಾತ್ರೆ ಬಳಿಕ ಅಭಿಮಾನಿಗಳು ಡಿ.30ರಂದು ಬೆಂಗಳೂರಿನಲ್ಲಿರುವ ವಿಷ್ಣು ಪುಣ್ಯಭೂಮಿ ತಲುಪಿ, ಅಲ್ಲಿ ವಿಷ್ಣು ಸ್ಮರಣೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಇಂದಿನ ಮೆರವಣಿಗೆಯಲ್ಲಿ ವಿಷ್ಣು ಅಭಿಮಾನಿಗಳ ಸಂಘದ ಮುಖಂಡ, ನಗರಪಾಲಿಕೆ ಮಾಜಿ ಸದಸ್ಯ ಎಂ. ಪಾರ್ಥಸಾರಥಿ, ವಿಷ್ಣು ಸೇನಾ ಸಮಿತಿ ರಾಜ್ಯ ಕಾರ್ಯದರ್ಶಿ ಶಿವಕುಮಾರ್, ಮೈಸೂರಿನ ಅಭಿಮಾನಿಗಳಾದ ಬಸವರಾಜು, ಶಿವಕುಮಾರ್, ದೀಪಕ್, ಮಹದೇವು, ಸಿದ್ದಪ್ಪ ಇನ್ನಿತರರು ಭಾಗವಹಿಸಿದ್ದರು.

ಮೈಸೂರಲ್ಲಿ ದಿಢೀರ್ ಮೋಡಕವಿದ ವಾತಾವರಣ, ತುಂತುರು ಮಳೆ

ಮೈಸೂರು,ಡಿ.25(ಪಿಎಂ)– ಮೈಸೂರು ನಗರದಲ್ಲಿ ಭಾನುವಾರ ಮೈ ನಡುಗಿಸುವ ಚಳಿಯ ಜೊತೆಗೆ ವಾತಾವರಣದಲ್ಲಿ ದಿಢೀರ್ ಬದಲಾವಣೆಯಾಗಿದ್ದು, ಮೋಡಕವಿದ ವಾತಾವರಣ ಸೃಷ್ಟಿಯಾಗಿ ರಾತ್ರಿ ವೇಳೆಗೆ ತುಂತುರು ಮಳೆಯಾಗಿದೆ.

ಮುಂಜಾನೆಯಿಂದಲೇ ಮೋಡ ಕವಿದ ವಾತಾವರಣ ಇಡೀ ಮೈಸೂರು ನಗರ ಆವರಿಸಿತ್ತು ರಾತ್ರಿ 9ರ ವೇಳೆಯಲ್ಲಿ ತುಂತುರು ಮಳೆ ಸುರಿದಿದ್ದು, ಸೋಮವಾರವೂ ಮೋಡ ಕವಿದ ವಾತಾವರಣದೊಂದಿಗೆ ದಿನದ ಯಾವಾಗಲಾದರೂ ಕೆಲಕಾಲ ಮಳೆಯಾಗುವ ಮುನ್ಸೂಚನೆ ಇದೆ. ಭಾರೀ ಮಳೆ–ಗಾಳಿ ಆಗುವ ಯಾವುದೇ ಲಕ್ಷಣ ಇಲ್ಲ ಎನ್ನಲಾಗಿದೆ ಐಎಂಡಿ ಮುನ್ಸೂಚನೆ ವರದಿ ಪ್ರಕಾರ ಮೈಸೂರು ಜಿಲ್ಲೆಯಲ್ಲಿ ಡಿ.24ರಿಂದ 28ರವರೆಗೆ ಮೋಡ ಕವಿದ ವಾತಾವರಣ ಇರಲಿದ್ದು, ಅತಿ ಕಡಿಮೆ ಮಳೆಯಾಗುವ ಸಾಧ್ಯತೆ ಇದೆ. ಹಾಗಾಗಿ ಭತ್ತ ರಾಗಿ ಮತ್ತು ಇತರೆ ಬೆಳೆಗಳ ಕೊಯ್ಲು ಸಂಬಂಧ ಯಾವುದೇ ತೊಂದರೆ ಇಲ್ಲ. ಮುನ್ನಚರಿಕೆ ಕ್ರಮಗಳನ್ನು ಕೈಗೊಂಡು ಜಿಲ್ಲೆಯ ರೈತರು ಕೊಯ್ಲು ಮಾಡಬಹುದು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ನಾಗನಹಳ್ಳಿ ಸಾವಯುವ ಕೃಷಿ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕ ಪ್ರೊ.ಗೋವಿಂದರಾಜು, ಭಾರೀ ಮಳೆಯ ಯಾವುದೇ ಸೂಚನೆ ಇಲ್ಲ. ಭಾನುವಾರ ಸೃಷ್ಟಿಯಾಗಿದ್ದ ಮೋಡಗಳು ಹೆಚ್ಚಿನ ಪ್ರಮಾಣದ ಮಳೆ ತರುವ ಮೋಡಗಳಲ್ಲ. ಹಿಂಗಾರು ಮಳೆ ಸರಿಯಾಗಿಲ್ಲ ಆಗಿಲ್ಲದ ಕಾರಣ ತಾಪಮಾನ ಹೆಚ್ಚಾದಾಗ ಮೋಡಗಳು ಒಗ್ಗೂಡುತ್ತವೆ ಎಂದರು.



ವಿಧಾನ ಪರಿಷತ್ತಿನ ನೂತನ ಸಭಾಪತಿಯಾಗಿ ಆಯ್ಕೆಯಾದ ಬಸವರಾಜ ಹೊರಟ್ಟಿ ಅವರನ್ನು ಜೆಡಿಎಸ್ ಹಿಂದುಳಿದ ವರ್ಗದ ಮೈಸೂರು ಜಿಲ್ಲಾ ಅಧ್ಯಕ್ಷ ಅಪೆಕ್ಸ್ ಶ್ರೀನಿವಾಸ್ ಅಭಿನಂದಿಸಿದರು.

ಹಣಕ್ಕಿಂತ ಈಗ ಜ್ಞಾನ, ಪ್ರತಿಭೆಗೆ ಬೆಲೆ

● ಶಾಸಕ ಎಲ್.ನಾಗೇಂದ್ರ ಕಿವಿಮಾತು ● ಪತ್ರಿಕಾ ಪ್ರತಿನಿಧಿಗಳ ಸಂಘದ ವಾರ್ಷಿಕೋತ್ಸವ



ಮೈಸೂರು, ಡಿ.25(ಎಸ್‌ಬಿಡಿ)– ಜ್ಞಾನವೇ ಬಹುದೊಡ್ಡ ಸಂಪತ್ತು. ಎಷ್ಟೇ ಕಷ್ಟವಾದರೂ ಮಕ್ಕಳಿಗೆ ಶಿಕ್ಷಣ ಕೊಡಿಸಿ ಎಂದು ಶಾಸಕ ಎಲ್.ನಾಗೇಂದ್ರ ಹೇಳಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ನಡೆದ 'ಮೈಸೂರು ಜಿಲ್ಲಾ ಅಧಿಕೃತ ಪತ್ರಿಕಾ ಪ್ರತಿನಿಧಿಗಳ ಸಂಘ'ದ 6ನೇ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಜಮೀನುದಾರರು ಅಥವಾ ಹಣವಂತರಾಗಿದ್ದರೆ ಮಾತ್ರ ಗೌರವ, ಮಾನ್ಯತೆ ಎನ್ನುವ ಕಾಲವಿಲ್ಲ. ಜ್ಞಾನ, ಪ್ರತಿಭೆ ಇದ್ದವರು ಜಗತ್ತಿನ ಯಾವ ಮೂಲೆಯಲ್ಲಾದರೂ ಬದುಕಬಹುದು. ಹಾಗಾಗಿ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವುದು ಪೋಷಕರ ಆದ್ಯತೆಯಾಗಬೇಕು. ಇದು ದೇಶದ ಪ್ರಗತಿಗೂ ಪೂರಕ ಎಂದು ಅಭಿಪ್ರಾಯಿಸಿದರು.

ಪತ್ರಿಕಾ ಪ್ರತಿನಿಧಿಗಳ ಸಂಘ ಒಂದು ಸಣ್ಣ ಸಂಘಟನೆಯಾದರೂ ಉತ್ತಮ ಕಾರ್ಯಚಟುವಟಿಕೆ ನಡೆಸಿಕೊಂಡು ಬಂದಿದೆ. ಈ ನಿಟ್ಟಿನಲ್ಲಿ ಸಕಾಲಕ್ಕೆ ಪತ್ರಿಕೆಗಳನ್ನು ಓದುಗರ ಕೈಸೇರಿಸಲು ಬಿಸಿಲು, ಮಳೆ, ಚಳಿ ಲೆಕ್ಕಿಸದೆ ಶ್ರಮಿಸುತ್ತಿರುವ ವಿತರಕ ಪ್ರತಿಭಾನ್ವಿತ ಮಕ್ಕಳನ್ನು ಪುರಸ್ಕರಿಸಿ, ಪ್ರೋತ್ಸಾಹಿಸುವ ಮೂಲಕ ಅವರ ಮುಂದಿನ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಿಸುತ್ತಿರುವುದು ಶ್ಲಾಘನೀಯ ಎಂದರು.

ಮೇಯರ್ ಶಿವಕುಮಾರ್ ಮಾತನಾಡಿ, ಯಾವ ಪರಿಸ್ಥಿತಿಯಲ್ಲೂ ಪತ್ರಿಕೆಗಳನ್ನು ಮನೆ ಮನೆಗೆ ತಲುಪಿಸುವ ವಿತರಕರಿಗಿರುವ ಕಷ್ಟದ ಬಗ್ಗೆ ಅರಿವಿದೆ ಹಾಗಾಗಿ ಅವರ ಸಮಸ್ಯೆಗಳಿಗೆ ಸ್ಪಂದಿಸುವುದು ಮನಸ್ಸುಗಳು ಹೆಚ್ಚಾಗಬೇಕು. ಈ ವಲಯದಲ್ಲಿ ಕೆಲಸ ಮಾಡುವವರು ಹಿಂದುಳಿದವರಾದರೂ ಅವರ ಸೇವೆ ಮಹತ್ವದ್ದಾಗಿದೆ ಸೂಕ್ತಜಾಗ ಗುರುತಿಸಿ ಮಾಹಿತಿ ನೀಡಿದರೆ ಅಲ್ಲಿ ಪತ್ರಿಕಾ ವಿಂಗಡಣೆಗೆ ಅಗತ್ಯವಾದ ಎಲ್ಲಾ ಸೌಲಭ್ಯಗಳನ್ನು ಪಾಲಿಕೆ ಕಲ್ಪಿಸಲಿದೆ ಎಂದು ಭರವಸೆ ನೀಡಿದರು.

ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಮಾತನಾಡಿ, ನಮ್ಮ ಸಂಘವು ಸದಾ ಪತ್ರಿಕಾರಂಗದ ನರವ್ಯೂಹದಂತೆ ಕೆಲಸ ಮಾಡುವ ವಿತರಕರ ಜೊತೆಗಿದೆ. ಕೊರೊನಾ ಸಂದರ್ಭದಲ್ಲಿ ಉಚಿತ ಆರೋಗ್ಯ ತಪಾಸಣೆ, ಲಸಿಕೆ ಹಾಕಿಸಲು ಸಹಕಾರ ನೀಡಿದೆ. ಈಚೆಗೆ ನಿಧನರಾದ ಪತ್ರಿಕಾ ವಿತರಕರ ಕುಟುಂಬಗಳಿಗೆ ಸರ್ಕಾರದಿಂದ ಏನಾದರೂ ಹಣಕಾಸಿನ ನೆರವು ಸಿಗುತ್ತದೆಯೇ ಎಂಬ ಬಗ್ಗೆ ಪರಿಶೀಲಿಸಿ, ಆ ನಿಟ್ಟಿನಲ್ಲಿ ಶ್ರಮಿಸುವುದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಕಳೆದ ಸಾಲಿನ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಗಳಿಸಿದ ಪತ್ರಿಕಾ ವಿತರಕರ ಮಕ್ಕಳನ್ನು ಪುರಸ್ಕರಿಸಿ, ಪ್ರೋತ್ಸಾಹ ಧನ ವಿತರಿಸಲಾಯಿತು. ಇದೇ ವೇಳೆ ನಗರದ ಚಿಕ್ಕಗಡಿಯಾರದ ಬಳಿಯ ವಿತರಣಾ ಕೇಂದ್ರದ ಅರುಣ್ ತಿವಾರಿ ಅವರಿಗೆ 'ಡಾ. ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ' ಅಭಿನಂದಿಸಲಾಯಿತು. ಅಲ್ಲದೆ ಕಳೆದ ವರ್ಷ ನಿಧನರಾದ ಮೂವರು ಪತ್ರಿಕಾ ವಿತರಕರ ಕುಟುಂಬದವರಿಗೆ ಹಣಕಾಸಿನ ನೆರವು ನೀಡಲಾಯಿತು. ಇದೇ ವೇಳೆ ಪತ್ರಿಕಾ ಪ್ರತಿನಿಧಿಗಳ ಸಂಘದ 2023ರ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು.

ಮೈಸೂರು ಜಿಲ್ಲಾ ಅಧಿಕೃತ ಪತ್ರಿಕಾ ಪ್ರತಿನಿಧಿಗಳ ಸಂಘದ ಅಧ್ಯಕ್ಷ ಪಿ.ಸುರೇಶ್, ಪ್ರಧಾನ ಕಾರ್ಯದರ್ಶಿ ಎ.ರವಿ, ನಿರ್ದೇಶಕ ಕೆ.ಕೃಷ್ಣಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಗುಂಡ : ನಾನು ಮುಂದಿನ ಜನ್ಮದಲ್ಲಾದರೂ ನಾಯಿಯಾಗಿ ಹುಟ್ಟಬೇಕು.
ತಿಮ್ಮ : ಅಂತಹ ಮನಸ್ಸು ಯಾಕೋ ಬಂತು ನಿನಗೆ.
ಗುಂಡ : ನನ್ನ ಹೆಂಡತಿ ನಾಯಿಯನ್ನು ಕಂಡರೆ ಮಾತ್ರ ಹೆದರುತ್ತಾಳೆ ಅದಕ್ಕೆ.

ಮೈಸೂರು ಮಿತ್ರ

ಸೋಮವಾರ, 26 ಡಿಸೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಕಷ್ಟದಿಂದ ಪಾರಾಗುವ ದಾರಿಯನ್ನು ತೋರಿಸುವವನೇ ಮಾನವ ಕೋಟಿಯ ಸ್ನೇಹಿತ. – ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮೊದಲು ಆಳಾಗಿ ದುಡಿ, ನಂತರ ಅರಸನಾಗಿ ಉಣ್ಣು.

ನಿಮ್ಮ ಪತ್ರಗಳು

ಸಾರ್ವಜನಿಕರ ತೆರಿಗೆ ಹಣ ಸದ್ವಿನಿಯೋಗವಾಗಲಿ

ಮಾನ್ಯರೆ,

ಮೈಸೂರು ನಗರದಲ್ಲಿ ವಿಶ್ರಾಂತಿಯ ಸುಂದರ ತಾಣಗಳಂತೆ ಸಾಕಷ್ಟು ಉದ್ಯಾನಗಳು ಇದ್ದು, ಅವುಗಳ ಅಭಿವೃದ್ಧಿ ಮತ್ತು ನವೀಕರಣದ ಹೆಸರಿನಲ್ಲಿ ಅನೇಕ ಉದ್ಯಾನಗಳ ಕಾಂಪೌಂಡ್‌ಗಳು ಸುಸ್ಥಿತಿಯಲ್ಲಿದ್ದರೂ, ಕೆಡವಿ ಮತ್ತೆ ನಿರ್ಮಾಣ ಮಾಡುವ ಕಾರ್ಯಗಳು ನಡೆಯುತ್ತಿವೆ, ಮೈಸೂರು ಮಹಾನಗರ ಪಾಲಿಕೆ ಇದನ್ನು ಗಮನಿಸಿ, ಸುಸ್ಥಿತಿಯಲ್ಲಿರುವ ಉದ್ಯಾನವನಗಳ ಕಾಂಪೌಂಡ್‌ಗಳನ್ನು ಹಾಗೆ ಉಳಿಸಿಕೊಂಡು, ಹಾಳಾಗಿರುವ, ಕುಸಿದು ಬಿದ್ದಿರುವ ಕಾಂಪೌಂಡ್‌ಗಳನ್ನು ಮಾತ್ರ ಹೊಸದಾಗಿ ನಿರ್ಮಾಣ ಮಾಡಲಿ.



ಸಾರ್ವಜನಿಕರು ಕಷ್ಟಪಟ್ಟು ದುಡಿದ ಹಣವನ್ನು ತೆರಿಗೆ ರೂಪದಲ್ಲಿ ನಗರ ಪಾಲಿಕೆಗೆ ಕಟ್ಟುತ್ತಾರೆ, ಈ ತೆರಿಗೆಯ ಹಣವು ಪೋಲಾಗದೇ ಸದ್ವಿನಿಯೋಗವಾಗಲಿ. ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡುವ ಸಂದರ್ಭದಲ್ಲಿ ನಮ್ಮ ಸ್ವಂತ ಹಣದಂತೆ ಎಂದು ತಿಳಿದು ಒಂದು ರೂಪಾಯಿ ಖರ್ಚು ಮಾಡಲು ಹತ್ತಾರು ಬಾರಿ ಚಿಂತಿಸಿ ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸಲಿ. ಪಾಲಿಕೆಯ ಯೋಜನೆಗಳಿಗೆ ಬಿಡುಗಡೆ ಮಾಡುವ ಹಣವು "ಯಾರದ್ದೋ ದುಡ್ಡು ಎಲ್ಲಮ್ಮನ ಜಾತ್ರೆ" ಯಂತೆ ಖರ್ಚು ಮಾಡದೆ, ದುಂದುವೆಚ್ಚಗಳಿಗೆ ಕಡಿವಾಣ ಹಾಕಿ, ಖುದ್ದು ವಾಸ್ತವವನ್ನು ಅರಿತು ಕಾಮಗಾರಿಗಳು ಬೇಕೇ, ಬೇಡವೇ ಎಂದು ಪರಿಶೀಲಿಸಿ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು, ಅವಶ್ಯಕತೆ ಇರುವ ಕಡೆ ಯೋಜನೆ ರೂಪಿಸಿ ಅಭಿವೃದ್ಧಿಯ ಕೆಲಸಗಳನ್ನು ಕೈಗೊಳ್ಳಬೇಕೆಂದು ನಮ್ಮ ಬಲವಾದ ಆಗ್ರಹ.

– ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾಲೂಕು.

ದೊಡ್ಡ ಗಡಿಯಾರದ ದುರಸ್ತಿ ಸ್ವಾಗತಾರ್ಹ

ಮಾನ್ಯರೆ,

ನಗರದ ಹೃದಯ ಭಾಗದಲ್ಲಿರುವ ದೊಡ್ಡ ಗಡಿಯಾರದ ದುರಸ್ತಿಗೆ ಮೈಸೂರು ಮಹಾನಗರ ಪಾಲಿಕೆಯ ವತಿಯಿಂದ 44 ಲಕ್ಷ ರೂಪಾಯಿಗಳನ್ನು ಪಾರಂಪರಿಕ ಇಲಾಖೆಗೆ ನೀಡಲಾಗಿದ್ದು ಶೀಘ್ರದಲ್ಲೇ ದುರಸ್ತಿ ಕಾಮಗಾರಿ ಪ್ರಾರಂಭವಾಗಲಿದೆ ಎಂಬ ಮೇಯರ್ ಶಿವಕುಮಾರ್ ಹೇಳಿಕೆ ಸ್ವಾಗತಾರ್ಹ. ಅಂದ ಹಾಗೆ ದೊಡ್ಡ ಗಡಿಯಾರ ಎಂದು ಕರೆಯಲ್ಪಡುವ ಈ ಪಾರಂಪರಿಕ ಹಾಗೂ ಚಾರಿತ್ರಿಕ ಗಡಿಯಾರಕ್ಕೆ ಶತಮಾನಗಳಷ್ಟು ಸುದೀರ್ಘ ಇತಿಹಾಸವಿದೆ. ನಗರದ ರಂಗಾಚಾರ್ಲು ಪುರಭವನದ ಎದುರಿಗೆ ಇರುವ ಈ ದೊಡ್ಡ ಗಡಿಯಾರವನ್ನು ಕ್ಲಾಕ್ ಟವರ್ ಎಂದು ಕೂಡ ಕರೆಯಲಾಗುತ್ತದೆ. ಹಲವಾರು ದಶಕಗಳಿಂದ ಸಮಯ ಪಾಲಕನಾಗಿ ನಾಗರಿಕರನ್ನು ಎಚ್ಚರಿಸುತ್ತಿರುವ ಈ ಗಂಟೆ ಆಗಿಂದಾಗ್ಗೆ ಅನಾರೋಗ್ಯ ಪೀಡಿತವಾಗುವುದೂ ಉಂಟು. ಈ ಗಡಿಯಾರದ ಗಂಟೆಯ ನಾದವನ್ನು ಕೇಳಲು ಎಷ್ಟು ಚೆಂದ. ಒಮೊಮ್ಮೆ ನಾನೂ ಸಹ, ಅದು ಬಾರಿಸುವ ಗಂಟೆಯ ನಾದವನ್ನು ತನ್ಮಯತೆಯಿಂದ ಆಲಿಸಿದ್ದೇನೆ. ದೊಡ್ಡ ಗಡಿಯಾರ ಇರುವುದು ಗಾಂಧಿ ಚೌಕದ ಸಮೀಪದಲ್ಲಿ. ಅಲ್ಲಿನ ಜನರೆಲ್ಲಾ ಸಮಯ ನೋಡಲು ನಮ್ಮ ದೊಡ್ಡ ಗಡಿಯಾರಣ್ಣನತ್ತಲೇ ನೋಡುವುದುಂಟು. ಕೈಯ್ಯಲ್ಲಿ ವಾಚ್, ಮೊಬೈಲ್ ಇದ್ದರೂ ಸಹ ದೃಷ್ಟಿ ದೊಡ್ಡ ಗಡಿಯಾರದತ್ತವೇ ಹರಿಯುತ್ತದೆ. ಗಾಂಧಿ ಚೌಕಕ್ಕೆ ಸಹ ನೂರಾರು ವರ್ಷಗಳ ದೀರ್ಘ ಇತಿಹಾಸವಿದೆ. ಹಿಂದೆ ಅಲ್ಲಿ ಗ್ರಾಮಾಂತರ ಬಸ್ ನಿಲ್ದಾಣ ಇತ್ತು. ಮೈಸೂರಿನಿಂದ ಬೇರೆ ಬೇರೆ ಸ್ಥಳಗಳಿಗೆ ಹೋಗುವ ಪ್ರಯಾಣಿಕರಿಂದ ಗಾಂಧಿ ಚೌಕ ಸದಾ ಗಿಜಿಗಿಜಿ ಗುಟ್ಟುತ್ತಿತ್ತು. ಜನರು ಅಲ್ಲಿ ಜಾತ್ರೆಗೆ ಬಂದವರಂತೆ ಸೇರುತ್ತಿದ್ದರು. ಆದರೆ, ಬಸ್ ನಿಲ್ದಾಣದ ಸ್ಥಳಾಂತರದ ನಂತರ, ಗಾಂಧಿ ಚೌಕ ಸ್ವಲ್ಪ ನಿರಾಳವಾಗಿದೆ ಅನ್ನಿಸುತ್ತದೆ. ಅದರ ಸಮೀಪವೇ ಇರುವ ದೊಡ್ಡ ಗಡಿಯಾರ, ಅದರ ಎದುರೇ ಇರುವ ಪುರಭವನ. ಇತ್ಯಾದಿಗಳು ಜನರ ಆಕರ್ಷಣೆಯಿಂದ ದೂರವಾಗಿಲ್ಲ. ಇದೀಗ ದೊಡ್ಡ ಗಡಿಯಾರಣ್ಣನ ದುರಸ್ತಿ ಕಾರ್ಯಕ್ಕೆ ಹಸಿರು ನಿಶಾನೆ ದೊರಕಿರುವುದರಿಂದ ಮತ್ತೆ ಎಂದಿನಂತೆ ತನ್ನ ಗಂಟಾನಾದವನ್ನು ಮೊಳಗಿಸಲು ಸಜ್ಜಾಗುತ್ತಿದೆ ನಮ್ಮ ನಿಮ್ಮ ದೊಡ್ಡ ಗಡಿಯಾರ. **–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.**



ಮೊಬೈಲ್: 9341731661

ರಾಜಕೀಯ ಪ್ರಜ್ಞೆ ಇರಬೇಕು; ಆದರೆ 'ಹುಚ್ಚು'ತನ ಇರಬಾರದು

ಮಾನ್ಯರೆ,

ಮುಂದಿನ ವಿಧಾನಸಭಾ ಚುನಾವಣೆ ಇನ್ನೂ ನಾಲ್ಕೈದು ತಿಂಗಳುಗಳಿವೆ, ಆದರೆ ಎಲ್ಲ ರಾಜಕೀಯ ಪಕ್ಷಗಳು ಈಗಾಗಲೇ ನಾನಾ ಯಾತ್ರೆಗಳು, ಬಹಿರಂಗ ಸಭೆ–ಸಮಾರಂಭಗಳನ್ನು ಮಾಡುತ್ತಿರುವುದನ್ನು ನೋಡಿದರೆ, ಪ್ರಜ್ಞಾವಂತ ಮತದಾರರಲ್ಲಿ 'ಅಸಹ್ಯ' ಹುಟ್ಟುವಂತಿದೆ.

ಕಳೆದ ಶನಿವಾರ ನಮ್ಮೂರಿಗೆ ಹೋಗಿದೆ. (ಬೂಕನಕೆರೆ, ಕೆ.ಆರ್.ಪೇಟೆ, ತಾ:), ನಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಕೂಲಿ ಕಾರ್ಮಿಕರು ಕೇಳುತ್ತಾರೆ, ಸಾರ್ ನಿಮ್ಮ ಕಡೆ ಎಲೆಕ್ಷನ್ ಹೇಗಿದೆ, ಯಾರು ಗೆಲ್ಲುತ್ತಾರೆ, ಯಾವ ಪಾರ್ಟಿಯಿಂದ ಯಾರು ನಿಲ್ಲುತ್ತಾರೆ, ಈ ಸಲ ಯಾವ ಪಕ್ಷವೂ ಬಹುಮತ ಬರುವುದಿಲ್ಲ... ಹೀಗೆ ಹಲವಾರು ಪ್ರಶ್ನೆಗಳನ್ನು ಕೇಳುತ್ತಾರೆ, ಅವರೇ ಅದಕ್ಕೆ ಉತ್ತರವನ್ನು ಸಹ ಹೇಳುತ್ತಾರೆ. ಹೀಗೆ ರಾಜಕೀಯ ವಿಷಯವನ್ನೇ ಇಡೀ ದಿನ ಮಾತನಾಡಿ ಕಾಲ ಕಳೆಯುತ್ತಾರೆ. ಇವರ ರಾಜಕೀಯ ಪ್ರಜ್ಞೆ ಯನ್ನು ನೋಡಿ ನನಗೆ ಸಂತೋಷ ಮತ್ತು ಆಶ್ಚರ್ಯವಾಯಿತ್ತೇನೋ ನಿಜ, ಆದರೆ ಕೂಲಿ–ನಾಲಿ, ಮಾಡುವ ಜನರಲ್ಲಿ ಈ ರಾಜಕೀಯದ 'ಹುಚ್ಚು'ತನವನ್ನು ತುಂಬಿ, ಯಾರೋ ರಾಜಕೀಯ ವ್ಯಕ್ತಿಗಳು ಲಾಭ ಮಾಡಿಕೊಳ್ಳುತ್ತಾರೆ. ತಳ ಸಮುದಾಯದವರು ಮಾತ್ರ ಹೀಗೆ ರಾಜಕೀಯ ಮಾತನಾಡಿಕೊಂಡು ಕಾಲಹರಣ ಮಾಡುತ್ತಾರೆ.

ಚುನಾವಣಾ ಆಯೋಗ ಇನ್ನು ಮುಂದೆ, ಅಸೆಂಬ್ಲಿ ಚುನಾವಣೆಗೆ ಮುನ್ನ ಎರಡು ತಿಂಗಳು ಮಾತ್ರ, ಬಹಿರಂಗ ಸಭೆ–ಸಮಾರಂಭಗಳನ್ನು ಸೀಮಿತಗೊಳಿಸಿ ಕಾನೂನು ಜಾರಿಗೆ ತರಲಿ, ಈ ಬಗ್ಗೆ ರಾಜಕೀಯ ಪಂಡಿತರು ಏನು ಹೇಳುತ್ತಾರೆ.

– ಬೂಕನಕೆರೆ ವಿಜೇಂದ್ರ, ಮೈಸೂರು. ಮೊಬೈಲ್: 9448026186




ಪ್ರೊ. ಎ.ವಿ.ನರಸಿಂಹಮೂರ್ತಿ
ಮಾಜಿ ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರ ವಿಭಾಗ,
ಮೈಸೂರು ವಿಶ್ವವಿದ್ಯಾನಿಲಯ.

ಇತಿಹಾಸದ ಪುಟಗಳು

ದೇಶದ ನಾಲ್ವರು ಮಹನೀಯರು

ಭಾರತದ ಸ್ವಾತಂತ್ರ್ಯ ಸಂಗ್ರಾಮ, ಶಿಕ್ಷಣ, ಸಾಹಿತ್ಯ, ಧಾರ್ಮಿಕ ಕ್ಷೇತ್ರವೂ ಅಲ್ಲದೆ, ಸಾರ್ವಜನಿಕ ಕ್ಷೇತ್ರದಲ್ಲಿ ಸಾಕಷ್ಟು ಸೇವೆ ಸಲ್ಲಿಸಿದ ಭಾರತದ ಇತಿಹಾಸದಲ್ಲಿ ದಾಖಲಾಗಿರುವ ನಾಲ್ವರು ಮಹನೀಯರ ಜೀವನ, ಸಾಧನೆ ಕುರಿತಂತೆ ಸಂಕ್ಷಿಪ್ತ ವಿವರಣೆ ಇಲ್ಲಿದೆ.



ತಗಡೂರು ರಾಮಚಂದ್ರರಾಯರು · ಸಾಲಿ ರಾಮಚಂದ್ರರಾಯರು · ರಾಮದಾಸ · ನಟೇಶನ್

ತಗಡೂರ್ ರಾಮಚಂದ್ರರಾಯರು: ಇವರು ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಹನುಮಪುರದಲ್ಲಿ 10–10–1897ರಂದು ಜನಿಸಿದರು. ಇವರ ಚಿಕ್ಕಂದಿನಲ್ಲಿಯೇ ತಾಯಿ ನಿಧನರಾದರು. ಈ ದುಃಖವನ್ನು ಮರೆಯಲು ಇವರು ರಾಮಾಯಣ ಮತ್ತು ಮಹಾಭಾರತ ಪ್ರವಚನಗಳನ್ನು ಕೇಳುವುದರ ಮೂಲಕ ನೆಮ್ಮದಿಯನ್ನು ಪಡೆದುಕೊಂಡರು. ಇವರ ತಂದೆ ಶಾನುಭೋಗರು. ಇವರು ದಾನ ಹಾಗೂ ಧರ್ಮಗಳನ್ನು ಮಾಡಿ, ತಮ್ಮ ಪೂರ್ವಿಕರು ಮಾಡಿದ್ದ ಆಸ್ತಿಯನ್ನು ಕಳೆದುಕೊಂಡರು. ತಗಡೂರ್ ಅವರ ಬಡತನ ಹಾಗೂ ಏಕಾಂತ ಜೀವನ, ಇವರನ್ನು ಆಧ್ಯಾತ್ಮದ ಕಡೆಗೆ ತಿರುಗಿಸಿತು. ಇಂತಹ ಸಮಯದಲ್ಲಿ ತಗಡೂರ್ ಅವರು ಭಾರತದಾದ್ಯಂತ ಓಡಾಡಿದರು. ಕೊನೆಗೆ ಹುಟ್ಟೂರಾದ ಮೈಸೂರಿಗೆ ಹಿಂತಿರುಗಿದರು. ನಂತರ ಇವರು ಜೀವನೋಪಾಯಕ್ಕಾಗಿ ಸಣ್ಣ ವ್ಯಾಪಾರವನ್ನು ಆರಂಭಿಸಿದರು. ಈ ವ್ಯಾಪಾರದಲ್ಲಿ ತಗಡೂರರಿಗೆ ಹಲವು ಸ್ನೇಹಿತರ ಪರಿಚಯವಾಯಿತು. ಜನರಲ್ ಡಯರ್‌ನ ಜಲಿಯನ್ ವಾಲಾಬಾಗ್‌ನ ಹತ್ಯಾಕಾಂಡದ ಚಿತ್ರಗಳು ಮಾರುಕಟ್ಟೆಯಲ್ಲಿ ದೊರಕುತ್ತಿದ್ದವು. ಈ ಚಿತ್ರಗಳ ಮಾರಾಟವನ್ನು ಆಗ ನಿಷೇಧಿಸಿದ್ದರು. ಆದರೆ, ಇವರು ತಳ್ಳುವ ಗಾಡಿಯನ್ನು ಬಾಡಿಗೆಗೆ ತೆಗೆದುಕೊಂಡು ಈ ಚಿತ್ರಗಳ ಮಾರಾಟದ ಮೂಲಕ ಸ್ವಲ್ಪ ಹಣ ಗಳಿಸಿದರು. 1919ರಲ್ಲಿ ಈ ಮಾರಾಟ ಬಿಟ್ಟು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದರು.

ಒಮ್ಮೆ ಇವರ ಸ್ನೇಹಿತರಾಗಿದ್ದ ಮುದುವೀಡು ಕೃಷ್ಣರಾಯರು, ಇವರನ್ನು ತಗಡೂರ್ ಎಂದು ಕರೆದರು. ನಂತರ ಜನಗಳು ಇವರನ್ನು ತಗಡೂರ್ ಎಂದೇ ಗುರುತಿಸಲು ಹಾಗೂ ಕರೆಯಲು ಆರಂಭಿಸಿದರು. ಇವರ ಉಡುಪು ಕೂಡ ರಾಷ್ಟ್ರ ಧ್ವಜವನ್ನು ಪ್ರತಿನಿಧಿಸುತ್ತಿದ್ದಿತು. ತಲೆಗೆ ಕೇಸರಿ ಬಣ್ಣದ ಗಾಂಧೀ ಟೋಪಿ, ಹಸಿರು ಬಣ್ಣದ ಜುಬ್ಬ, ಇದರ ಮೇಲೆಯೇ ಹಲವಾರು ಸ್ವಾತಂತ್ರ್ಯದ ವಾಕ್ಯಗಳನ್ನು ಬರೆದರು. ಹಲವಾರು ಚಳವಳಿಗಳಿಂದ ಪ್ರೇರಿತರಾದ ತಗಡೂರ್ ಅವರನ್ನು, 'ಮೈಸೂರಿನ ಗಾಂಧೀಜಿ' ಎಂದು ಜನರು ಕರೆಯಲು ಆರಂಭಿಸಿದರು. ತಗಡೂರಿನ ಸುತ್ತಮುತ್ತಲ ಹಳ್ಳಿಗಳಲ್ಲಿ ಇವರು ಚರಕದ ಮಹತ್ವವನ್ನು ಜನಗಳಿಗೆ ತಿಳಿಸಿ, ನೂಲುವ ಕಾರ್ಯವನ್ನು ಮಾಡುವಂತೆ ಎಲ್ಲರಿಗೂ ಮನದಟ್ಟು ಮಾಡಿದರು. ಹರಿಜನರಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಿ, ಖಾದಿ ಕೆಲಸದಿಂದ ಹರಿಜನರಿಗೆ ಜೀವನಕ್ಕೆ ಸಾಕಷ್ಟು ಹಣ ಸಿಗುವಂತೆ ತಗಡೂರ್ ಮಾಡಿದರು. ತಗಡೂರಿನಲ್ಲಿ ಖಾದಿ ಬಟ್ಟೆಯ ಉತ್ಪತ್ತಿಗಾಗಿ, 1925ರಲ್ಲಿ **ಕರ್ನಾಟಕ ಖದ್ದರ್ ಪರಸ್ಪರ ಸಹಾಯ ಸಂಘವನ್ನು** ಸ್ಥಾಪಿಸಿದರು.

1928ರಲ್ಲಿ ಖಾದಿಯ ವಿರುದ್ಧ ಮೈಸೂರು ಸರ್ಕಾರ ಶಾಸನವನ್ನು ತಂದಾಗ, ಮೈಸೂರು ಪ್ರಾಂತ್ಯದಲ್ಲಿ ಇವರು ಹೋರಾಟವನ್ನು ಪ್ರಾರಂಭಿಸಿದರು. ಈ ಶಾಸನವನ್ನು ಹಿಂದಕ್ಕೆ ತೆಗೆದುಕೊಳ್ಳುವವರೆಗೂ ಇವರು ಹೋರಾಟವನ್ನು ನಿಲ್ಲಿಸಲಿಲ್ಲ. 1929ರಲ್ಲಿ ಸೈಮನ್ ಕಮಿಷನ್ ವಿರುದ್ಧ ಸತ್ಯಾಗ್ರಹವನ್ನು ನಡೆಸಿ ಇವರು ಮೊದಲ ಬಾರಿಗೆ ಜೈಲುವಾಸ ಅನುಭವಿಸಿದರು. ಖಾದಿಯನ್ನು ಉಳಿಸಲು ಇವರು ಹಲವು ಸಾರಿ ಸತ್ಯಾಗ್ರಹವನ್ನು ಕೈಗೊಂಡರು. ಇವರ ವಿರೋಧಿಗಳು ತಗಡೂರಿನ ಆಶ್ರಮಕ್ಕೆ ಬೆಂಕಿ ಹಾಕಿದಾಗಲೂ, ತಮ್ಮ ಧ್ಯೇಯ ಹಾಗೂ ಧೋರಣೆಗಳನ್ನು ತಗಡೂರರು ಮುಂದುವರಿಸಿದರು. ಖಾದಿ ಪ್ರಚಾರಕ್ಕಾಗಿ ಗಾಂಧೀಜಿ ಯವರು ಮೈಸೂರಿಗೆ 1930ರಲ್ಲಿ ಬಂದಾಗ, ಈ ಭೇಟಿಯ ಜ್ಞಾಪಕಾರ್ಥವಾಗಿ ತಗಡೂರರು **ಹರಿಜನ ವಿದ್ಯಾರ್ಥಿನಿಲಯ** (ಹಾಸ್ಟೆಲ್)ವನ್ನು ಆರಂಭಿಸಿದರು.

ತಗಡೂರರು 1941ರಲ್ಲಿ ಸುಶೀಲಾಬಾಯಿ ಎಂಬುವವರನ್ನು ಪಶ್ಚಿಮವಾಹಿನಿಯಲ್ಲಿ ಕೆಲವು ಹಿತೈಷಿಗಳ ಸಮ್ಮುಖದಲ್ಲಿ ಮದುವೆಯಾದರು. 1942ರಲ್ಲಿ **ಬ್ರಿಟಿಷರೇ ಭಾರತವನ್ನು ಬಿಟ್ಟು ತೊಲಗಿ** ಸತ್ಯಾಗ್ರಹ ಆರಂಭವಾದಾಗ ಇವರು ಸಕ್ರಿಯರಾಗಿ ಭಾಗವಹಿಸಿದರು. ಬ್ರಿಟಿಷ್ ಸರ್ಕಾರ ಇವರಿಗೆ ಎರಡು ವರ್ಷಗಳ ಕಾಲ ಜೈಲು ಶಿಕ್ಷೆ ವಿಧಿಸಿತು.

1957ರಲ್ಲಿ ಭೂ ದಾನ ಚಳುವಳಿಯಲ್ಲಿ ತಗಡೂರರು ಸೇರಿಕೊಂಡರು. ಮೈಸೂರಿನಲ್ಲಿ ಕಾಂಗ್ರೆಸ್ ಆರಂಭ ಹಾಗೂ ಅದರ ಬೆಳವಣಿಗೆಗೂ ಕಾರಣರಾದವರಲ್ಲಿ ತಗಡೂರರು ಪ್ರಮುಖರು. ಗ್ರಾಮೀಣರ ಅಭಿವೃದ್ಧಿಗಾಗಿ ತಮ್ಮ ಜೀವನವನ್ನೇ ಅರ್ಪಿಸಿಕೊಂಡವರು. ತಗಡೂರರ ಪ್ರಯತ್ನದ ಫಲವಾಗಿ **ತಗಡೂರಿನ ಖಾದಿ ಕೇಂದ್ರ** ಪ್ರಸಿದ್ಧಿಯಾಗಿದೆ. ತಗಡೂರರ ಸಹಾಯದಿಂದ ಹಾಗೂ ಖಾದಿ ಕೇಂದ್ರದಿಂದ ಬಂದ ಹಣದಿಂದ ತಗಡೂರಿನಲ್ಲಿ ಒಂದು ಪ್ರೌಢಶಾಲೆ ಆರಂಭವಾಗಿದೆ. ಇದು ಬಡ ವಿದ್ಯಾರ್ಥಿಗಳಿಗೆ ಅತ್ಯಂತ ಉಪಯುಕ್ತವಾಗಿದೆ.

ತಗಡೂರರ ಬಹುಮುಖ ಸೇವೆಯನ್ನು ಗುರುತಿಸಿ ಮೈಸೂರಿನ ಇವರ ಅಭಿಮಾನಿಗಳು 1974ರಲ್ಲಿ **ಕರ್ಮಯೋಗಿ** ಕೃತಿಯನ್ನು ಅರ್ಪಿಸಿದರು. ಈ ಪುಸ್ತಕವು ತಗಡೂರರ ಆತ್ಮಕಥೆಯೂ ಆಗಿದೆ. 1983ರಲ್ಲಿ ಜಮನ್ ಲಾಲ್ ಪ್ರತಿಷ್ಠಾನ ಇವರನ್ನು ಗೌರವಿಸಿದೆ. ಪ್ರಶಸ್ತಿ ಮೊತ್ತ ಒಂದು ಲಕ್ಷ ರೂಪಾಯಿಗಳು. ಇವರು ಮೈಸೂರು ಪ್ರಾಂತ್ಯದ ಭಾರತ–ಚೀನಾ ಸ್ನೇಹ ಸಂಘದ ಮತ್ತು ಭಾರತ–ರಷ್ಯಾ ಸ್ನೇಹ ಸಂಘದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು. 91 ವರ್ಷಗಳ ಸಾರ್ಥಕ ಜೀವನ ನಡೆಸಿ ತಗಡೂರರು 28–12–1988ರಂದು ನಿಧನರಾದರು.

ಸಾಲಿ ರಾಮಚಂದ್ರರಾಯರು: ಇವರು ಜನಿಸಿದ್ದು 1888ರಲ್ಲಿ. ಇವರು ಸ್ವಾತಂತ್ರ್ಯ ಹೋರಾಟಗಾರರು, ಶಿಕ್ಷಕರು ಮತ್ತು ಸಾಹಿತಿ. ಇವರು ಹುಟ್ಟಿದ್ದು ರಾಮದುರ್ಗದಲ್ಲಿ. ಇವರ ಮನೆತನದ ಹಿರಿಯರೆಲ್ಲರೂ ಶಿರಸಂಗಿ ದೇಸಾಯಿಯವರಿಗೆ ವಿದ್ಯಾಗುರುಗಳಾಗಿದ್ದುದರಿಂದ, ಇವರ ಮನೆತನಕ್ಕೆ **ಸಾಲಿ ಮನೆತನ** ಎಂಬ ಹೆಸರಾಯಿತು. ಸಾಲಿಯವರು ಬೆಳೆದದ್ದು ಬಡತನದಲ್ಲಿ. ಚಿಕ್ಕಂದಿನಲ್ಲಿಯೇ ತಂದೆ ಹಾಗೂ ತಾಯಿಯನ್ನು ಕಳೆದುಕೊಂಡ ಇವರು, ಸ್ವಂತ ಪರಿಶ್ರಮದಿಂದ ಬೆಳಗಾವಿ ಮತ್ತು ಬಿಜಾಪುರಗಳಲ್ಲಿ ವ್ಯಾಸಂಗ ಮಾಡಿ, ಆಗಿನ ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ನಂತರ ಇವರು ಅಂಚೆ ಇಲಾಖೆಯಲ್ಲಿ ಕೆಲಸಕ್ಕೆ ಸೇರಿದರು. ಭಾರತ ಸ್ವಾತಂತ್ರ್ಯ ಸಂಗ್ರಾಮದಿಂದ ಪ್ರಭಾವಿತರಾಗಿ, ತಿಲಕರ ಬಂಧನವಾದಾಗ, ಇವರು ಅಂಚೆ ಕಚೇರಿಯ ಕೆಲಸಕ್ಕೆ ರಾಜೀನಾಮೆ ನೀಡಿ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದರು. ಪುಣೆ ಮತ್ತು ಮುಂಬಯಿಗಳಲ್ಲಿ ತಮ್ಮ ಬದುಕಿನ ನಾಲ್ಕು ವರ್ಷಗಳನ್ನು ಕಳೆದು 1923ರಲ್ಲಿ ಧಾರವಾಡಕ್ಕೆ ಬಂದು ಇವರು ನೆಲೆಸಿದರು. 1923ರ ಮೇ ತಿಂಗಳಿನಲ್ಲಿ ಆರಂಭವಾದ **ಕರ್ನಾಟಕ ವಿದ್ಯಾ ಸಂಸ್ಥೆಯಲ್ಲಿ** ಶಿಕ್ಷಕರಾಗಿ ಇವರು ಈ ಸಂಸ್ಥೆಯ ಬೆಳವಣಿಗೆಯಲ್ಲಿ ಶ್ರಮಿಸಿದರು. 1946ರಲ್ಲಿ ಶಿಕ್ಷಕ ವೃತ್ತಿಯಿಂದ ನಿವೃತ್ತರಾದರು.

ಸಂಸ್ಕೃತ, ಕನ್ನಡ, ಇಂಗ್ಲಿಷ್, ಪಾಲಿ, ಮರಾಠೀ ಮತ್ತು ಗುಜರಾತೀ ಭಾಷೆಗಳಲ್ಲಿ ವಿದ್ವಾಂಸರಾಗಿದ್ದ ಸಾಲಿಯವರು, ಆಲೂರ ವೆಂಕಟರಾವ್, ಮುದವೀಡು ಕೃಷ್ಣರಾವ್, ರೊದ್ದ ಶ್ರೀನಿವಾಸರಾವ್ ಮುಂತಾದ ಪ್ರಸಿದ್ಧರಾದ ಕನ್ನಡ ಕಾರ್ಯಕರ್ತರ ಸ್ನೇಹ ಹಾಗೂ ಸಹವಾಸಗಳಿಂದ ಸ್ಫೂರ್ತಿಗೊಂಡು ಹದಿನಾರು ಕೃತಿಗಳನ್ನು ಪ್ರಕಟಿಸಿದ್ದಾರೆ. ಸಾಲಿಯವರು ಪ್ರಕಟಿಸಿದ ಮೊದಲನೆಯ ಕವನ **ಹಂಬಲು** ಎಂಬುದು ಒಂದು ದೇಶಭಕ್ತಿ ಗೀತೆ. **ಚಿಗುರೆಲೆ, ಚಿತ್ರಸೃಷ್ಟಿ** ಸಾಲಿಯವರು ಪ್ರಕಟಿಸಿದ ಎರಡು ಕವನ ಸಂಗ್ರಹಗಳು. ಈ ಕವನದಲ್ಲಿರುವ **ಸೊಗಸು, ಬಿರುಗಾಳಿ, ಕಾರ್ಮೋಡ** ಮುಂತಾದ ಕವನಗಳಲ್ಲಿ ಸಾಲಿಯವರ **ಪ್ರಕೃತಿ ಪ್ರೇಮ** ಹಾಗೂ **ದೇಶಭಕ್ತಿಯನ್ನೂ** ಕಾಣಬಹುದು. **ಅಭಿಸಾರಿಕೆ** ಎಂಬುದು ಇವರು ರಚಿಸಿರುವ ಸುಂದರ ಕವನ. ಇವರು ಬರೆದ ಎರಡನೆಯ ಕವನವೇ **ತಿಲಾಂಜಲಿ**. ಇದೊಂದು ಶೋಕ ಗೀತೆ. ಆಕಸ್ಮಿಕವಾಗಿ ಅಗಲಿದ ಇವರ ಮಗನನ್ನು ಕುರಿತು 1961ರಲ್ಲಿ **ಯದುಪತಿ** ಎಂಬ ಕಾದಂಬರಿ. ಈ ಕಾದಂಬರಿಯು ಬಡ ವಿದ್ಯಾರ್ಥಿಯೊಬ್ಬನು ಬಾಳಿದ ಕಥೆಯನ್ನು ತಿಳಿಸುತ್ತದೆ. ಈ ಕಾದಂಬರಿಯು ಸಾಲಿಯವರ ಸರಳ ಹಾಗೂ ಉತ್ತಮ ಗದ್ಯಕ್ಕೆ ಸಾಕ್ಷಿಯಾಗಿದೆ.

ಜಯ ಗುರುದೇವ ಎಂಬುದು ಸಾಲಿಯವರು ಬರೆದ ಇನ್ನೊಂದು ಕಾದಂಬರಿ. ಮಕ್ಕಳಿಗಾಗಿ **ಸಿಪಾಯಪ್ಪ, ಐದು ಪ್ರಾಣಿಗಳು** ಪುಸ್ತಕಗಳನ್ನು ಬರೆದಿದ್ದಾರೆ. **ಸುಕನ್ಯ** ಎಂಬುದು ಸಾಲಿಯವರು ಬರೆದಿರುವ ನಾಟಕ. ಪಾಲಿ ಭಾಷೆಯಿಂದ **ಬುದ್ಧನ ಉಪದೇಶಗಳು** ಎಂಬುದನ್ನು ಸಾಲಿಯವರೇ ಕನ್ನಡ ಭಾಷೆಗೆ ಭಾಷಾಂತರಿಸಿದ್ದಾರೆ. ವಿನೋಭಾರವರ **ಸ್ಥಿತ ಪ್ರಜ್ಞದರ್ಶನವನ್ನು** ಮತ್ತು ಕಾಕಾ ಕಾಲೇಲ್ಕರ್ ಅವರ ಜೀವನ ಲೀಲೆಯನ್ನು ಸಾಲಿಯವರೇ ಕನ್ನಡ ಭಾಷೆಗೆ ಅನುವಾದ ಮಾಡಿದ್ದಾರೆ. **ಸುಧಾಮ ಚರಿತ್ರಂ** ಮತ್ತು **ಗದ್ಯ ರಾಮಾಯಣಂ** ಎಂಬ ಎರಡು ಕೃತಿ ಗಳನ್ನು ಸಂಸ್ಕೃತದಲ್ಲಿ ಸಾಲಿಯವರು ಬರೆದಿದ್ದಾರೆ.

ಸಾಲಿ ರಾಮಚಂದ್ರರಾಯರ ಸಾಹಿತ್ಯ ಸೇವೆಯನ್ನು ಗುರುತಿಸಿ, ಇವರ ಎಂಭತ್ತು ಮತ್ತು ತೊಂಭತ್ತನೆಯ ಹುಟ್ಟುಹಬ್ಬಗಳನ್ನು ಸಾರ್ವಜನಿಕವಾಗಿ ಆಚರಿಸಲಾಯಿತು. 1968ರಲ್ಲಿ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯು ಸಾಲಿಯವರಿಗೆ ಪ್ರಶಸ್ತಿ ನೀಡಿ ಗೌರವಿಸಿತು. ಸಾಲಿಯವರು ತಮ್ಮ ತೊಂಭತ್ತನೆಯ ವಯಸ್ಸಿನಲ್ಲಿ 1978ರಲ್ಲಿ ಧಾರವಾಡದಲ್ಲಿ ನಿಧನ ಹೊಂದಿದರು.

ರಾಮದಾಸ: ಇವರು ಮಹಾರಾಷ್ಟ್ರದ ಜಾಂಬಗಾವ್‌ನಲ್ಲಿ 1608ರಲ್ಲಿ ಜನಿಸಿದರು. ಇವರ ಪೂರ್ವಾಶ್ರಮದ ಹೆಸರು ನಾರಾಯಣ. ರಾಮದಾಸನ ಪೂರ್ವಜರು **ಠೋಸರ್** ಮನೆತನದವರು. ಇವರ ತಂದೆ ಸೂರ್ಯಾಜಿ ಪಂತ ಠೋಸರ್ ಮನೆತನದವರು. ರಾಮದಾಸನ ತಾಯಿ **ರಾಣೂ ಬಾಯಿ**. ರಾಮದಾಸನು ಅಧ್ಯಯನದಲ್ಲಿ ಚುರುಕಾಗಿದ್ದರೂ, ತುಂಬ ತುಂಟನಾಗಿದ್ದನು. ಜಾಂಬಗಾವ್‌ನಲ್ಲಿದ್ದ ಆಂಜನೇಯಸ್ವಾಮಿ ರಾಮದಾಸನ ಆರಾಧ್ಯ ದೇವತೆ. ರಾಮದಾಸನಿಗೆ ಮದುವೆ ಮಾಡಿದರೆ ಆತನ ತುಂಟತನ ಕಡಿಮೆಯಾಗಬಹುದು ಎಂದು ಯೋಚಿಸಿ, ಇವನ ತಾಯಿ ರಾಣೂ ಬಾಯಿಯು ಮದುವೆಯನ್ನು ಏರ್ಪಡಿಸಿದಳು. ಮದುವೆಯ ಮಂಟಪದಲ್ಲಿ **ಮಂಗಳಾಷ್ಟಕವನ್ನು** ಆರಂಭಿಸಿದಾಗ, ಬ್ರಾಹ್ಮಣರು ಸುಮುಹೂರ್ತ ಸಾವಧಾನ ಎಂದು ಹೇಳುತ್ತಿರುವಾಗ ರಾಮದಾಸನು ಮದುವೆ ಮಂಟಪದಿಂದ ಹೊರಗೆ ಹೊರಟು ಹೋದನು. ಲಗ್ನ ಮಂಟಪದಿಂದ ರಾಮದಾಸ ಗೋದಾವರೀ–ನಂದಿನೀ ಸಂಗಮ ಕ್ಷೇತ್ರ ಮುಂತಾದ ಕಡೆಗಳಲ್ಲಿ ತಪಸ್ಸಾಚರಿಸಿದ. ಗೋದಾವರೀ ತೀರದಿಂದ ಹಿಮಾಲಯದ ಬದರೀ ಕ್ಷೇತ್ರದವರೆಗೆ ಸಂಚಾರ ಮಾಡಿದ. ನಂತರ ತಾಯಿಯ ದರ್ಶನಕ್ಕಾಗಿ ಜಾಂಬಗಾವ್‌ಗೆ ಬಂದನು. ವಯೋವೃದ್ಧೆ ತಾಯಿಯ ದರ್ಶನ ಹಾಗೂ ಆಕೆಯ ಆಶೀರ್ವಾದ ಪಡೆದು, ಮತ್ತೆ ಹೊರಟು ಕೃಷ್ಣಾ ನದಿಯ ತೀರದ ಅನೇಕ ಸ್ಥಳಗಳಲ್ಲಿ ಆಂಜನೇಯನ ಮೂರ್ತಿಗಳನ್ನು ಪ್ರತಿಷ್ಠಾಪಿಸಿದನು. ರಾಮದಾಸನು ಜಾಫಳ ಗ್ರಾಮದಲ್ಲಿ ರಾಮಮಂದಿರವನ್ನು ಕಟ್ಟಿಸಿ, ಅಲ್ಲಿಯೇ ವಾಸಿಸಲು ಆರಂಭಿಸಿದನು. ರಾಮದಾಸ ಕಟ್ಟಿಸಿದ ಈ ರಾಮಮಂದಿರಕ್ಕೆ ಶಿವಾಜಿ ಮಹಾರಾಜರು ಹಾಗೂ ಆದಿಲ್ ಷಾಹೀ ಸುಲ್ತಾನರು, ಹಲವು ಶ್ರೀಮಂತರು ದಾನ ಮತ್ತು ದತ್ತಿಗಳನ್ನು ಕೊಟ್ಟಿದ್ದಾರೆ.

ಏಕ ದೇವತಾ ಉಪಾಸನೆಯನ್ನು ಭಕ್ತಿ ಮಾರ್ಗದ ಮೂಲಕ ಪರಮಾತ್ಮನ ಕಡೆಗೆ ಮನಸ್ಸನ್ನು ಹರಿಸಲು ಅವಶ್ಯಕವಾದ ಪದ್ಧತಿಯನ್ನು ರಾಮದಾಸನು ಆರಂಭಿಸಿದನು. ಇದನ್ನು **ರಾಮದಾಸೀ ಸಂಪ್ರದಾಯ, ಶ್ರೀ ಸಂಪ್ರದಾಯ, ಸಮರ್ಥ ಸಂಪ್ರದಾಯ, ದಾಸ ಸಂಪ್ರದಾಯ, ಮಹಾರಾಷ್ಟ್ರ ಸಂಪ್ರದಾಯ, ರಾಘವನ ಧರ್ಮ** ಮುಂತಾದ ಹೆಸರುಗಳಿಂದ ಗುರುತಿಸಲಾಗುತ್ತಿದೆ. ಈ ಸಂಪ್ರದಾಯದ ಕಾರ್ಯ, **ಕಾರ್ಯದ ಸಂಪ್ರದಾಯ** ಹಾಗೂ **ಸಮಾಜ ಸುಧಾರಣೆ** ಮುಂತಾದ ನೀತಿಗಳನ್ನು, ರಾಮದಾಸನು ರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ಮಾಡಿದನು. ರಾಮದಾಸನ ಉಪದೇಶಗಳೂ ಹೆಚ್ಚಿನ ಸಂಖ್ಯೆಯಲ್ಲಿವೆ. **ದಾಸಬೋಧ, ರಾಮಾಯಣ, ಪಂಚೀಕರಣ** ಮುಂತಾದವು ರಾಮದಾಸನು ಬರೆದ ಕೃತಿಗಳು. ಇವುಗಳಲ್ಲಿ **ದಾಸಬೋಧವು** ಹೆಚ್ಚು ಪ್ರಸಿದ್ಧವಾದುದು. ಆದುದರಿಂದ ಇದು ಕನ್ನಡಕ್ಕೂ ಭಾಷಾಂತರಗೊಂಡಿದೆ. **ಐಹಿಕ ಸುಖ, ಪರಮಾರ್ಥ** (ಆಧ್ಯಾತ್ಮದ) ಸಮನ್ವಯವೇ ಇವುಗಳ ಮುಖ್ಯ ಉದ್ದೇಶ. ರಾಮದಾಸನು ತನ್ನ ಹುಟ್ಟೂರಾದ ಜಾಂಬಗಾವ್‌ನಲ್ಲಿ 1681ರಲ್ಲಿ ನಿಧನನಾದನು. ಅವನ ಬೋಧನೆಗಳಿಂದ ಅಮರನಾಗಿದ್ದಾನೆ.

ನಟೇಶನ್: ಇವರು 24–8–1873ರಂದು ತಮಿಳುನಾಡಿನ ತಂಜಾವೂರು ಜಿಲ್ಲೆಯ ಗಣಪತಿ **ಅಗ್ರಹಾರಂ** ಎಂಬ ಹಳ್ಳಿಯಲ್ಲಿ ಜನಿಸಿದರು. ಇವರು ಕುಂಭಕೋಣಂನ ಪ್ರೌಢಶಾಲೆಯಲ್ಲೂ ಮತ್ತು ತಿರುಚ್ಚರಪಳ್ಳಿಯ ಸೇಂಟ್ ಜೋಸೆಫ್ ಮತ್ತು ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಓದಿ 1897ರಲ್ಲಿ ಪದವೀಧರರಾದರು.

ನಟೇಶನ್ ಅವರು ತಮ್ಮ ಅಣ್ಣನವರ ಸಂಸ್ಥೆಯನ್ನು ಸೇರಿ ಭಾರತೀಯ ಪುನರುಜ್ಜೀವನಕ್ಕೆ ಸಂಬಂಧಿಸಿದ ಗ್ರಂಥ ಪ್ರಕಟಣೆಯಲ್ಲಿ ವಿಶೇಷ ಆಸಕ್ತಿಯನ್ನು ತೋರಿಸಿದರು ಹಾಗೂ ರಾಷ್ಟ್ರಾಭಿಮಾನ ಕಾರ್ಯದಲ್ಲಿಯೂ ಹೆಚ್ಚಿನ ಆಸಕ್ತಿಯನ್ನು ತೋರಿಸಿದರು. ಇದರಿಂದ ಪ್ರೋತ್ಸಾಹಿತರಾದ ನಟೇಶನ್ ಅವರು, ತಮ್ಮ ಅಣ್ಣನೊಂದಿಗೆ **ಇಂಡಿಯನ್ ಪಾಲಿಟಿಕ್ಸ್** ಎಂಬ ಮಾಸ ಪತ್ರಿಕೆಯನ್ನು ಆರಂಭಿಸಿದರು. ಭಾರತಕ್ಕೆ ಸ್ವಾತಂತ್ರ್ಯ ನೀಡುವಂತೆ ಮಾಡುವುದೇ ನಟೇಶನ್‌ರ ಉದ್ದೇಶವಾಗಿತ್ತು. 1909ರಲ್ಲಿ ನಟೇಶನ್ ಅವರಿಂದ **'ಇಂಡಿಯನ್ ರೆವ್ಯೂ'** ಎಂಬ ಪತ್ರಿಕೆ ಆರಂಭವಾಯಿತು. ಈ ಪತ್ರಿಕೆಯಲ್ಲಿ ಆರ್.ಸಿ.ದತ್, ಗೋಪಾಲಕೃಷ್ಣ ಗೋಖಲೆ, ಅನಿಬೆಸೆಂಟ್, ಸಿ.ಎಫ್.ಆಂಡ್ರೂಸ್ ಹಾಗೂ ಗಾಂಧೀಜಿ ಮುಂತಾದವರು ಇಂಡಿಯನ್ ರೆವ್ಯೂ ಪತ್ರಿಕೆಗೆ ಬರೆಯುತ್ತಿದ್ದರು. 1916ರಲ್ಲಿ ಗಾಂಧೀಜಿಯವರನ್ನು ಮದರಾಸಿಗೆ ಬರಮಾಡಿಕೊಂಡು, ನಟೇಶನ್ ಅವರು ತಮಿಳುನಾಡಿಗೆ ಪರಿಚಯ ಮಾಡಿಕೊಟ್ಟರು. ನಟೇಶನ್ ಅವರ ಪ್ರಭಾವದಿಂದಾಗಿ ತಮಿಳುನಾಡಿನ ಅನೇಕ ಬುದ್ಧಿಜೀವಿಗಳೂ ಹಾಗೂ ರಾಜಕಾರಣಿಗಳು ಗಾಂಧೀಜಿಯವರ ಪ್ರಭಾವಕ್ಕೊಳಗಾದರು.

ನಟೇಶನ್ ಅವರು ಗಾಂಧೀಜಿಯವರ ಸತ್ಯಾಗ್ರಹ ಚಳುವಳಿಯನ್ನು ಒಪ್ಪಲಿಲ್ಲ. ಆದರೂ ನಟೇಶನ್ ಮತ್ತು ಗಾಂಧೀಜಿಯವರ ನಡುವೆ ಸ್ನೇಹ ಮತ್ತು ಗೌರವದ ಭಾವನೆಗಳೇ ಇದ್ದವು. ಅಷ್ಟೇ ಅಲ್ಲದೆ ನಟೇಶನ್ ಅವರು ಮದರಾಸ್ ಕಾರ್ಪೊರೇಷನ್ನಿನ ಸದಸ್ಯರು ಮತ್ತು ಮದರಾಸ್ ವಿಶ್ವವಿದ್ಯಾನಿಲಯದ ಸೆನೆಟ್ ಮತ್ತು ಸಿಂಡಿಕೇಟ್ ಸದಸ್ಯರಾಗಿದ್ದರು. ಬ್ರಿಟಿಷ್ ಸರ್ಕಾರ ನಟೇಶನ್ ಅವರಿಗೆ **ರಾವ್ ಬಹದ್ದೂರ್** ಎಂಬ ಬಿರುದನ್ನು ನೀಡಿತ್ತು. 1935ರಲ್ಲಿ ನಟೇಶನ್ ಅವರು ಮದರಾಸ್ ಸರ್ಕಾರದ ಶರೀಫರಾಗಿದ್ದರು. ನಟೇಶನ್ ಅವರು **ಬಕಿಂಗ್ ಹ್ಯಾಂ** ಮತ್ತು ಕರ್ನಾಟಕ ಮಿಲ್‌ನ ನಿರ್ದೇಶಕರಾಗಿ ಈ ಎರಡೂ ಮಿಲ್‌ಗಳ ಸಮಸ್ಯೆಗಳನ್ನು ಪರಿಹರಿಸಿದರು. 1936ರಲ್ಲಿ **ಇಂಡಿಯನ್ ಟ್ಯಾರಿಫ್** ಬೋರ್ಡ್‌ಗೆ ನಟೇಶನ್ ನೇಮಕಗೊಂಡು, ಭಾರತದ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗೆ ಸೂಕ್ತ ರಕ್ಷಣೆ ಕೊಡಬೇಕೆಂದು ಹೇಳಿದರು. 1920ರಲ್ಲಿ ಕೆನಡಾದಲ್ಲಿ ಸೇರಿದ್ದ **ಸಾಮ್ರಾಜ್ಯ ಎಂಪೈರ್ ಪಾರ್ಲಿಮೆಂಟರಿ** ಸಂಘದಲ್ಲಿ ಭಾಗವಹಿಸಿದ ಭಾರತೀಯ ನಿಯೋಗದ ಸದಸ್ಯರಲ್ಲಿ ನಟೇಶ್ ಕೂಡ ಒಬ್ಬರು.

ನಟೇಶನ್‌ರು ಉದಾರವಾದಿ, ಮಾನವತಾವಾದಿ ಮತ್ತು ಸಂಸ್ಕೃತ ಭಾಷೆಯಲ್ಲಿ ಉತ್ತಮ ಪಂಡಿತರೂ ಆಗಿದ್ದರು. ಇಂಗ್ಲಿಷ್ ಶಿಕ್ಷಣ ಪಡೆದ ಆಚಾರಶೀಲರಾದರೂ, ವಿಶಾಲ ಮನೋಭಾವ ಉಳ್ಳವರಾಗಿದ್ದರು. ಹರಿಜನರ ಉದ್ಧಾರಕ್ಕಾಗಿಯೂ ಅವರ ಸಾಮಾ ಜಿಕ ಸಮಾನತೆಗಾಗಿಯೂ ದುಡಿದರು. ಇಂಡಿ ಯನ್ ಸಿವಿಲ್ ಸರ್ವಿಸ್(ಐ.ಸಿ.ಎಸ್.) ಪರೀಕ್ಷೆಯನ್ನು ಭಾರತದಲ್ಲಿ ನಡೆಸಲು ನಟೇಶನ್ ಅವರೂ ಕಾರಣರು. 1900 ರಿಂದ ಸುಮಾರು ಐವತ್ತು ವರ್ಷಗಳ ಕಾಲ ನಟೇಶನ್ ಅವರು ಇಂಡಿಯನ್ ರೆವ್ಯೂನ ಸಂಪಾ ದಕರಾಗಿ ಅನೇಕ ಸಮಸ್ಯೆಗಳತ್ತ ಜನರ ಗಮನವನ್ನು ಸೆಳೆಯುತ್ತಿದ್ದರಲ್ಲದೆ, ಸಾರ್ವಜನಿಕ ಜೀವನದಲ್ಲಿ ಮಾನವನ ಘನತೆ ಮತ್ತು ಮೌಲ್ಯಗಳನ್ನು ಪ್ರತಿಪಾದಿಸಿದರು. ನಟೇಶನ್ ಅವರು 10–1–1949ರಂದು ನಿಧನರಾದರು.

ಮೈಸೂರು ಜಿಲ್ಲೆಯಲ್ಲಿ ಚರ್ಮಗಂಟು ರೋಗ ಸದ್ಯ ನಿಯಂತ್ರಣಕ್ಕೆ

ಚಿಕಿತ್ಸೆ ಜೊತೆಗೆ ಸಮರೋಪಾದಿ ಲಸಿಕೆ ಅಭಿಯಾನದ ಫಲ

ಮೈಸೂರು, ಡಿ.25(ಎಸ್‌ಬಿಡಿ)– ಹೈನುಗಾರಿಕೆ ನಂಬಿರುವ ರೈತರಲ್ಲಿ ಆತಂಕ ಸೃಷ್ಟಿಸಿದ್ದ ಚರ್ಮಗಂಟು ರೋಗ ಮೈಸೂರು ಜಿಲ್ಲೆಯಲ್ಲಿ ಸದ್ಯ ನಿಯಂತ್ರಣಕ್ಕೆ ಬಂದಿದೆ. ಕಳೆದ ಮೂರ್ನಾಲ್ಕು ತಿಂಗಳಿಂದ ಜಾನುವಾರುಗಳನ್ನು ಬಾಧಿಸಿದ ಚರ್ಮಗಂಟು ರೋಗ, ಎಲ್ಲೆಡೆ ವ್ಯಾಪಿಸಿದ್ದರಿಂದ ರೈತರು ಕಂಗಾಲಾಗಿದ್ದರು. ನಿತ್ಯ ಜಿಲ್ಲೆಯಲ್ಲಿ 40–50 ಚರ್ಮಗಂಟು ರೋಗ ಪ್ರಕರಣಗಳು ಪತ್ತೆಯಾಗುತ್ತಿದ್ದ ಕಾರಣ ಪಶುಪಾಲನಾ ಹಾಗೂ ಪಶುವೈದ್ಯಕೀಯ ಸೇವಾ ಇಲಾಖೆ ರೋಗ ಬಾಧಿತ ಜಾನುವಾರುಗಳಿಗೆ ಚಿಕಿತ್ಸೆ ಕಲ್ಪಿಸುವುದರ ಜೊತೆಗೆ ಹರಡದಂತೆ ಲಸಿಕೆ ನೀಡಲು ಸಮರೋಪಾದಿಯಲ್ಲಿ ಕಾರ್ಯ ನಿರ್ವಹಿಸಿದರು. ಪರಿಣಾಮ ಜಿಲ್ಲೆಯಲ್ಲಿ ಈ ರೋಗ ನಿಯಂತ್ರಣಕ್ಕೆ ಬಂದಿದ್ದು, ಹೊಸ ಪ್ರಕರಣಗಳ ಸಂಖ್ಯೆ ಗಣನೀಯವಾಗಿ ಕ್ಷೀಣಿಸಿದೆ.

ಈ ಸಂಬಂಧ ಪಶುಪಾಲನಾ ಇಲಾಖೆಯ ಉಪನಿರ್ದೇಶಕ ಡಾ.ಷಡಕ್ಷರಮೂರ್ತಿ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿ, ಜಿಲ್ಲೆಯಲ್ಲಿ ಚರ್ಮಗಂಟು ರೋಗ ನಿಯಂತ್ರಣದಲ್ಲಿದ್ದು, ದಿನದಲ್ಲಿ ಕೇವಲ 10–15 ಹೊಸ ಪ್ರಕರಣಗಳು ಪತ್ತೆಯಾಗುತ್ತಿವೆ. ರೋಗ ಬಾಧಿತ 550 ಜಾನುವಾರುಗಳಿಗೆ ಚಿಕಿತ್ಸೆ ನೀಡಲಾಗುತ್ತಿದ್ದು, ಅವುಗಳ ಆರೋಗ್ಯ ಸ್ಥಿತಿ ಸುಧಾರಿಸುತ್ತಿದೆ. ರೋಗ ಹರಡದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಲಸಿಕೆ ನೀಡಲಾಗಿದೆ. ಒಟ್ಟು 5.15 ಲಕ್ಷ ಲಸಿಕೆ ಗುರಿಯಲ್ಲಿ ಇಂದಿಗೆ 4.50 ಲಕ್ಷ ಲಸಿಕೆ ನೀಡಲಾಗಿದ್ದು ಶೇ.80ರಷ್ಟು ಸಾಧನೆಯಾಗಿದೆ. ಇನ್ನು ಮೂರ್ನಾಲ್ಕು ದಿನಗಳಲ್ಲಿ ಲಸಿಕೆ ಕಾರ್ಯ ಮುಗಿಯಲಿದೆ ಎಂದರು.



ಈವರೆಗೆ ಜಿಲ್ಲೆಯಲ್ಲಿ 189 ಜಾನುವಾರುಗಳು ಚರ್ಮಗಂಟು ರೋಗದಿಂದ ಸಾವನ್ನಪ್ಪಿದ್ದು, ಈ ಸಂಖ್ಯೆ ಹೆಚ್ಚದಂತೆ ನಿಗಾ ವಹಿಸಲಾಗಿದೆ. ಇನ್ನೆರಡು ವಾರಗಳಲ್ಲಿ ಶೂನ್ಯ ಪ್ರಕರಣಕ್ಕಿಳಿಯುವ ನಿರೀಕ್ಷೆಯಿದ್ದು, ಪರಿಸ್ಥಿತಿ ನೋಡಿಕೊಂಡು ಜಾನುವಾರು ಜಾತ್ರೆ ಹಾಗೂ ಸಂತೆಗೆ ಜನವರಿ 10ರವರೆಗೆ ವಿಧಿಸಿರುವ ನಿರ್ಬಂಧ ಸಂಬಂಧ ಜಿಲ್ಲಾಡಳಿತ ನಿರ್ಧರಿಸಲಿದೆ. ಚರ್ಮಗಂಟು ರೋಗ ಕಾಣಿಸಿಕೊಂಡ ಜಾನುವಾರುಗಳನ್ನು ಪ್ರತ್ಯೇಕವಾಗಿಟ್ಟು, ಆರೈಕೆ ಮಾಡುವುದು. ಲಸಿಕೆಯನ್ನು ತಪ್ಪದೇ ಹಾಕಿಸುವುದು ಇನ್ನಿತರ ಮುಂಜಾಗ್ರತಾ ಕ್ರಮ ವಹಿಸಿದರೆ ರೋಗ ಹರಡದಂತೆ ನಿಯಂತ್ರಿಸಬಹುದು ಎಂದು ಪಶುಪಾಲಕರಿಗೆ ಸಲಹೆ ನೀಡಿದ್ದಾರೆ.

ಸಿಬ್ಬಂದಿ ಕೊರತೆ?: ಹಸು, ಎತ್ತು, ಕೋಣ, ಎಮ್ಮೆ ಸೇರಿ ಒಟ್ಟು 5.14 ಲಕ್ಷ ರಾಸುಗಳಿದ್ದು, ಮೂರೂವರೆ ಸಾವಿರ ಜಾನುವಾರುಗಳನ್ನು ಚರ್ಮಗಂಟು ರೋಗ ಬಾಧಿಸಿದೆ. ಇದರಲ್ಲಿ ಚಿಕಿತ್ಸೆ ಫಲಕಾರಿಯಾಗದೆ 189 ಸಾವನ್ನಪ್ಪಿದ್ದು ಉಳಿದ ರಾಸುಗಳು ಚೇತರಿಸಿಕೊಂಡಿವೆ. ಸದ್ಯ ಸುಮಾರು 550 ಸಕ್ರಿಯ ಪ್ರಕರಣಗಳಿವೆ. ಚರ್ಮಗಂಟು ರೋಗ ಒಂದರಿಂದ ಮತ್ತೊಂದಕ್ಕೆ ಹರಡುವುದರಿಂದ ಮುನ್ನೆಚ್ಚರಿಕೆ ವಹಿಸದಿದ್ದರೆ ಎಲ್ಲೆಡೆ ವ್ಯಾಪಿಸುತ್ತದೆ. ಒಂದು ಪ್ರಕರಣ ಪತ್ತೆಯಾದಾಗಲೇ ಜಿಲ್ಲೆಯೆಲ್ಲೆಡೆ ರೈತರಿಗೆ ಜಾಗೃತಿ ಮೂಡಿಸುವುದರ ಜೊತೆಗೆ ಲಸಿಕೆ ಕಾರ್ಯ ತ್ವರಿತವಾಗಿ ನಡೆಯಬೇಕು. ಜೊತೆಗೆ ರೋಗ ಬಾಧಿತ ರಾಸುಗಳಿಗೆ ಸಕಾಲದಲ್ಲಿ ಸೂಕ್ತ ಚಿಕಿತ್ಸೆ ಕಲ್ಪಿಸಬೇಕು. ಆದರೆ ಜಿಲ್ಲೆಯಲ್ಲಿ ಪಶು ವೈದ್ಯರು, ವೆಟರ್ನರಿ ಇನ್ಸ್‌ಪೆಕ್ಟರ್, ಡಿ ಗ್ರೂಪ್ ನೌಕರರು ಸೇರಿದಂತೆ 750ಕ್ಕೂ ಹೆಚ್ಚು ಸಿಬ್ಬಂದಿ ಕೊರತೆ ಇರುವುದರಿಂದ ಈ ರೀತಿಯ ಸಾಂಕ್ರಮಿಕ ಪರಿಸ್ಥಿತಿಯನ್ನು ನಿರ್ವಹಿಸುವುದು ಕಷ್ಟಸಾಧ್ಯವಾಗಿದೆ ಎಂದು ಮೂಲಗಳು ತಿಳಿಸಿವೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಬಾಂಗ್ಲಾ ವಿರುದ್ಧದ ಟೆಸ್ಟ್ ಸರಣಿ ಕ್ಲೀನ್‌ಸ್ವೀಪ್ ಮಾಡಿದ ಭಾರತ

ಅಶ್ವಿನ್ ಪಂದ್ಯಶ್ರೇಷ್ಠ, ಚೇತೇಶ್ವರ ಪೂಜಾರ ಸರಣಿ ಶ್ರೇಷ್ಠ



ಢಾಕಾ, ಡಿ.25– ರವಿಚಂದ್ರನ್ ಅಶ್ವಿನ್ ಅವರ ಆಲ್‌ರೌಂಡ್ ಆಟದ ನೆರವಿನಿಂದ ಭಾರತ ಬಾಂಗ್ಲಾದೇಶ ವಿರುದ್ಧದ 2ನೇ ಟೆಸ್ಟ್ ಪಂದ್ಯವನ್ನು 3 ವಿಕೆಟ್‌ಗಳಿಂದ ಜಯಿಸಿದೆ. ಆ ಮೂಲಕ 2 ಪಂದ್ಯಗಳ ಟೆಸ್ಟ್ ಸರಣಿಯನ್ನು 2–0ರಿಂದ ಅಂತರದಲ್ಲಿ ಕ್ಲೀನ್‌ಸ್ವೀಪ್ ಮಾಡಿದೆ.

ಇಲ್ಲಿನ ಶೇರ್ ಎ ಬಾಂಗ್ಲಾ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಬಾಂಗ್ಲಾದೇಶ ಮೊದಲ ಇನ್ನಿಂಗ್ಸ್‌ನಲ್ಲಿ 227 ರನ್‌ಗಳಿಗೆ ಆಲೌಟಾಯಿತು. ಇದಕ್ಕುತ್ತರವಾಗಿ ಭಾರತ 314 ರನ್ ಗಳಿಸಿ 87 ರನ್‌ಗಳ ಮಹತ್ವದ ಮುನ್ನಡೆ ಸಾಧಿಸಿತ್ತು. ಇನ್ನು 2ನೇ ಇನ್ನಿಂಗ್ಸ್‌ನಲ್ಲಿ ಬಾಂಗ್ಲಾದೇಶ 231 ರನ್‌ಗಳಿಗೆ ಆಲೌಟಾಗುವ ಮೂಲಕ ಭಾರತಕ್ಕೆ 145 ರನ್‌ಗಳ ಸಾಧಾರಣ ಗೆಲುವಿನ ಗುರಿ ನೀಡಿತ್ತು.

2ನೇ ಇನ್ನಿಂಗ್ಸ್‌ನಲ್ಲಿ ಬಾಂಗ್ಲಾ ನೀಡಿದ್ದ ಸಾಧಾರಣ ಗೆಲುವಿನ ಗುರಿ ಬೆನ್ನತ್ತಿದ ಭಾರತ 3ನೇ ದಿನದಂತ್ಯಕ್ಕೆ 4 ವಿಕೆಟ್ ನಷ್ಟಕ್ಕೆ 45 ರನ್ ಗಳಿಸಿ ಸಂಕಷ್ಟಕ್ಕೆ ಸಿಲುಕಿತ್ತು. ಭಾನುವಾರ ನಾಲ್ಕನೇ ದಿನದಾಟ ಆರಂಭಿಸಿದ ಭಾರತ 13 ರನ್ ಗಳಿಸಿದ್ದ ಜಯದೇವ್ ಉನಾದ್ಕಟ್ ವಿಕೆಟ್ ಕಳೆದುಕೊಂಡಿತು. ಬಳಿಕ ಬಂದ ರಿಷಬ್ ಪಂತ್ ಕೇವಲ 9 ರನ್ ಗಳಿಸಿ ನಿರ್ಗಮಿಸಿದರು. ಈ ವೇಳೆ ಉತ್ತಮವಾಗಿ ಆಡುತ್ತಿದ್ದ ಅಕ್ಷರ್ ಪಟೇಲ್ ಸಹ 34ರನ್ ಗಳಿಸಿ ಪೆವಿಲಿಯನ್ ಸೇರಿಕೊಂಡರು. ಈ ವೇಳೆ ಭಾರತ 74 ರನ್‌ಗಳಿಗೆ 7 ವಿಕೆಟ್ ಕಳೆದುಕೊಂಡು ಮತ್ತಷ್ಟು ಸಂಕಷ್ಟಕ್ಕೆ ಸಿಲುಕಿತ್ತು. ಇನ್ನೇನು ಬಾಂಗ್ಲಾದೇಶ ಗೆಲುವು ಸಾಧಿಸುತ್ತದೆ ಎನ್ನುವಾಗಲೇ 8ನೇ ವಿಕೆಟ್‌ಗೆ ಜೊತೆಯಾದ ಆರ್.ಅಶ್ವಿನ್ ಮತ್ತು ಶ್ರೇಯಸ್ ಅಯ್ಯರ್ ಜೋಡಿ ಮುರಿಯದ 8ನೇ ವಿಕೆಟಿಗೆ 105 ಎಸೆತಗಳಲ್ಲಿ 71 ರನ್ ಜೊತೆಯಾಟವಾಡುವ ಮೂಲಕ ಭಾರತಕ್ಕೆ ಗೆಲುವು ತಂದುಕೊಟ್ಟರು. ಆರ್. ಅಶ್ವಿನ್ ಔಟಾಗದೆ 42, ಶ್ರೇಯಸ್ ಐಯ್ಯರ್ ಔಟಾಗದೆ 29 ರನ್ ಗಳಿಸಿದರು. ಬಾಂಗ್ಲಾದೇಶದ ಪರ ಮೆಹದಿ ಹಸನ್ ಮಿರಾಜ್ 5, ಶಕೀಬ್ ಅಲ್ ಹಸನ್ 2 ವಿಕೆಟ್ ಪಡೆದರು. ಆರ್. ಅಶ್ವಿನ್ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರೆ, ಇತ್ತ ಚೇತೇಶ್ವರ್ ಪೂಜಾರಾ ಸರಣಿ ಶ್ರೇಷ್ಠ ಗೌರವಕ್ಕೆ ಪಾತ್ರರಾದರು.

ಪ್ರಕಾಶ್ ಜ್ಯುವೆಲರ್ಸ್‌ನಲ್ಲಿ ರಿಯಾಯ್ತಿ ಕೊಡುಗೆ...



ಮೈಸೂರು, ಡಿ.25– ಮೈಸೂರಿನ ಶಿವರಾಂಪೇಟೆಯಲ್ಲಿರುವ ಪ್ರತಿಷ್ಠಿತ ಪ್ರಕಾಶ್ ಜ್ಯುವೆಲರ್ಸ್‌ನ 58ನೇ ವಾರ್ಷಿಕೋತ್ಸವದ ಅಂಗವಾಗಿ ಡಿ.24 ರಿಂದ 28ರವರೆಗೆ ಪ್ರತೀ ಗ್ರಾಂ ಚಿನ್ನಾಭರಣದ ಮೇಲೆ 300 ರೂ. ರಿಯಾಯಿತಿ ನೀಡಲಾಗುತ್ತಿದೆ.

ಗೋಲ್ಡ್ ಮಾರುಕಟ್ಟೆಯಲ್ಲಿ ತನ್ನದೇ ಚಾಪು ಮೂಡಿಸಿರುವ ಪ್ರಕಾಶ್ ಜ್ಯುವೆಲರ್ಸ್ 58 ವರ್ಷದ ಇತಿಹಾಸ ಹೊಂದಿದೆ. ಕಾಲಕ್ಕೆ ತಕ್ಕಂತೆ ಅತ್ಯಾಕರ್ಷಕ ವಿನ್ಯಾಸವುಳ್ಳ ಚಿನ್ನಾಭರಣಗಳನ್ನು ಪರಿಚಯಿಸುವ ಮೂಲಕ ಗೃಹಿಣಿಯರ ಮನೆ ಮಾತಾಗಿದೆ.

ದಕ್ಷಿಣ ಭಾರತದ ಕಲಾತ್ಮಕತೆ, ಸಂಸ್ಕೃತಿ ಮತ್ತು ಸಂಪ್ರದಾಯಗಳಿಂದ ಸ್ಫೂರ್ತಿ ಪಡೆದ ಪ್ರಕಾಶ್ ಜ್ಯುವೆಲರ್ಸ್‌ನಲ್ಲಿ ಪಾರಂಪರಿಕ ಹಾಗೂ ಅದ್ಭುತ ಶೈಲಿಯ ಚಿನ್ನ, ಬೆಳ್ಳಿ ಹಾಗೂ ವಜ್ರದ ಆಭರಣಗಳು ಲಭ್ಯವಿದೆ ಗ್ರಾಹಕರ ಅಭಿರುಚಿಗೆ ಅನುಗುಣವಾಗಿ ಕರಕುಶಲತೆ ಮತ್ತು ವಿನ್ಯಾಸಕ್ಕೆ ಹೆಸರಾದ ಪ್ರಕಾಶ್ ಜ್ಯುವೆಲರ್ಸ್ ಸಾಂಸ್ಕೃತಿಕ ನಗರಿಯ ಪ್ರತಿಷ್ಠಿತ ಆಭರಣ ಮಳಿಗೆಯಾಗಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಮೈಸೂರಿನ ಬಲ್ಲಾಳ್ ಸರ್ಕಲ್ ಹತ್ತಿರದ ಪ್ರತಿಷ್ಠಿತ ರೆಸ್ಟೋರೆಂಟ್ ಒಂದಕ್ಕೆ ನುರಿತ ದೋಸೆ ಮಾಸ್ಟರ್, ಕಾಫಿ ಮಾಸ್ಟರ್, ಕೌಂಟರ್ ಬಾಯ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ:
9900661620

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷಿನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

ಬೇಕಾಗಿದ್ದಾರೆ
ಕಲೆಕ್ಷನ್ ಏಜೆನ್ಸಿಗೆ ಫೀಲ್ಡ್ ಎಕ್ಸಿಕ್ಯೂಟಿವ್ ಮೈಸೂರು ಲೋಕಲ್ ಹಾಗೂ ಕೊಳ್ಳೇಗಾಲ ಮತ್ತು ಟೆಲಿಕಾಲರ್ಸ್, ಹುಡುಗಿಯರು ಬೇಕಾಗಿದ್ದಾರೆ, ವಿಳಾಸಕ್ಕೆ ಸಂಪರ್ಕಿಸಿ: # 862/ಜಿ, ಲಕ್ಷ್ಮಣ ಗರಡಿ ಬಿಲ್ಡಿಂಗ್, ಲಕ್ಷ್ಮಣ ಗರಡಿ ರಸ್ತೆ, ದೇವರಾಜ ಕಾಲೇಜ್ ಎದುರು, ದೇವರಾಜ ಮೊಹಲ್ಲಾ, ಮೈಸೂರು.
9986413236, 8861357697

ಶ್ರೀ ಗೌರಿಶಂಕರ ಟ್ರಾವೆಲ್ಸ್
26–1–23 (6 ದಿನ): ಗುರುವಾಯೂರು, ಮುನ್ನಾರ್, ತ್ರಿವೇಂಡ್ರಂ, ಆಲಪ್ಪಿ, ಕೊಚ್ಚಿನ್ ಇತ್ಯಾದಿ. 10–2–23 (4 ದಿನ):– ಚಿತ್ರದುರ್ಗ, ಹಂಪೆ, ಕೂಡಲ ಸಂಗಮ, ಬಾದಮಿ, ಬಿಜಾಪುರ (ಇತ್ಯಾದಿ). 12–3–23 (7 ದಿನ):– ಅಯೋಧ್ಯೆ, ಪ್ರಯಾಗ್‌ರಾಜ್, ಕಾಶಿ, ಗಯಾ, ಬಾಬಾ ಬೈದ್ಯನಾಥ್ ಇತ್ಯಾದಿ.
ವಿಮಾನ / ಬಸ್ / ರೂಂ / ಊಟ
9620002114

ಸುವರ್ಣ ಯಾತ್ರ
7–1–23 ಮಹಾಕಾಳೇಶ್ವರ, ಓಂಕಾರೇಶ್ವರ ಜ್ಯೋತಿರ್ಲಿಂಗ, ಮಧ್ಯಪ್ರದೇಶ ಪ್ರವಾಸ 4 ದಿನಗಳು. 24–2–23 ಕಾಶಿ ಪ್ರವಾಸ 2 ಜ್ಯೋತಿರ್ಲಿಂಗ ಸೇರಿ 7 ದಿನಗಳು. 15–2–23 ಪುರಿ ಜಗನ್ನಾಥ್, ಕೋನಾರ್ಕ್, ಭುವನೇಶ್ವರ ಪ್ರವಾಸ 4 ದಿನಗಳು.
9008381022, 9019462508

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ಕೆಲಸಕ್ಕಾಗಿ ಪುರುಷರು / ಮಹಿಳೆಯರು ಬೇಕಾಗಿದ್ದಾರೆ. ಸಂಬಳ: 12,000/–
8892258814

WANTED
Female Experienced Office Assistant, Fluency in English, Salary : 10,000 to 15,000, Smart Hair Fixing, Anikethana Road, Kuvempunagar. Contact:
8792945515

ಬೇಕಾಗಿದ್ದಾರೆ
ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಲಲಿತಾದ್ರಿಪುರ, ಆಲನಹಳ್ಳಿ, ಚಿಕ್ಕಳ್ಳಿ, ಉತ್ತನಹಳ್ಳಿ, ರಾಜ್‌ಕುಮಾರ್ ರಸ್ತೆ ಸುತ್ತ ಮುತ್ತ ಇರುವ ಪ್ರದೇಶಗಳಿಗೆ ಎಸ್.ಎಸ್.ಎಲ್.ಸಿ ಪಾಸ್ ಅಥವಾ ಫೇಲ್.
8197821408, 9035269781, 0821-4852002

ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
9606871188

ಸೋಲಾರ್ ವಾಟರ್ ಹೀಟರ್ Solar Water Heater

ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳ್ ಮತ್ತು ಇನ್‌ಫೋಸಿಸ್ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC & PUC, ಸಂಬಳ: S/Sup: 24,000/– 26 days (8hrs), S/Garud: 19,500/– 26 days (8hrs), ವಯೋಮಿತಿ: 50 ವರ್ಷದ ಒಳಗೆ. ESI ಮತ್ತು PF ಊಟ, ತಿಂಡಿ ವ್ಯವಸ್ಥೆ ಇರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9620667819
9880727819

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

Sudarshan Saur

SOLAR WATER HEATER
ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

SITE FOR SALE
30x40 Sites,
Bank Loan upto 80%, Near Gurur Bus Stop, Ramabainagar, Mysore. DTCP approved (Corporation Limits) 1.5 kms from J P Nagar Ring Road.
8660105902

Layout Marketing
We are one of pioneer in marketing, having experienced of selling more than 1K plots in Mysore & Bangalore. Feel free 2 call
9606697999
us if ur in need.

ಹೋಲ್‌ಸೇಲ್ ದರದಲ್ಲಿ

ಜೀವಂತ ನಾಟಿ ಕೋಳಿ ಕೆ.ಜಿ. ರೂ.230/–, ರೂ.300/– ಕ್ಲೀನಿಂಗ್ 1 ಕೋಳಿಗೆ ರೂ. 20/– ಗೌಡ್ರು ನಾಟಿಕೋಳಿ ಅಂಗಡಿ ನಂ.198/1, ಪಿ & ಟಿ ಕ್ವಾಟ್ರಸ್ ಮೈನ್ ರೋಡ್, ದೊಡ್ಡಮ್ಮ ತಾಯಿ ಕಲ್ಯಾಣ ಮಂಟಪ ಪಕ್ಕ ಎನ್.ಆರ್.ಮೊಹಲ್ಲಾ, ಮೈಸೂರು – 570007
9448048576
9632378020

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವಾರ್ಥಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 BANGALORE 9343142258

S.B GOLD COMPANY
ಗಿರವಿ ಚಿನ್ನಾಭರಣ ಖರೀದಿ ಒಂದು ಗ್ರಾಂ ಚಿನ್ನಕ್ಕೆ 5300 ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಳ್ಳುತ್ತೇವೆ ಕೂಡಲೇ ಸಂಪರ್ಕಿಸಿ.
9964522225

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ, ವಿದ್ಯಾರ್ಹತೆ: ಕನಿಷ್ಠ ಓದು / ಬರಹ ಗೊತ್ತಿರಬೇಕು. ವೇತನ : 12,818 + ESI & PF ಮತ್ತು ಉಚಿತ ಊಟದ ವ್ಯವಸ್ಥೆ, ಅಗತ್ಯ ದಾಖಲಾತಿಗಳು: ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ–06, ಟಿ.ಸಿ. ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ.
8453408502
9108100117

ಏಷ್ಯನ್ ಟೂರ್ಸ್ ಅಂಡ್ ಟ್ರಾವೆಲ್ಸ್
ಬೆಂಗಳೂರು–70
23–02–2023 ರಿಂದ 11 ದಿನಗಳ ಕಾಶಿ, ಗಯಾ, ನೈಮಿಷಾರಣ್ಯ, ಚಿತ್ರಕೂಟ. 23–2–2023 ರಿಂದ 15 ದಿನಗಳ ಮಲ್ಟಿಎಕ್ಸಲ್ ಸೆಮಿ ಸ್ಲೀಪರ್ ಕೋಚ್ ಬಸ್ಸು / ವಿಮಾನದಲ್ಲಿ ಅಷ್ಟ ಜ್ಯೋತಿರ್ಲಿಂಗ ಪ್ರವಾಸ. 23–03–2023 ರಿಂದ 10/18 ದಿನಗಳ ನೇಪಾಳ ಮುಕ್ತಿನಾಥ, ಕಾಶಿ, ಗಯಾ, ಕೊಲ್ಕತ್ತಾ, ಪುರಿ, ಕೋನಾರ್ಕ್, ಭುವನೇಶ್ವರ್. 27–4–2023 ರಿಂದ 14 ದಿನಗಳ ಚಾರ್–ಧಾಮ್ ಪ್ರವಾಸ.
9342287551, 8050629305

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160
6361056646

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ
MOB: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಬಾಧೆ, ಆರೋಗ್ಯ ಭೂಮಿ, ಕೋರ್ಟು, ವ್ಯಾಪಾರ, ಸಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಶತಸಿದ್ಧ. ಕರೆಮಾಡಿ ಬನ್ನಿ.
ಖಾಯಂ ವಿಳಾಸ ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು.

ಜಮೀನು ಬಾಡಿಗೆಗೆ ದೊರೆಯುತ್ತದೆ
1 ಎಕರೆ Near KA-55 RTO or N.H.Hospital ರಿಂಗ್ ರಸ್ತೆ, ಮೈಸೂರು.
8095415186
9845675239

ಬೇಕಾಗಿದ್ದಾರೆ
ಮೈಸೂರಿನ ರಾಮಕೃಷ್ಣನಗರ ಆಂದೋಲನ ಸರ್ಕಲ್ ಹತ್ತಿರ ಪುರುಷ ಹೌಸ್‌ಕೀಪಿಂಗ್ (House Keeping) ಕೆಲಸಕ್ಕೆ ಬೇಕಾಗಿದ್ದಾರೆ. ವೇತನ ಮಾಸಿಕಾ : Rs. 11,000/- , 8 Hours Duty ಮಧ್ಯಾಹ್ನ 2.00 ಗಂಟೆಯಿಂದ ರಾತ್ರಿ 10.00 ಗಂಟೆವರೆಗೆ ವಯಸ್ಸು 40 ವರ್ಷ ಒಳಗೆ. ಸಂಪರ್ಕಿಸಿ:
9731976148

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಳಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಬಾಧೆ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಬಾಧೆ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಬೇಕಾಗಿದ್ದಾರೆ
ಫರ್ನಿಶಿಂಗ್ ಅಂಗಡಿಗೆ ಅಕೌಂಟೆಂಟ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. Tally Experience ಆಗಿರುವವರು. Akbar Road, Near Ashoka Road, Mysore. (ಸಂಬಳ 10,000 to 14,000). ಸಮಯ: 10 am to 7 pm.
Mob: 9916459786

ಕೇರಳ ಕೊಳ್ಳೇಗಾಲ ಶ್ರೀ ಜ್ಯೋತಿಷ್ಯರು
ಪಂ॥ ಮೋಹನ್ ಪೊದುವಾಳ್ (ಕೇರಳ) ಮೋಡಿ ಯಲ್ಲಪ್ಪನವರ ಮಗ ವಿದ್ವಾನ್ ಜ್ಯೋತಿಷಿ ವಿಶಾರದ ಮೋಡಿ ಮಾಂತ್ರಿಕ
ಪಂ॥ ಕುಮಾರ್
ಮೊ.: 9036984793
ಇವರು ಕೇರಳದ ಕುಟ್ಟಿಚೇತನ್ ಕೊಳ್ಳೇಗಾಲದ ಕಳ್ಳಿಗೌಡಿ ಅಘೋರ ಮೋಡಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರುದೋಷ, ಇನ್ನೂ ಯಾವುದೇ ನಿಮ್ಮ ಗುಪ್ತ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ತಿಳಿಸುತ್ತಾರೆ. ಖಾಯಂ ವಿಳಾಸ: ರಾಜ್ ಗೋಪಾಲ್ ಆಸ್ಪತ್ರೆ ಬಿಲ್ಡಿಂಗ್, ಟೆಂಪಲ್ ಟ್ರೀಸ್ ಅಪಾರ್ಟ್‌ಮೆಂಟ್ ಪಕ್ಕ, ವಿಹಾರ ಮಾರ್ಗ, ಸಿದ್ಧಾರ್ಥ ಲೇಔಟ್, ಮೈಸೂರು.

ಬೇಕಾಗಿದ್ದಾರೆ
ಡಿ.ಜಿ.ಎಫ್ ಗೋಲ್ಡ್ ಮತ್ತು ಡೈಮಂಡ್ ಜ್ಯುಯಲ್ಲರಿಗೆ, ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
10,000/- Basic Salary + 10,000/- Incentive
8884171888

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ತಕ್ಷಣ ಬೇಕಾಗಿದ್ದಾರೆ
1) ಹೌಸ್ ಕೀಪಿಂಗ್ (ಮಹಿಳೆಯರು ಮಾತ್ರ) ಸ್ಥಳ: ಮೇಟಗಳ್ಳಿ ಸುತ್ತಮುತ್ತ.
2) ಸೆಕ್ಯೂರಿಟಿ ಗಾರ್ಡ್‌ಗಳು:– ಸ್ಥಳ:– 1) ಸಯ್ಯಾಜಿರಾವ್ ರಸ್ತೆ, 2) ನಜರ್‌ಬಾದ್, 3) ವಿದ್ಯಾರಣ್ಯಪುರಂ, 4) ಹಿನಕಲ್, 5) ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ ಹಾಗೂ 6) ಹೆಚ್.ಡಿ.ಕೋಟೆ ರಸ್ತೆ. ಉಚಿತ ವಸತಿ ಹಾಗೂ ಕೆಲವು ಕಡೆ ಊಟದ ವ್ಯವಸ್ಥೆಯಿದೆ. ಸಂಪರ್ಕಿಸಿ>
9686422400 / 9242406261

ಬೇಕಾಗಿದ್ದಾರೆ
ಒಕ್ಕಲಿಗರ ಶ್ರೀರಾಮ ಮಂದಿರ 230 ಕೆ.ಆರ್.ಆಸ್ಪತ್ರೆ ರಸ್ತೆ (ಅಕ್ಕಿ ಚೌಕ) ಮೈಸೂರು – 1, ಮೇಲ್ಕಂಡ ರಾಮ ಮಂದಿರಕ್ಕೆ ಮ್ಯಾನೇಜರ್ ಕೆಲಸಕ್ಕೆ ಗುಮಾಸ್ತರು ಬೇಕಾಗಿದ್ದಾರೆ. ಸಂಪರ್ಕಿಸಿ:
9448600210

ಹೆಬ್ಬಾಳ್‌ನಲ್ಲಿ ಸೈಟು ಬೇಕಾಗಿದೆ
ಕೆ.ಬಿ.ಎಲ್. ಸಿಲಿಕಾನ್ ಸಿಟಿ, ಮೈಸೂರು ಹೆಬ್ಬಾಳ್‌ನಲ್ಲಿ 30x40 or 30x50 ಸೈಟು ಬೇಕಾಗಿದೆ.
Mob: 9986553325

HOUSE FOR RENT
(GROUND FLOOR) 20x30, 2 BHK, Ramakrishnanagar, Near Saibaba Temple, Mysore *(Vegetarians only)*
9423961569, 8308889656

ಹೋಂನರ್ಸಿಂಗ್ ಕೆಲಸ
18 ವರ್ಷ ಮೇಲ್ಪಟ್ಟ ಯುವಕ, ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತೆಯರು ನಮ್ಮ ಸಂಸ್ಥೆಯಲ್ಲಿ ಉಳಿದುಕೊಳ್ಳುವವರು ತಕ್ಷಣ ಸಂಪರ್ಕಿಸಿ. ಊಟ, ವಸತಿ ಉಚಿತದೊಂದಿಗೆ ಸಂಬಳ 12000 – 23000 ರವರೆಗೆ. (ಸರ್ಕಾರಿ ನೋಂದಾಯಿತ ಸಂಸ್ಥೆ). ಅಗ್ರಹಾರ
9739292222, 9035113222

ಹೋಟೆಲ್ ಕೆಲಸಕ್ಕೆ
ಅನುಭವವುಳ್ಳ ಹೆಲ್ಪರ್, ಕೌಂಟರ್ ಕೆಲಸಕ್ಕೆ ಫಾಸ್ಟ್‌ಫುಡ್‌ಗೆ ಹೆಲ್ಪರ್ ಹಾಗೂ ದೋಸೆ ಮಾಡುವವರು ತಕ್ಷಣ ಬೇಕಾಗಿದ್ದಾರೆ. ಸಂಪರ್ಕಿಸಿ:
8088337564, 9380681467

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರ್ ನಾಲ್ವರ ದೈವ ಚೌಡಿ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾಹ, ಮನಸಿನಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಅಂದ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಿಕೆರೆ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಬೇಕಾಗಿದ್ದಾರೆ
ಮೈಸೂರು ಹೆಬ್ಬಾಳು ಕೈಗಾರಿಕ ಪ್ರದೇಶದ ಆಫೀಸ್‌ನಲ್ಲಿ ಕೆಲಸಕ್ಕೆ ಅಭ್ಯರ್ಥಿಗಳು ಬೇಕಾಗಿದ್ದಾರೆ.
1) B.Com & B.Sc (Computer Science)
2) GTDC (Tool & Die Making)
7th to PUC ವರೆಗೆ ESI & PF (Pick up & Drop) ಸೌಲಭ್ಯವಿರುತ್ತದೆ.
8951869646
9902645646

ಶ್ರೀ ಮೂರ್ತಿ ಟೂರಿಸ್ಟ್
5–1–23 ಒಂದೇ ದಿನದಲ್ಲಿ 3 ರಂಗನಾಥನ ದರ್ಶನಕ್ಕಾಗಿ (ಆದಿ, ಮಧ್ಯ, ಅಂತ್ಯ ರಂಗ) ಪ್ರವಾಸ. ಬೆಳಿಗ್ಗೆ 4.30 ಕ್ಕೆ ಹೊರಟು 6–1–23 ಬೆಳಿಗ್ಗೆ 10.30 ಕ್ಕೆ ವಾಪಸ್ ಬರುವುದು (ಗುರುವಾರ ಬೆಳಿಗಿನ ತಿಂಡಿ, ಕಾಫಿ, ಮಧ್ಯಾಹ್ನದ 1 ಊಟ ಸೇರಿರುತ್ತದೆ) ಕರ್ನಾಟಕ ಸಾರಿಗೆ ಬಸ್‌ನಲ್ಲಿ. Tickets at your Door Step
9480733069

WANTED
* Office Assistant (Female only).
* Marketing Executive (Male)
Qualification: Any Degree with the knowledge of MS Excel, Word. *Contact:*
9606539394, 0821-2953294

ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ
ಪುರುಷರು – 8 ಗಂಟೆ ಶಿಫ್ಟ್ (ಇ.ಎಸ್.ಐ. ಹಾಗೂ ಪಿ.ಎಫ್ ಕೊಡಲಾಗುತ್ತದೆ). ವಯಸ್ಸು: 50ರ ಒಳಗೆ. ಬೆಳವಾಡಿ ಹಾಗೂ ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾ ಹತ್ತಿರ. ಸಂಪರ್ಕಿಸಿ:
Mob: 9606808975

PART TIME WORK WORK FROM HOME
ಮನೆಯಲ್ಲಿಯೇ ಕುಳಿತು ಬಿಡುವಿನ ವೇಳೆಯಲ್ಲಿ ಕೆಲಸ / JOB. ತಿಂಗಳಿಗೆ ಸಂಬಳ 12,000 ದಿಂದ 18,000 ದವರೆಗೂ ಸಂಪಾದಿಸಿ. (ಕೊರಿಯರ್ ಸೌಲಭ್ಯವಿದೆ)
ಸಂಪರ್ಕಿಸಿ:
9148733213

ಕ್ರಯಪತ್ರ ಕಳುವಾಗಿದೆ
ಹುಣಸೂರು ನಗರದ ಮಾರುತಿ ಬಡಾವಣೆಯ ನಿವಾಸಿ ಮಹದೇವು ಆದ ನಾನು, ನಗರದ ಹೋಲಿ ಫ್ಯಾಮಿಲಿ ಶಾಲೆಯ ಬಳಿಯಲ್ಲಿನ ನಗರಸಭೆ ಖಾತೆ ಸಂ. 2480/1139 ರ ಸೈಟ್ ನಂ.39 ರ ಆಸ್ತಿಯು ನನ್ನದಾಗಿದ್ದು, ಈ ಆಸ್ತಿಯ ಕ್ರಯಪತ್ರ ಡಿ.20 ರಂದು ನನ್ನ ತಿಳುವಳಿಕೆಯನ್ನು ಮೀರಿ ಕಳೆದುಹೋಗಿದೆ ಎಂದು ತಿಳಿಸುತ್ತೇನೆ. ದಾಖಲೆ ದೊರೆತಲ್ಲಿ ಹತ್ತಿರದ ಪೊಲೀಸ್ ಠಾಣೆಗೆ ಸಂಪರ್ಕಿಸಬೇಕಾಗಿ ವಿನಂತಿ.

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಟಿ, 15,200–86,000.
9740733021 / 9535028750

SHOP FOR RENT
2 Shops of 480 Sq.ft each (Total 960 Sq.ft) Suitable for Office, Clinic, Pharmacy etc., at Busy Main Road Opp. Ashokapuram Railway Station Manandavadi main Road, Srirampura, Mysore Available for Rent.
9243505777
9008447045

WANTED
Female Graduates for Montessori School in Bogadi.
6364227636

WANTED
For Transport Co. Drivers with DL for Goods Vehicle, Qualification: SSLC & above, 3 yrs experience. Office Staff Male / Female, Qualification: Any Graducation, Work Experience minimum 3 yrs. Contact:
9945026767
9620748700

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 40 ವರ್ಷ, ವಿದ್ಯಾರ್ಹತೆ : 7 ರಿಂದ PUC ಮತ್ತು ITI ಉಚಿತ ಊಟ ಮತ್ತು ರಿಯಾಯಿತಿ ದರದಲ್ಲಿ ರೂಂಗಳನ್ನು ನೀಡಲಾಗುತ್ತದೆ. ಸಂಪರ್ಕಿಸಿ:
9035381989

ALI BROTHERS CARD CITY
Gold Covering Jewellery, Guarantee (6 months) Swiss Beauty Cosmetics avaialble, 35/70 Devaraj Market Building, Sayyaji Rao Road, Mysore - 01
0821-4260511

ಬೇಕಾಗಿದ್ದಾರೆ
ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ
Receptionist -2
Sales Girls -2
Beauty Therapist -1
ಓರಿಯೋಲಸ್ ಸಂಸ್ಥೆಗೆ ಕೆ.ಡಿ.ರೋಡ್, ಸಂಪರ್ಕಿಸಿ: ಡಾ.ವಿಜಯ್
WhatsApp to CV
9035159747

ಜಮೀನು ಮಾರಾಟಕ್ಕಿದೆ
ಪಿರಿಯಾಪಟ್ಟಣದಿಂದ 2 ಕಿಲೋಮೀಟರ್ ಕುಶಾಲನಗರ ಮಾರ್ಗದಲ್ಲಿ ಎರಡು ಎಕರೆ ಅಡಿಕೆ ತೆಂಗು ಸೇರಿದಂತೆ ಒಟ್ಟು 10 ಎಕರೆ ಜಮೀನು ಮಾರಾಟಕ್ಕಿದೆ. ಆಸಕ್ತರು ತಕ್ಷಣವೇ ಸಂಪರ್ಕಿಸುವುದು.
9448165451

ಬೇಕಾಗಿದ್ದಾರೆ
ಟೆಲಿಕಾಲಿಂಗ್ ಮಾಡಲು ಹುಡುಗ ಹುಡುಗಿಯರು ಬೇಕಾಗಿದ್ದಾರೆ. (ಕನ್ನಡ, ತೆಲುಗು, ಹಿಂದಿ) ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್.ಮೊಹಲ್ಲಾ, ಸಂಬಳ: 8000.
8150005111

SITE FOR SALE
30x50 North West corner Semi Commercial Site Near Devegowda Circle, ಆನಂದನಗರ
6366440444

ಬೇಕಾಗಿದ್ದಾರೆ
ಶ್ರೀ ಗುರುರಾಘವೇಂದ್ರ ಹೋಮ್ ನೀಡ್ಸ್
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಆಸಕ್ತಿಯುಳ್ಳ ಹುಡುಗರು ಹಾಗೂ ಕ್ಯಾಷಿಯರ್‌ಗೆ ಮಹಿಳೆಯರು ಬೇಕಾಗಿದ್ದಾರೆ. ಸ್ಥಳ: ಶಾರದೇವಿನಗರ, ಮೈಸೂರು.
Timing : Full Time or Part Time
9972356444

ಇಂದೇ ಸಂಪರ್ಕಿಸಿ
ಮೈಸೂರಿನ ಪ್ರಸಿದ್ಧ ಆಫೀಸ್, ಶೋರೂಂ ಮತ್ತು ಕಂಪನಿಗಳಿಗೆ ಕೆಲಸ ಮಾಡಲು 7th, SSLC, PUC, ITI, Any Degree Pass / Fail ಆದವರಿಗೆ Packing, Helper, Quality Production, Billing, Cashiar, Data Entry, Voice Process ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ: 14,000 – 35000 (ESI+PF+OT) ಸೇರಿ, ಹರತ್ತು ಅನ್ವಯ. ಸಂಪರ್ಕಿಸಿ:
7892878915
9353753194

ಮೈಸೂರು ಮ್ಯಾರೇಜ್ ಬ್ಯೂರೋ
ಕರ್ನಾಟಕದ ಎಲ್ಲಾ ಜಾತಿಯ ವಧು ವರರು ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ. ಮದುವೆ ವಿಳಂಬವಾದಲ್ಲಿ ಪರಿಹಾರ. ಡಾ.ಗುರೂಜಿ ಮೈಸೂರು / ಬೆಂಗಳೂರು
9448229184
7899625268

ಸಕ್ಕರೆ ಖಾಯಿಲೆ
ಸಕ್ಕರೆ ಖಾಯಿಲೆ ಎಷ್ಟೇ ಹಳೆಯದಾದರೂ ಹಾಗೂ ಎಷ್ಟೇ ಜಾಸ್ತಿ ಇರಲಿ 100% ಆಯುರ್ವೇದ ಚಿಕಿತ್ಸೆಗಾಗಿ ಸಂಪರ್ಕಿಸಿ. ಯಾವುದೇ ಅಡ್ಡ ಪರಿಣಾಮ ಇರುವುದಿಲ್ಲ.
6361740552

ಬೇಕಾಗಿದ್ದಾರೆ
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು, ಹೋಂ ನರ್ಸ್‌ಗಳು, ಹೌಸ್ ಕೀಪಿಂಗ್ ಕೆಲಸಕ್ಕೆ ಮನೆ ಕೆಲಸಕ್ಕೆ ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ / ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತೆಯರು ಬೇಕಾಗಿದ್ದಾರೆ. ಸಂಬಳ: 14,000 ದಿಂದ 18,000 (ಉಚಿತ ಊಟ ವಸತಿ ಸೌಲಭ್ಯ ಇರುತ್ತದೆ.) ಸಂಪರ್ಕಿಸಿ:
8050699742

ವಧು ಬೇಕಾಗಿದ್ದಾರೆ
31 ವರ್ಷದ ವರನಿಗೆ (Tamil) ವಧು ಬೇಕಾಗಿದ್ದಾರೆ
9880104663

ಬೇಕಾಗಿದ್ದಾರೆ
ಹೆಡ್‌ಗಾರ್ಡ್ಸ್ : ಸಂಬಳ 11,000 ದಿಂದ 12,000, ಸ್ಥಳ: ಹೆಬ್ಬಾಳ್ ಮತ್ತು ಹೂಟಗಳ್ಳಿ, ವಯಸ್ಸು : 25 ರಿಂದ 60. ಸೆಕ್ಯೂರಿಟಿ ಗಾರ್ಡ್ಸ್: ಸಂಬಳ: 10,000/– ರಿಂದ 11,000/–, ಸ್ಥಳ: ಯಾದವಗಿರಿ ಮತ್ತು ಸಿದ್ಧಾರ್ಥ ಲೇಔಟ್, ವಯಸ್ಸು: 25 ರಿಂದ 55. ಸಂಪರ್ಕಿಸಿ:
6361740914

ಇಂದೇ ಸಂಪರ್ಕಿಸಿ
ಹೆಬ್ಬಾಳ್, ಹೂಟಗಳ್ಳಿ, ಮೇಟಗಳ್ಳಿ, ಸರಸ್ವತಿಪುರಂ, ಎನ್.ಆರ್.ಮೊಹಲ್ಲಾ, ಜೆ.ಪಿ.ನಗರ, ಒಂಟಿಕೊಪ್ಪಲು ಮುಂತಾದ ಏರಿಯಾಗಳಲ್ಲಿನ ಕಂಪನಿ, ಆಫೀಸ್ ಶೋರೂಂಗಳಿಗೆ ಕೆಲಸ ಮಾಡಲು ಯುವಕ / ಯುವತಿಯರು ಬೇಕಾಗಿದ್ದಾರೆ. Any Qualification (ESI+PF+OT) ಯೊಂದಿಗೆ ಸಂಬಳ 14,000/– – 36,000/–. ಸಂಪರ್ಕಿಸಿ
7676939277
9980630131

ಈ ತಕ್ಷಣವೇ ಬೇಕಾಗಿದ್ದಾರೆ
ಮೈಸೂರು ಹೆಬ್ಬಾಳಿನ ಕಂಪನಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಮತ್ತು ಟೈಲರುಗಳು ತಕ್ಷಣವೇ ಬೇಕಾಗಿದ್ದಾರೆ. ESI+PF ವಾರದ ರಜೆ ಮತ್ತು ಬೋನಸ್ ಇರುತ್ತದೆ. ಸಂಪರ್ಕಿಸಿ:
7795285485
8105249880

ಮನೆಯಿಂದಲೇ ಕೆಲಸ
ಕನ್ನಡ ಮತ್ತು ಇಂಗ್ಲೀಷ್ ಓದಲು ಬರೆಯಲು ಬರುವ ಯುವಕ ಯುವತಿಯರಿಗೆ ಗೃಹಿಣಿಯರಿಗೆ ವಿದ್ಯಾರ್ಥಿಗಳಿಗೆ ನಿವೃತ್ತರಾದವರಿಗೆ ಎಲ್ಲರಿಗೂ ಸದಾವಕಾಶ ದಿನದ ಬಿಡುವಿನ ಸಮಯದಲ್ಲಿ ಕೆಲಸ ಮಾಡಿ ತಿಂಗಳಿಗೆ 14,000 ದಿಂದ 20,000 ರವರೆಗೆ ಗಳಿಸಿ. ಮಾಹಿತಿಗಾಗಿ ಸಂಪರ್ಕಿಸಿ:
9972237729
9739597810

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಕೆ.ಆರ್.ಪೇಟೆ: ಪಂಚರತ್ನ ಯಾತ್ರೆಗೆ ಅಭೂತಪೂರ್ವ ಬೆಂಬಲ



ಕೆ.ಆರ್.ಪೇಟೆ, ಡಿ.25– ಸಕ್ಕರೆ ನಾಡಲ್ಲಿ ಯಶಸ್ವಿಯಾಗಿ ಸಾಗುತ್ತಿರುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದ ಪಂಚರತ್ನ ಯಾತ್ರೆಗೆ ಕೆ.ಆರ್.ಪೇಟೆಯಲ್ಲಿ ಅಭೂತಪೂರ್ವ ಬೆಂಬಲ ವ್ಯಕ್ತವಾಯಿತು.

ಶನಿವಾರ ಮಂಡ್ಯ ತಾಲೂಕಿನ ಮೇಲುಕೋಟೆ ಕ್ಷೇತ್ರ ವ್ಯಾಪ್ತಿಯ ಶಿವಳ್ಳಿಯಲ್ಲಿ ವಾಸ್ತವ್ಯ ಹೂಡಿದ್ದ ಹೆಚ್.ಡಿ.ಕುಮಾರಸ್ವಾಮಿ ಭಾನುವಾರ ಕೆ.ಆರ್.ಪೇಟೆಯಲ್ಲಿ ಪಂಚರತ್ನ ಯಾತ್ರೆ ಆರಂಭಿಸಿದರು. ತಾಲೂಕಿನ ಅಶೋಕ ನಗರದಲ್ಲಿ ಆರಂಭಗೊಂಡ ಯಾತ್ರೆಗೆ ಭರ್ಜರಿ ಸ್ವಾಗತ ದೊರೆಯಿತು. ಅಶೋಕನಗರ ಮಾರ್ಗವಾಗಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹುಟ್ಟೂರು ಬೂಕನಕೆರೆ ಪ್ರವೇಶಿಸಿತು.

ಬೂಕನಕೆರೆಯಲ್ಲಿ ಅದ್ಧೂರಿ ಸ್ವಾಗತ: ಬೂಕನಕೆರೆಗೆ ಕುಮಾರಸ್ವಾಮಿ ಆಗಮಿಸುತ್ತಿದ್ದಂತೆ ಗ್ರಾಮಸ್ಥರು ಕ್ರೇನ್ ಮೂಲಕ ಸೀಮೆ ಬದನೆಕಾಯಿ ಹಾರ ಹಾಕಿ, ವಿವಿಧ ಜಾನಪದ ಕಲಾತಂಡಗಳೊಂದಿಗೆ ಅದ್ಧೂರಿ ಸ್ವಾಗತಿಸಿದರು. ಈ ವೇಳೆ ಜೆಡಿಎಸ್ ಕಾರ್ಯಕರ್ತರ ಸಂಭ್ರಮ ಮುಗಿಲು ಮುಟ್ಟಿತ್ತು. ಅಲ್ಲದೇ ಕುಮಾರಸ್ವಾಮಿಗೆ ಬೃಹತ್ ಚಪ್ಪರದ ಬದನೆಕಾಯಿ ಹಾರ ಹಾಕಿ, ಹೂ ಮಳೆ ಸುರಿಸಲಾಯಿತು.

ಸಮಸ್ಯೆ ಹೇಳಿಕೊಂಡ ಮಹಿಳೆಯರು: ಬಳ್ಳೇಕೆರೆಗೆ ಪಂಚರತ್ನ ಯಾತ್ರೆ ಆಗಮಿಸುತ್ತಿದ್ದಂತೆ ರಸ್ತೆ ಮಾಡಿಸಿಕೊಡುವಂತೆ ಮಾಜಿ ಸಿಎಂಗೆ ಮಹಿಳೆಯರು ಮನವಿ ಮಾಡಿದರು. ಈ ವೇಳೆ ನಮ್ಮ ಅಭ್ಯರ್ಥಿ ಹೆಚ್.ಟಿ.ಮಂಜು ಅವರನ್ನು ಗೆಲ್ಲಿಸಿಕೊಡಿ ರಸ್ತೆ ಮಾಡಿಸಿಕೊಡುತ್ತಾರೆ ಎಂದು ಹೆಚ್‌ಡಿಕೆ ಗ್ರಾಮಸ್ಥರಿಗೆ ಹೇಳಿದರು. ಬಳ್ಳೇಕೆರೆಯಲ್ಲೂ ಕ್ರೇನ್ ಮೂಲಕ ಬೃಹತ್ ಕಬ್ಬಿನ ಹಾರ ಹಾಕಿ ಜೆಡಿಎಸ್ ಕಾರ್ಯಕರ್ತರು ಸ್ವಾಗತಿಸಿದರು.

ಹೊಸಹೊಳಲಲ್ಲಿ ಆರತಿ ಬೆಳಗಿ ಸ್ವಾಗತ: ಹೊಸಹೊಳಲು ಗ್ರಾಮಕ್ಕೆ ಆಗಮಿಸಿದ ಜೆಡಿಎಸ್ ಪಂಚರತ್ನ ರಥಯಾತ್ರೆಗೆ ಅದ್ಧೂರಿ ಸ್ವಾಗತ ಕೋರಲಾಯಿತು. ಹೆಚ್ಡಿಕೆಗೆ ಬೃಹತ್ ಸೇಬಿನ ಹಾಕಿ ಸ್ವಾಗತಿಸಲಾಯಿತು.

ಕೆ.ಆರ್.ಪೇಟೆ ಪಟ್ಟಣದಲ್ಲಿ ಶಕ್ತಿ ಪ್ರದರ್ಶನ: ಕೆಆರ್.ಪೇಟೆ ಪಟ್ಟಣಕ್ಕೆ ಜೆಡಿಎಸ್ ಪಂಚರತ್ನ ಯಾತ್ರೆ ಆಗಮಿಸುತ್ತಿದ್ದಂತೆ ಭರ್ಜರಿ ಪ್ರತಿಕ್ರಿಯೆ ವ್ಯಕ್ತವಾಯಿತು. ಸಮಾವೇಶದ ಮೂಲಕ ಹೆಚ್‌ಡಿಕೆ ಭರ್ಜರಿ ಮತ ಬೇಟೆ ಮಾಡಿದರು. ಕೆ.ಆರ್.ಪೇಟೆ ರಸ್ತೆ, ಬೃಹತ್ ಕಟ್ಟಡಗಳು, ಅಂಗಡಿಗಳ ಮೇಲೆ ನಿಂತು ಪಂಚರತ್ನ ಯಾತ್ರೆ ಸ್ವಾಗತಿಸಿದ ಜನರು, ಬೃಹತ್ ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಪಂಚರತ್ನ ಯಾತ್ರೆ ಹಿನ್ನೆಲೆಯಲ್ಲಿ ಮೈಸೂರು–ಶಿವಮೊಗ್ಗ ರಸ್ತೆ ಸಂಚಾರ ಅಸ್ತವ್ಯಸ್ತಗೊಂಡಿತ್ತು.

ಯಶಸ್ವಿ ಯಾತ್ರೆ: ಭಾನುವಾರ ಬೆಳಗ್ಗೆ 10ಕ್ಕೆ ಅಶೋಕ ನಗರ ಮೂಲಕ ಆರಂಭಗೊಂಡ ಯಾತ್ರೆ ಬೂಕನಕೆರೆ, ನಾಟನಹಳ್ಳಿ, ಬಳ್ಳೇಕೆರೆ, ನಾಗರ್ಿನಹಳ್ಳಿ, ಚೌಡೇನಹಳ್ಳಿ, ಹೊಸಹೊಳಲು, ಕೆ.ಆರ್.ಪೇಟೆ ಟೌನ್, ಚಿಕ್ಕಹೊಸಹಳ್ಳಿ, ಹರಿರಾಯನಹಳ್ಳಿ, ಚಿಲ್ಲದಹಳ್ಳಿ, ಅಗ್ರಹಾರ ಬಾಚಹಳ್ಳಿ, ವಳಗೆರೆ ಮೆಣಸ, ಶೆಟ್ಟಿನಾಯಕನಕೊಪ್ಪಲು, ಕೈಗೋನಹಳ್ಳಿ, ಸಾರಂಗಿ, ಜಾಗಿನಕೆರೆ, ಕೊಟಗಹಳ್ಳಿ, ಸಂತೆಬಾಚಹಳ್ಳಿ ಕ್ರಾಸ್‌ನಲ್ಲಿ ಪಂಚರತ್ನ ಯಾತ್ರೆ ಸಂಚರಿಸಿತು. ಬಳಿಕ ಸಂತೆಬಾಚಹಳ್ಳಿಯಲ್ಲಿ ಹೆಚ್.ಡಿ.ಕುಮಾರಸ್ವಾಮಿ ಗ್ರಾಮ ವಾಸ್ತವ್ಯ ಮಾಡಿದರು. ಸೋಮವಾರ ನಾಗಮಂಗಲ ವಿಧಾನಸಭಾ ಕ್ಷೇತ್ರದಲ್ಲಿ ಪಂಚರತ್ನ ಯಾತ್ರೆ ಸಂಚರಿಸಲಿದೆ.

ಈ ವೇಳೆ ಕೆ.ಆರ್.ಪೇಟೆ ಜೆಡಿಎಸ್ ಅಭ್ಯರ್ಥಿ ಹೆಚ್.ಟಿ.ಮಂಜು, ಶಾಸಕರಾದ ಸಿ.ಎಸ್.ಪುಟ್ಟರಾಜು, ಸಿ.ಎನ್.ಬಾಲಕೃಷ್ಣ, ರಾಜ್ಯ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ತಾಲೂಕು ಅಧ್ಯಕ್ಷ ಜಾನಕಿ ರಾಮ್, ರಾಜ್ಯ ಜೆಡಿಎಸ್ ವಕ್ತಾರ ಅಶ್ವಿನ್ ಕುಮಾರ್, ಜಿಲ್ಲಾ ಜೆಡಿಎಸ್ ಯುವ ಘಟಕದ ಅಧ್ಯಕ್ಷ ಕಂಸಾಗರ ರವಿ, ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿರ್ದೇಶಕ ಪುಟ್ಟಸ್ವಾಮಿಗೌಡ, ಮನ್‌ಮುಲ್ ಮಾಜಿ ಅಧ್ಯಕ್ಷ ಎಂ.ಬಿ.ಹರೀಶ್ ಸೇರಿದಂತೆ ಇತರರಿದ್ದರು.

ದೇವರಾಜು, ಸಂತೋಷ್ ಸೇರಿ ಪ್ರಮುಖರ ಗೈರು

ಕೆ.ಆರ್.ಪೇಟೆ, ಡಿ.25– ಕೆ.ಆರ್.ಪೇಟೆ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಟಿಕೆಟ್ ಘೋಷಣೆಯಾದ ಬಳಿಕ ಕ್ಷೇತ್ರದಲ್ಲಿ ಭಿನ್ನಮತ ಸ್ಫೋಟಗೊಂಡಿದ್ದು, ಇಂದು ಕುಮಾರಸ್ವಾಮಿ ನೇತೃತ್ವದ ಪಂಚರತ್ನ ಯಾತ್ರೆಗೆ ಐವರು ಪ್ರಮುಖ ಜೆಡಿಎಸ್ ಮುಖಂಡರು ಗೈರು ಹಾಜರಾಗುವ ಮೂಲಕ ಕೆ.ಆರ್.ಪೇಟೆ ಜೆಡಿಎಸ್‌ನಲ್ಲಿ ಎಲ್ಲವೂ ಸರಿ ಇಲ್ಲ ಎಂಬುದು ಜಗಜ್ಜಾಹೀರಾಯಿತು.

ಕಳೆದ ಉಪಚುನಾವಣೆ ಪರಾಜಿತ ಅಭ್ಯರ್ಥಿ ಬಿ.ಎಲ್. ದೇವರಾಜು, ಈ ಬಾರಿ ಚುನಾವಣೆ ಪ್ರಬಲ ಜೆಡಿಎಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಬಸ್ ಸಂತೋಷ್ ಕುಮಾರ್, ಜೆಡಿಎಸ್‌ನ ಹಿರಿಯ ಮುಖಂಡರಾದ ಬಸ್ ಕೃಷ್ಣೇಗೌಡ, ಅಕ್ಕಿಹೆಬ್ಬಾಳು ರಘು, ರಾಮದಾಸ್ ಗೈರು ಹಾಜರಾಗಿದ್ದರು. ಹೆಚ್.ಟಿ.ಮಂಜುಗೆ ಟಿಕೆಟ್ ನೀಡಬಾರದೆಂದು ಹಲವು ಮುಖಂಡರು ಕುಮಾರಸ್ವಾಮಿ ಮೇಲೆ ಒತ್ತಡ ತಂದು ದೇವರಾಜು ಅಥವಾ ಸಂತೋಷ್‌ಗೆ ಟಿಕೆಟ್ ಕೊಡುವಂತೆ ಮನವಿ ಮಾಡಿದ್ದರು. ಆದರೆ, ಹೆಚ್‌ಡಿಕೆ ಹೆಚ್.ಟಿ.ಮಂಜುಗೆ ಟಿಕೆಟ್ ಘೋಷಿಸಿದ್ದರು. ಇದನ್ನು ವಿರೋಧಿಸಿ ದೇವರಾಜು ಹಾಗೂ ಸಂತೋಷ್ ಬೆಂಬಲಿಗರು ಸಭೆಗಳನ್ನು ನಡೆಸಿದ್ದರು.

ಟಿಕೆಟ್ ಆಕಾಂಕ್ಷಿ ಸಂತೋಷ್, ಪಂಚರತ್ನ ಯಾತ್ರೆಗೆ ಹೋಗುವುದಿಲ್ಲವೆಂದು ಹೇಳಿ ಬೆಂಬಲಿಗರ ಸಭೆ ನಡೆಸಿದ್ದರು. ಈಗ ಪಕ್ಷದ ಪ್ರಮುಖ ಐವರು ಮುಖಂಡರು ಗೈರು ಹಾಜರಾಗಿದ್ದು, ಇದು ಜೆಡಿಎಸ್‌ಗೆ ಕೆ.ಆರ್.ಪೇಟೆಯಲ್ಲಿ ನುಂಗಲಾರದ ತುತ್ತಾಗಿದೆ.

ಕೆ.ಆರ್.ಪೇಟೆ ಅಭ್ಯರ್ಥಿ ಆಯ್ಕೆ ವಿಚಾರ

ಶೀಘ್ರ ಮುಖಂಡರ ಅಸಮಾಧಾನ ಬಗೆಹರಿಸುವೆ: ಕುಮಾರಸ್ವಾಮಿ

ಕೆ.ಆರ್.ಪೇಟೆ, ಡಿ.25– ಕೆ.ಆರ್.ಪೇಟೆ ಜೆಡಿಎಸ್ ಅಭ್ಯರ್ಥಿ ಆಯ್ಕೆ ವಿಚಾರದಲ್ಲಿ ಕೆಲ ಮುಖಂಡರು ಅಸಮಾಧಾನಗೊಂಡಿರುವುದು ನನ್ನ ಗಮನಕ್ಕೆ ಬಂದಿದ್ದು, ಶೀಘ್ರ ಅಸಮಾಧಾನ ಬಗೆಹರಿಸುತ್ತೇನೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ಪಂಚರತ್ನ ಯಾತ್ರೆ ವೇಳೆ ಬೂಕನಕೆರೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಟಿಕೆಟ್ ಆಕಾಂಕ್ಷಿಗಳು ನಮ್ಮನ್ನು ಗುರುತಿಸಿಲ್ಲ ಎಂದುಕೊಂಡಿದ್ದಾರೆ. ಆದರೆ ಅವರು ಅಸಮಾಧಾನವನ್ನು ಪಕ್ಷ ಹಾಗೂ ನಾಡಿಗಾಗಿ ಬಿಟ್ಟು ಚುನಾವಣೆಯಲ್ಲಿ ಒಂದಾಗಿ ಕೆಲಸ ಮಾಡಬೇಕೆಂದು ಮನವಿ ಮಾಡಿದ ಅವರು, ನಮಗೆ ಒಂದೊಂದು ಕ್ಷೇತ್ರಗಳು ಅಮೂಲ್ಯ. ಈಗಾಗಲೇ ಐದಾರು ಬಾರಿ ಮೀಟಿಂಗ್ ಮಾಡಿದ್ದೇವೆ. ಅಸಮಾಧಾನ ಇರುವವರನ್ನು ನಾನೇ ಖುದ್ದು ಕರೆಸಿಕೊಂಡು ಮಾತನಾಡುತ್ತೇನೆ ಎಂದರು.

ನಾರಾಯಣಗೌಡ ವಿರುದ್ಧ ವಾಗ್ದಾಳಿ: ನಾನು ಸಿಎಂ ಆಗಿದ್ದಾಗ ಕೆ.ಆರ್.ಪೇಟೆ ಕ್ಷೇತ್ರದ ರಸ್ತೆ ಅಭಿವೃದ್ಧಿಗೆ ನೂರಾರು ಕೋಟಿ ಬಿಡುಗಡೆ ಮಾಡಿದ್ದೆ. ಈಗಲೂ ಸಹ ಕೆ.ಆರ್.ಪೇಟೆಯಲ್ಲಿ ನಾನು ಕೊಟ್ಟ ಕಾರ್ಯಕ್ರಮಗಳೇ ಮುಂದುವರೆಯುತ್ತಿವೆ. ನಾರಾಯಣಗೌಡ ನಾನು ಮಂತ್ರಿಯಾಗಿ ಯಾರು ಮಾಡದ ಕೆಲಸ ಮಾಡಿದ್ದೇನೆ ಎನ್ನುತ್ತಿದ್ದಾರೆ. ಶೀಘ್ರ ಆತನ ಬಣ್ಣ ಬಯಲು ಮಾಡುತ್ತೇನೆ ಎಂದು ಕಿಡಿಕಾರಿದರು.

ಪಂಚರತ್ನ ಯಾತ್ರೆಗೆ ಉತ್ತಮ ಸ್ಪಂದನೆ: ಪಂಚರತ್ನ ಯಾತ್ರೆಗೆ ಜನರಿಂದ ಉತ್ತಮ ಸ್ಪಂದನೆ ಸಿಕ್ಕಿದೆ. ಹೋದಲ್ಲೆಲ್ಲಾ ಕ್ರೇನ್ ಮೂಲಕ ವಿಶೇಷ ಹಾರಗಳನ್ನು ಸ್ವಯಂ ಪ್ರೇರಣೆಯಿಂದ ಹಾಕುತ್ತಿದ್ದಾರೆ. ರಾಜ್ಯದಲ್ಲಿ ಎದ್ದಿರುವ ಈ ಹಾರದ ಕ್ರೇಜ್, ಗಿನ್ನಿಸ್ ರೆಕಾರ್ಡ್ ಸೇರುತ್ತದೆ ಎಂದರು.

ಕೆಂಪಣ್ಣ ದಾಖಲೆ ಬಿಡುಗಡೆ ಮಾಡಲಿ: ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಬಂಧನ, ಬಿಡುಗಡೆ ವಿಚಾರವಾಗಿ ಮಾತನಾಡಿ, ಕೆಂಪಣ್ಣ ಅವರು ಸರ್ಕಾರದ ವಿರುದ್ಧ 40% ಕಮಿಷನ್ ಆರೋಪ ಮಾಡಿದ್ದರು. ಹೀಗಾಗಿ ಮಂತ್ರಿಯೊಬ್ಬರು ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರಿಂದ ಅವರನ್ನು ಬಂಧಿಸಿ ಬಿಡುಗಡೆ ಮಾಡಲಾಗಿದೆ. ಅವರ ಬಳಿ ದಾಖಲೆಗಳು ಇದ್ದರೆ ಬಿಡುಗಡೆ ಮಾಡಿ ರಾಜ್ಯದ ಜನತೆ ಮುಂದೆ ಸತ್ಯಾಂಶ ಇಡಬೇಕು ಎಂದು ಸಲಹೆ ನೀಡಿದರು.

ರೆಡ್ಡಿ ಹೊಸ ಪಕ್ಷದ ಬಗ್ಗೆ ಮಾಹಿತಿ ಇಲ್ಲ: ಮಾಜಿ ಸಚಿವ ಜನಾರ್ಧನ ರೆಡ್ಡಿ ನೂತನ ಪಕ್ಷ ಘೋಷಣೆ ಮಾಡಿದ ವಿಚಾರದ ಬಗ್ಗೆ ಮಾತನಾಡಿ, ಅವರು ಹೊಸ ಪಕ್ಷ ಘೋಷಣೆ ಮಾಡಿರುವ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರು.

ಪಂಚರತ್ನ ರಥಯಾತ್ರೆ ಸ್ವಾಗತಕ್ಕೆ ನಾಗಮಂಗಲ ಸಜ್ಜು

ನಾಗಮಂಗಲ, ಡಿ.25– ಜೆಡಿಎಸ್ ಪಂಚರತ್ನ ರಥಯಾತ್ರೆ ಡಿ.26ರಂದು ನಾಗಮಂಗಲ ತಾಲೂಕು ಪ್ರವೇಶಿಸಲಿದೆ. ತಾಲೂಕಿನ ಬೋಗಾದಿ ಗ್ರಾಮದ ಮೂಲಕ ಪ್ರವೇಶಿಸುವ ಯಾತ್ರೆಯನ್ನು ಸ್ವಾಗತಿಸಲು ಪಟ್ಟಣದ ಸಾರೆಮೇಗಲಕೊಪ್ಪಲು, ಮೈಲಾರ ಪಟ್ಟಣ, ಪಾಲಾಗ್ರಹಾರದ ರಸ್ತೆಗಳು ವಿದ್ಯುತ್ ದೀಪಗಳಿಂದ ಅಲಂಕಾರಗೊಂಡಿವೆ. ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಪಟ್ಟಣದ ಇತಿಹಾಸ ಪ್ರಸಿದ್ಧ ಸೌಮ್ಯಕೇಶವ ದೇವಾಲಯಕ್ಕೆ ಭೇಟಿ ನೀಡಲಿದ್ದಾರೆ ಎನ್ನಲಾಗಿದ್ದು, ದೇವಸ್ಥಾನಕ್ಕೆ ದೀಪಾಲಂಕಾರ ಹಾಗೂ ರಸ್ತೆ ಸಹ ದೀಪಗಳಿಂದ ಸಿಂಗಾರಗೊಂಡಿದೆ.

ಶಿವಲಿಂಗಯ್ಯ ನಿಧನ



ಭಾರತೀನಗರ, ಡಿ.25– ಇಲ್ಲಿಗೆ ಸಮೀಪದ ಚಿಕ್ಕರಸಿನಕೆರೆ ಗ್ರಾಮದ ಶಿವಲಿಂಗಯ್ಯ (61) ನಿಧನರಾದರು. ಮೃತರು ಪತ್ನಿ ನೇತ್ರಾವತಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಂಡ್ಯದಲ್ಲಿ 22 ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಮಂಡ್ಯ, ಡಿ.25– ನಗರೋತ್ಥಾನ ಯೋಜನೆಯಡಿ 22 ಕೋಟಿ ರೂ. ವೆಚ್ಚದಲ್ಲಿ ಮಂಡ್ಯ ನಗರದ ಪ್ರಮುಖ ರಸ್ತೆಗಳು ಹಾಗೂ ವಾರ್ಡ್‌ಗಳ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎಂ.ಶ್ರೀನಿವಾಸ್ ಹಾಗೂ ನಗರಸಭಾಧ್ಯಕ್ಷ ಎಚ್.ಎಸ್.ಮಂಜು ನಗರದ ಹೊಸಹಳ್ಳಿ ವೃತ್ತ ಸೇರಿದಂತೆ ವಿವಿಧೆಡೆ ಚಾಲನೆ ನೀಡಿದರು.

ಶಾಸಕ ಎಂ.ಶ್ರೀನಿವಾಸ್ ಮಾತನಾಡಿ, ನಗರೋತ್ಥಾನ ಯೋಜನೆಯಡಿ ನಗರಸಭೆ ವತಿಯಿಂದ ನಗರದ 35 ವಾರ್ಡ್ ಅಭಿವೃದ್ಧಿಗೆ ತಲಾ 50 ಲಕ್ಷ ಬಿಡುಗಡೆಯಾಗಿದ್ದು, ಜೊತೆಗೆ ಪ್ರಮುಖ ರಸ್ತೆಗಳ ಅಭಿವೃದ್ಧಿಗೂ ಹಣ ಮಂಜೂರಾಗಿದೆ. 22 ಕೋಟಿ ರೂ. ರಸ್ತೆ ಅಭಿವೃದ್ಧಿಗೆ ಬಿಡುಗಡೆಯಾಗಿದ್ದು, ಮಳೆ ಹಾನಿಯಿಂದ ದುರಸ್ತಿಗೊಂಡಿರುವ ಎಲ್ಲಾ ರಸ್ತೆಗಳನ್ನು ಅಭಿವೃದ್ಧಿ ಮಾಡಲಾಗುವುದು ಎಂದು ಹೇಳಿದರು.

ನಗರಸಭಾಧ್ಯಕ್ಷ ಎಚ್.ಎಸ್.ಮಂಜು ಮಾತನಾಡಿ, ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆಯಡಿ 22 ಕೋಟಿ ರೂ. ಹಣ ಮೊದಲ ಹಂತದಲ್ಲಿ ಬಿಡುಗಡೆಯಾಗಿದ್ದು, ಈ ಹಣದಲ್ಲಿ ಮಂಡ್ಯ ನಗರದ ಮುಖ್ಯ ರಸ್ತೆಗಳಾದ ಯತ್ತಗದಹಳ್ಳಿ ರಸ್ತೆ, ಸರ್ ಮಿರ್ಜಾ ಇಸ್ಮಾಯಿಲ್ ರಸ್ತೆ, ನೂರಡಿ, ರಸ್ತೆ ವಿ.ವಿ.ರಸ್ತೆ ಎಪಿಎಂಸಿ ರಸ್ತೆಗಳ



ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಂಡಿದ್ದು, ಅಲ್ಲದೇ ಪ್ರತಿ ವಾರ್ಡ್‌ಗೆ 40ರಿಂದ 50 ಲಕ್ಷ ರೂ ಮಂಜೂರು ಮಾಡಿದ್ದು, ಮಳೆಯಿಂದ ಅನೇಕ ರಸ್ತೆಗಳು ಗುಂಡಿ ಬಿದ್ದಿವೆ. ಈ ಹಣದಲ್ಲಿ ಗುಂಡಿ ಬಿದ್ದಿರುವ ಎಲ್ಲಾ ರಸ್ತೆ ಕಾಮಗಾರಿಗಳು ಪೂರ್ಣಗೊಳ್ಳಲಿವೆ ಎಂದರು.

ನಗರದಲ್ಲಿ ಪ್ರಮುಖ ರಸ್ತೆಗಳು, ವಾರ್ಡ್ ರಸ್ತೆಗಳು, ಪಾರ್ಕ್‌ಗಳು, ಸರ್ಕಲ್‌ಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಟೆಂಡರ್ ಕರೆದು ಕೂಡಲೇ ಕಾಮಗಾರಿ ಆರಂಭಿಸಲಾಗುವುದು. ಇನ್ನು 6 ಕೋಟಿ ರೂ. ವೆಚ್ಚದ ಕ್ರಿಯಾ ಯೋಜನೆ ಸಿದ್ಧವಾಗಿದ್ದು, ಅದಕ್ಕೂ 15ರಿಂದ 20 ದಿನಗಳಲ್ಲಿ ಹಣ ಬಿಡುಗಡೆಯಾಗಲಿದೆ. ಒಟ್ಟಾರೆ 35 ಕೋಟಿ ರೂ. ವೆಚ್ಚದಲ್ಲಿ ಮಂಡ್ಯ ನಗರ ಸಮಗ್ರವಾಗಿ ಅಭಿವೃದ್ಧಿಯಾಗಲಿದೆ ಎಂದರು. ಈ ವೇಳೆ ನಗರಸಭೆ ಆಯುಕ್ತ ಮಂಜುನಾಥ್, ಉಪಾಧ್ಯಕ್ಷೆ ಇಶ್ರತ್ ಫಾತೀಮಾ ಸೇರಿದಂತೆ ನಗರಸಭೆ ಸದಸ್ಯರು ಉಪಸ್ಥಿತರಿದ್ದರು.

ಅರಮನೆ ಆವರಣದ ಪುಷ್ಪ ಕಾಶಿ ನಡುವೆ ರಾಜೇಶ್ ಕೃಷ್ಣನ್ ಗಾನ ಮಾಧುರ್ಯ





ಕಣ್ಮನ ಸೆಳೆದ ಅರಮನೆ ಅಂಗಳ

ಮೈಸೂರು, ಡಿ.25(ಜಿಎ)– ಪುಷ್ಪ ಕಾಶಿಯಲ್ಲಿ ಮೆಲೋಡಿ ಕಿಂಗ್ ರಾಜೇಶ್ ಕೃಷ್ಣನ್ ಗಾನ ಸುಧೆಗೆ ತಲೆದೂಗಿದ ಪ್ರವಾಸಿಗರು... ಕರತಾಡನ ಮೂಲಕ ಹರ್ಷ ವ್ಯಕ್ತಪಡಿಸಿದರು.

ಮೈಸೂರು ಅರಮನೆ ಮಂಡಳಿ ವತಿಯಿಂದ ಅರಮನೆ ಆವರಣದಲ್ಲಿ ಆಯೋಜಿಸಿರುವ ಫಲಪುಷ್ಪ ಪ್ರದರ್ಶನ ಪ್ರಯುಕ್ತ ಏರ್ಪಡಿಸಿರುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಎರಡನೇ ದಿನವಾದ ಇಂದು ಕನ್ನಡದ ಖ್ಯಾತ ಗಾಯಕ ರಾಜೇಶ್ ಕೃಷ್ಣನ್ ಮತ್ತು ತಂಡದವರು ಮೈಸೂರಿಗರನ್ನು ಸಂಗೀತ ಲೋಕಕ್ಕೆ ಕೊಂಡೊಯ್ದರು.

ಮೆಲೋಡಿ ಕಿಂಗ್ ಹೆಸರಿಗೆ ತಕ್ಕಂತೆ ಸುಮಧುರ ಕಂಠದ ಮೂಲಕ ರಾಜೇಶ್ ಕೃಷ್ಣನ್ 'ಒರಟ' ಚಿತ್ರದ 'ಯಾರೋ ಕಣ್ಣಲ್ಲಿ ಕಣ್ಣನಿಟ್ಟು' ಗೀತೆಯ ಆರಂಭಿಸುತ್ತಿದಂತೆ ಅರಮನೆ ಆವರಣದಲ್ಲಿ ನೆರೆದಿದ್ದ ಯುವಕ, ಯುವತಿಯರು ಸೇರಿದಂತೆ ಎಲ್ಲಾ ವಯೋಮಾನದವರು ಚಪ್ಪಾಳೆ ಮೂಲಕ ಸಂಭ್ರಮಿಸಿದರು.

ಕಿಚ್ಚ ಸುದೀಪ್ ನಟನೆಯ ಹುಚ್ಚ ಚಿತ್ರದ 'ಉಸಿರೇ ಉಸಿರೇ ಈ ಉಸಿರ ಕೊಲ್ಲಬೇಡ' ಗೀತೆಗೆ ಸಂಗೀತ ಪ್ರೇಮಿಗಳು ತಮ್ಮ ಮೊಬೈಲ್ ಫ್ಲಾಷ್ ಲೈಟ್ ಆನ್ ಮಾಡುವ ಮೂಲಕ ಸ್ವಾಗತಿಸಿದರೆ, ಪಡ್ಡೆ ಯುವಕರು ಶಿಳ್ಳೆಗಳ ಮೂಲಕ ರಂಜಿಸಿದರು.

ಎಸ್‌ಪಿಬಿ ನೆನಪು : ಈ ವೇಳೆ ಮಾತನಾಡಿದ ರಾಜೇಶ್ ಕೃಷ್ಣನ್, ಅರಮನೆ ಆವರಣದಲ್ಲಿ ಅನೇಕ ಕಾರ್ಯಕ್ರಮಗಳನ್ನು ನೀಡಿದ್ದೇನೆ. ಅದರಲ್ಲಿ ಪ್ರಮುಖವಾಗಿ ಕೊರೊನಾ ಸಂದರ್ಭದಲ್ಲಿ ಭಾರತದ ಖ್ಯಾತ ಗಾಯಕ ಹಾಗೂ ನನ್ನ ಗುರುಗಳಾದ ಡಾ.ಎಸ್.ಪಿ. ಬಾಲಸುಬ್ರಮಣ್ಯಂ ಅವರ ಸ್ಮರಣಾರ್ಥ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹಾಡಿದ್ದು, ಎಂದಿಗೂ ಮರೆಯಲು ಸಾಧ್ಯವಿಲ್ಲ ಎಂದು ಎಸ್‌ಪಿಬಿ ಅವರನ್ನು ಸ್ಮರಿಸಿದರು.


ಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಅವರ ನಿರ್ದೇಶನದಲ್ಲಿ ನಾದಬ್ರಹ್ಮ ಹಂಸಲೇಖರ ರಾಗ ಸಂಯೋಜನೆಯಲ್ಲಿ ಮೂಡಿ ಬಂದ ಈ ಗೀತೆ ನನಗೆ ಚಿತ್ರರಂಗದಲ್ಲಿ ವಿಶೇಷ ಹೆಸರು ತಂದುಕೊಟ್ಟಿತ್ತು. ಅದುವೇ 'ಅಮೇರಿಕಾ ಅಮೇರಿಕಾ' ಚಿತ್ರದ 'ನೂರು ಜನ್ಮಕ್ಕೂ ನೂರಾರು ಜನ್ಮಕ್ಕೂ' ಗೀತೆ ಎಂದು ಹಾಡಲು ಆರಂಭಿಸುತ್ತಿದ್ದಂತೆ ಇಡೀ ಅರಮನೆ ಆವರಣ ನಿಶಬ್ದವಾಗಿ, ಅವರ ಗಾಯನ ಎಲ್ಲರ ಹೃದಯ ತಣಿಸಿತು.

ಕರಾಟೆ ಕಿಂಗ್ ಶಂಕರ್ ನಾಗ್ ಅವರ ಸಿಬಿಐ ಶಂಕರ್ ಚಿತ್ರದ 'ಗೀತಾಂಜಲಿ ಹಾಲುಗೆನ್ನೆಗೆ' ಗೀತೆ ಹಾಡುವ ಮೂಲಕ ಶಂಕರ್ ನಾಗ್‌ಗೆ ಜೈಕಾರಗಳು ಕೇಳಿಬಂದವು. ನಂತರ ರಾಜೇಶ್ ಕೃಷ್ಣನ್ ಮತ್ತು ಗಾಯಕಿ ಜೋಗಿ ಸುನೀತಾ ಜೋಡಿಯಾಗಿ ಕನ್ನಡ ಚಿತ್ರರಂಗದ ಎವರ್ ಗ್ರೀನ್ ಗೀತೆಯಾದ ಪಲ್ಲವಿ ಅನುಪಲ್ಲವಿ ಚಿತ್ರದ 'ನಗುವ ನಯನ ಮಧುರ ಮೌನ' ಗೀತೆ ಹಾಡಿ ಎಲ್ಲರಲ್ಲೂ ಫಲಪುಷ್ಪ ಪ್ರದರ್ಶನದ ಮಧುರ ನೆನಪು ಮೂಡುವಂತೆ ಮಾಡಿದರೆ, ರಾಜೇಶ್ ಕೃಷ್ಣನ್ ಮತ್ತು ಎದೆ ತುಂಬಿ ಹಾಡುವೆನು ಖ್ಯಾತಿಯ ನಾದಿರ ಬಾನು ಇಂತಿ ನಿನ್ನ ಪ್ರೀತಿಯ ಚಿತ್ರದ 'ಒಂದೊಂದೇ ಬಚ್ಚಿಟ್ಟ ಮಾತು ಒಂದೊಂದೇ ಮಾತಾಡೋ ಮೌನ' ಗೀತೆಯ ಮೂಲಕ ನೆರೆದಿದ್ದ ಯುವ ಸಮೂಹವನ್ನು ರಂಜಿಸಿದರು.

ಇದಕ್ಕೂ ಮೊದಲು ಗಾಯಕಿ ಸುನೀತಾ ಬೆಳ್ಳಿ ಕಾಲುಂಗುರ ಚಿತ್ರದ 'ಕೇಳಿಸದೆ ಕಲ್ಲು ಕಲ್ಲಿನಲ್ಲಿ ಕನ್ನಡ ನುಡಿ' ಗೀತೆ, ಸರಿಗಮಪ ಖ್ಯಾತಿ ಗಾಯಕ ಅಶ್ವಿನ್ ಶರ್ಮ ರವಿಚಂದ್ರನ್ ನಟನೆಯ ನಾನು ನನ್ನ ಹೆಂಡ್ತಿ ಚಿತ್ರದ 'ಕರುನಾಡ ತಾಯಿ ಸದಾ ಚಿನ್ಮಯಿ' ಗೀತೆ ಮತ್ತು ಗಾಯಕಿ ನಾದಿರ ಬಾನು ರಾಬರ್ಟ್ ಚಿತ್ರದ 'ಕಣ್ಣು ಹೊಡೆಯೊಕೆ' ಗೀತೆ ಹಾಡುವ ಮೂಲಕ ಸಂಗೀತ ಪ್ರೇಮಿಗಳಿಗೆ ಸಂಗೀತ ರಸದೌತಣ ಬಡಿಸಿದರು.

ಇಂದಿನ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮೊದಲು ಗುರುದತ್ತ ನಾಗರಾಜ ಮತ್ತು ತಂಡ ಒಂದು ಗಂಟೆ ಕಾಲ ಕರ್ನಾಟಕ ಶಾಸ್ತ್ರೀಯ ಸಂಗೀತ ಪ್ರಸ್ತುತ ಪಡಿಸಿದರು.

ನಾಳೆ(ಡಿ.26) ಸಂಜೆ 6 ರಿಂದ 6.45 ರವರೆಗೂ ಬಿ.ಎನ್.ಗಾಯತ್ರಿ ಅವರು ಶಾಸ್ತ್ರೀಯ ಸಂಗೀತ ಪ್ರಸ್ತುತ ಪಡಿಸಲಿದ್ದಾರೆ. 7ರಿಂದ 7.30ರವರೆಗೆ ನಿತ್ಯ ನಿರಂತರ ಟ್ರಸ್ಟ್‌ನ ವಿಶೇಷ ಚೇತನ ಮಕ್ಕಳು ನೃತ್ಯ ಪ್ರದರ್ಶನ ನಂತರ 7.30 ರಿಂದ 9ರವರೆಗೆ ಖ್ಯಾತ ಗಾಯಕ ವಿಜಯ ಪ್ರಕಾಶ್, ಅನುರಾಧ ಭಟ್ ಹಾಗೂ ಲಕ್ಷ್ಮೀ ನಾಗರಾಜ್ ತಂಡದ ವತಿಯಿಂದ ಸಂಗೀತ ಗಾನಾಮೃತ ಕಾರ್ಯಕ್ರಮ ನಡೆಯಲಿದೆ.



ವರ್ಷಾಂತ್ಯ ಹಾಗೂ ಕ್ರಿಸ್‌ಮಸ್ ಹಿನ್ನೆಲೆಯಲ್ಲಿ ಮೈಸೂರಿಗೆ ಪ್ರವಾಸಿಗರು ಸಾಗರೋಪಾದಿಯಲ್ಲಿ ಧಾವಿಸುತ್ತಿದ್ದು, ಲಲಿತಮಹಲ್ ರಸ್ತೆ ಕುರುಬಾರಹಳ್ಳಿ ವೃತ್ತದ ಬಳಿ ಭಾನುವಾರ ವಾಹನ ದಟ್ಟಣೆ ಉಂಟಾಗಿತ್ತು. ಅರಮನೆ, ಚಾಮುಂಡಿಬೆಟ್ಟ, ಮೃಗಾಲಯ ಸೇರಿದಂತೆ ಪ್ರೇಕ್ಷಣೀಯ ಸ್ಥಳಗಳಲ್ಲೂ ಪ್ರವಾಸಿಗರ ದಂಡೇ ನೆರೆದಿತ್ತು. ವಾಹನ ನಿಲುಗಡೆಗೆ ಸ್ಥಳಾವಕಾಶವಿಲ್ಲದೆ ಚಾಲಕರು ತಿಣುಕಾಡುತ್ತಿದ್ದ ದೃಶ್ಯವೂ ಕಂಡುಬಂದಿತು.

ವಾಜಪೇಯಿ ಭಾರತ ರಾಜಕಾರಣದ ಆದರ್ಶ ನಾಯಕ

ಮಾಜಿ ಮೇಯರ್ ಸಂದೇಶ್‌ಸ್ವಾಮಿ ಗುಣಗಾನ



ಮೈಸೂರು, ಡಿ.25(ಎಸ್‌ಬಿಡಿ)– ಅಜಾತಶತ್ರು ಅಟಲ್ ಬಿಹಾರಿ ವಾಜಪೇಯಿ ಅವರು ಭಾರತ ರಾಜಕಾರಣದ ಆದರ್ಶ ನಾಯಕರು ಎಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ಬಣ್ಣಿಸಿದರು.

ವಾಜಪೇಯಿ ಅವರ ಜನ್ಮ ದಿನಾಚರಣೆ ಪ್ರಯುಕ್ತ ಬಿಜೆಪಿ ಯುವ ಮೋರ್ಚಾ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ವತಿಯಿಂದ ಕೆಸರೆ ರಾಜೇಂದ್ರನಗರದ ಕೆಇಬಿ ಭವನದಲ್ಲಿ ಆಯೋಜಿಸಿದ್ದ ಚಿತ್ರಕಲೆ ಹಾಗೂ ದೇಶಭಕ್ತಿ ಗೀತೆ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಅಜಾತಶತ್ರು ವಾಜಪೇಯಿ ಅವರು ತಮ್ಮ ರಾಜಕೀಯ ಚಿಂತನೆಗಳಿಗೆ ಕಟಿಬದ್ಧರಾಗಿದ್ದರು. ಪಂಡಿತ್ ಜವಾಹರ್ ಲಾಲ್ ನೆಹರು ಅವರ ನಂತರದಲ್ಲಿ ಸತತ ಎರಡು ಬಾರಿ ಪ್ರಧಾನಿಯಾಗಿ ಉತ್ತಮ ಸೇವೆ ಸಲ್ಲಿಸಿದರು. ಅವರು ಲೋಕಸಭೆಗೆ 9 ಬಾರಿ ಹಾಗೂ ರಾಜ್ಯಸಭೆಗೆ 2 ಬಾರಿ ಆಯ್ಕೆಯಾಗಿದ್ದೂ ಒಂದು ದಾಖಲೆ. ವಿದೇಶಾಂಗ ಸಚಿವರಾಗಿ, ಸಂಸತ್ತಿನ ವಿವಿಧ ಮುಖ್ಯ ಸ್ಥಾಯಿ ಸಮಿತಿಗಳ ಅಧ್ಯಕ್ಷರಾಗಿ ಹಾಗೂ ವಿರೋಧಪಕ್ಷದ ನಾಯಕರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಸ್ವಾತಂತ್ರ್ಯ ನಂತರ ದೇಶೀಯ ಮತ್ತು ವಿದೇಶಿ ನೀತಿಗಳಿಗೆ ಸ್ಪಷ್ಟ ರೂಪ ನೀಡುವಲ್ಲಿ ಮಹತ್ವದ ಪಾತ್ರ ವಹಿಸಿದ್ದ ಅವರು, ಭಾರತ ರಾಜಕೀಯ ರಂಗಕ್ಕೆ ಮಾದರಿ ಎಂದರು.

ವಸ್ತು ಪ್ರದರ್ಶನ ಪ್ರಾಧಿಕಾರ ಮಾಜಿ ಅಧ್ಯಕ್ಷರಾದ ಬಿ.ಪಿ.ಮಂಜುನಾಥ್ ಮಾತನಾಡಿ, ಮಹಾನ್ ರಾಷ್ಟ್ರಭಕ್ತರಾಗಿದ್ದ ವಾಜಪೇಯಿ ಅವರು ರಾಷ್ಟ್ರದ ಒಳಿತಿಗಾಗಿ ಹಗಲಿರುಳು ಶ್ರಮಿಸುತ್ತಿದ್ದರು. ಈ ಮಹನೀಯರ ಜನುಮ ದಿನದ ಪ್ರಯುಕ್ತ ರಾಷ್ಟ್ರಭಕ್ತರ ಚಿತ್ರಕಲೆ ಮತ್ತು ದೇಶಭಕ್ತಿ ಗೀತೆ ಸ್ಪರ್ಧೆ ಆಯೋಜಿಸಿರುವುದು, ಇದರಲ್ಲಿ 500ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಿರುವುದು ಪ್ರಶಂಸನೀಯ ಎಂದರು.

ಕಾರ್ಯಕ್ರಮದಲ್ಲಿ ಬಿಜೆಪಿ ಯುವ ಮೋರ್ಚಾ ನಗರ ಅಧ್ಯಕ್ಷ ಎಂ.ಜೆ.ಕಿರಣ್ ಗೌಡ, ನರಸಿಂಹರಾಜ ಕ್ಷೇತ್ರದ ಅಧ್ಯಕ್ಷ ಡಿ.ಲೋಹಿತ್, ರಾಜ್ಯ ಅಲ್ಪಸಂಖ್ಯಾತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಡಾ.ಅನಿಲ್ ಥಾಮಸ್, ನಗರ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ಸಂತೋಷ್ ಕುಮಾರ್, ಭರತ್, ನಗರ ಕಾರ್ಯಕಾರಿಣಿ ಸದಸ್ಯರಾದ ಕೃಷ್ಣಮೂರ್ತಿ ರಾವತ್, ಶಿವಾನಂದ್ ರಾವ್, ಕ್ಷೇತ್ರದ ಕಾರ್ಯದರ್ಶಿ ಸುಬ್ರಮಣ್ಯ, ನಗರ ಕಾರ್ಯದರ್ಶಿ ಮಹದೇವ ಪ್ರಸಾದ್, ಯುವ ಮೋರ್ಚಾ ನಗರ ಉಪಾಧ್ಯಕ್ಷರಾದ ಕಾರ್ತಿಕ್ ಮರಿಯಪ್ಪ ನಿಶಾಂತ್, ಕಾರ್ಯದರ್ಶಿ ಪುನೀತ್, ಹಿಂದುಳಿದ ವರ್ಗಗಳ ಮೋರ್ಚಾ ನಗರ ಕಾರ್ಯದರ್ಶಿ ಮಹದೇವ್, ಕ್ಷೇತ್ರದ ಮುಖಂಡರಾದ ಪರಮೇಶ್ವರಯ್ಯ, ಧನರಾಜ್, ನವೀನ್ ಶೆಟ್ಟಿ, ಮನೋಜ್, ಅರುಣ್, ರಂಜು, ಧನುಷ್, ವೇದಮೂರ್ತಿ, ಹಾಗೂ ಸ್ಪರ್ಧೆಯ ತೀರ್ಪುಗಾರರಾದ ವಿದ್ಯಾ ಅನಿತಾ, ಮೇಘನಾ ಮತ್ತಿತರರಿದ್ದರು.

ವಿಶ್ವದಾದ್ಯಂತ ಸಂಭ್ರಮದ ಕ್ರಿಸ್‌ಮಸ್ ಆಚರಣೆ

ಜನತೆಗೆ ಪ್ರಧಾನಿ ಮೋದಿ ಶುಭಾಶಯ

ನವದೆಹಲಿ, ಡಿ.25– ವಿಶ್ವದಾದ್ಯಂತ ಸಂಭ್ರಮದ ಕ್ರಿಸ್‌ಮಸ್ ಹಬ್ಬವನ್ನು ಆಚರಣೆ ಮಾಡಲಾಗುತ್ತಿದ್ದು, ಈ ಹಿನ್ನೆಲೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಜನತೆಗೆ ಶುಭಾಶಯಗಳನ್ನು ಕೋರಿದ್ದಾರೆ.

ಸಾಮಾಜಿಕ ಜಾಲತಾಣ ಟ್ವಿಟ್ಟರ್‌ನಲ್ಲಿ ದೇಶದ ಜನತೆಗೆ ಶುಭಾಶಯಗಳನ್ನು ಕೋರಿರುವ ಅವರು, ಮೇರಿ ಕ್ರಿಸ್‌ಮಸ್ ಈ ವಿಶೇಷ ದಿನವು ನಮ್ಮ ಸಮಾಜದಲ್ಲಿ ಸಾಮರಸ್ಯ ಮತ್ತು ಸಂತೋಷದ ಮನೋಭಾವವನ್ನು ಇನ್ನಷ್ಟು ಹೆಚ್ಚಿಸಲಿ. ನಾವು ಯೇಸು ಕ್ರಿಸ್ತನ ಉದಾತ್ತ ಚಿಂತನೆಗಳನ್ನು ಹಾಗೂ ಅವರು ಸಮಾಜಕ್ಕೆ ಸೇವೆ ಸಲ್ಲಿಸಲು ಒತ್ತು ನೀಡಿದ್ದನ್ನು ಸ್ಮರಿಸುತ್ತೇವೆಂದು ಹೇಳಿದ್ದಾರೆ.

ವಿಶ್ವದಾದ್ಯಂತ ಕ್ರಿಸ್‌ಮಸ್ ಹಬ್ಬವನ್ನು ಸಡಗರ ಹಾಗೂ ಸಂಭ್ರಮದಿಂದ ಆಚರಿಸಲಾಗುತ್ತಿದ್ದು, ರಾತ್ರಿಯಿಂದಲೇ ಚರ್ಚ್‌ಗಳಿಗೆ ತೆರಳಿ ಪ್ರಾರ್ಥನೆಗಳನ್ನು ಸಲ್ಲಿಸಲಾಗುತ್ತಿದೆ. ಕ್ರಿಸ್‌ಮಸ್ ಅಂಗವಾಗಿ ಚರ್ಚ್‌ಗಳಿಗೆ ದೀಪಾಲಂಕಾರಗಳನ್ನು ಮಾಡಲಾಗಿತ್ತು. ರಾತ್ರಿಯಿಂದಲೇ ಚರ್ಚ್‌ಗಳಲ್ಲಿ ವಿಶೇಷ ಪ್ರವಚನ ನಡೆಸಲಾಗುತ್ತಿದೆ. ೦ಯೇಸು ಪ್ರಭುವಿಗೆ ನಮನಗಳನ್ನು ಸಲ್ಲಿಸಲಾಗುತ್ತಿದೆ.

ಕೆ.ಆರ್.ಕ್ಷೇತ್ರದಲ್ಲಿ ಬ್ರಾಹ್ಮಣ ಅಭ್ಯರ್ಥಿಗಳನ್ನೇ ಕಣಕ್ಕಿಳಿಸಲು ಆಗ್ರಹ

ರಾಜ್ಯ ಬ್ರಾಹ್ಮಣ ಮಹಾಸಭಾ ವಲಯ ಉಪಾಧ್ಯಕ್ಷ ಬಿ.ಆರ್.ನಟರಾಜ್ ಜೋಯಿಸ್ ಒತ್ತಾಯ



ಮೈಸೂರು, ಡಿ.25– ಮೈಸೂರಿನ ಕೃಷ್ಣರಾಜ ವಿಧಾನಸಭಾ ಕ್ಷೇತ್ರದಲ್ಲಿ ಎಲ್ಲಾ ಪಕ್ಷಗಳಿಂದ ಬ್ರಾಹ್ಮಣ ಸಮುದಾಯದ ಮುಖಂಡರನ್ನೇ ಚುನಾವಣಾ ಕಣಕ್ಕಿಳಿಸಬೇಕೆಂಬ ವಿಶೇಷ ಆಗ್ರಹವನ್ನು ರಾಜ್ಯ ಬ್ರಾಹ್ಮಣ ಮಹಾಸಭಾ ವಲಯ ಉಪಾಧ್ಯಕ್ಷ ಬಿ.ಆರ್.ನಟರಾಜ್ ಜೋಯಿಸ್ ಮಾಡಿದ್ದಾರೆ.

ಸಂಧ್ಯಾ ಸುರಕ್ಷಾ ಟ್ರಸ್ಟ್, ಜಿಲ್ಲಾ ಬ್ರಾಹ್ಮಣ ಮಹಾಸಭಾ, ಕರ್ನಾಟಕ ಬ್ರಾಹ್ಮಣ ಹಿರಿಯ ನಾಗರಿಕ ವೇದಿಕೆ ಹಾಗೂ ಬ್ರಾಹ್ಮಣ ಧರ್ಮ ಸಂಸ್ಕಾರ ಪ್ರತಿಷ್ಠಾನದ ಸಹಯೋಗದಲ್ಲಿ ರಾಮಕೃಷ್ಣನಗರ ಉದಯರವಿ ರಸ್ತೆಯ ಸಂಧ್ಯಾ ಚೇತನ ಸಭಾ ಭವನದಲ್ಲಿ ಭಾನುವಾರ ಏರ್ಪಡಿಸಿದ್ದ ಮಾಜಿ ಪ್ರಧಾನಿ ವಾಜಪೇಯಿ ಅವರ ಜನ್ಮ ದಿನಾಚರಣೆ ಹಾಗೂ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

ರಾಜ್ಯದ 6 ಕ್ಷೇತ್ರಗಳಲ್ಲಿ ಬ್ರಾಹ್ಮಣ ಸಮುದಾಯದ ನಾಯಕರು ಗೆಲ್ಲಬಹುದಿದ್ದು, ಹಾಗೆಯೇ ಕೃಷ್ಣರಾಜ ಕ್ಷೇತ್ರದಲ್ಲಿ ಬಿಜೆಪಿ, ಜೆಡಿಎಸ್ ಹಾಗೂ ಕಾಂಗ್ರೆಸ್ ಪಕ್ಷದಿಂದ ಬ್ರಾಹ್ಮಣ ಮುಖಂಡರಿಗೆ ಟಿಕೆಟ್ ನೀಡಬೇಕು. ಈ ಬಗ್ಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲೂ ಮನವಿ ಮಾಡುತ್ತೇನೆ. ಒಂದೇ ಸಮುದಾಯದ ಅಭ್ಯರ್ಥಿಗಳಲ್ಲಿ ಯಾರು ಉತ್ತಮರೆಂದು ಜನರೇ ನಿರ್ಧರಿಸಿ, ಆಯ್ಕೆ ಮಾಡುತ್ತಾರೆ ಎಂದು ಅಭಿಪ್ರಾಯಿಸಿದರು.

ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಮಾತನಾಡಿ, ಅಜಾತಶತ್ರುವಾಗಿದ್ದ ವಾಜಪೇಯಿ ಅವರ ಬದುಕಿನ ಸಿದ್ಧಾಂತ, ರಾಷ್ಟ್ರಪ್ರೇಮ, ರಾಷ್ಟ್ರೀಯತೆ ಎಂದಿಗೂ ಆದರ್ಶ ಎಂದರು. ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್, ಎರಡು ಸ್ಥಾನ ಪಡೆದಿದ್ದ ಬಿಜೆಪಿ ಕೇಂದ್ರದ ಅಧಿಕಾರಕ್ಕೇರಿಸುವಲ್ಲಿ ಪ್ರಮುಖರಾದ ವಾಜಪೇಯಿ ಅವರು ಒಂದೇ ಒಂದು ಮತದಿಂದ ಸರ್ಕಾರ ಉರುಳಿದರೂ ತಮ್ಮ ಸಿದ್ಧಾಂತ ಬಿಟ್ಟುಕೊಡಲಿಲ್ಲ ಎಂದು ಸ್ಮರಿಸಿದರು.

ರಾಜ್ಯ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷೆ ಪುಷ್ಪಾ ಅಯ್ಯಂಗಾರ್, ವಾಜಪೇಯಿಯವರು ಎಲ್ಲರನ್ನು ಸಮಾನರಾಗಿ ಕಾಣುತ್ತಿದ್ದರು. ಹಾಗೆಯೇ ಇಂದಿನ ರಾಜಕೀಯ ಕ್ಷೇತ್ರದಲ್ಲೂ ಮಹಿಳೆಯರನ್ನು ಸಮಾನವಾಗಿ ಕಂಡು ಅವರಿಗೆ ಸೂಕ್ತ ಸ್ಥಾನ ನೀಡಬೇಕು ಎಂದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕಾಂಗ್ರೆಸ್ ಯುವ ಮುಖಂಡ ಎನ್.ಎಂ.ನವೀನ್‌ಕುಮಾರ್, ಸಮಾಜ ಸೇವಕ ಕೆ.ರಘುರಾಂ, ಹಿರಿಯ ವಿಪ್ರ ಮುಖಂಡ ಶೇಷಾದ್ರಿ ಮತ್ತಿತರರು ವಾಜಪೇಯಿ ಅವರ ಗುಣಗಾನ ಮಾಡಿದರು. ಕಾರ್ಯಕ್ರಮದಲ್ಲಿ ನಗರಪಾಲಿಕೆ ಸದಸ್ಯ ಎಂ.ಸಿ. ರಮೇಶ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕನ್ನಡ ಚಳವಳಿಗಾರ ಮೂಗೂರು ನಂಜುಂಡಸ್ವಾಮಿ, ಗಣಪತಿ ಆಶ್ರಮದ ಕಾರ್ತಿಕ್, ಸತ್ಯನಾರಾಯಣ, ಎಂ.ಎಸ್.ಅನಂತಪ್ರಸಾದ್ ಮತ್ತಿತರರು ಭಾಗವಹಿಸಿದ್ದರು.

ಮೈಸೂರು ಮಿತ್ರ

ಅಯ್ಯಪ್ಪಸ್ವಾಮಿ ಮೆರವಣಿಗೆ



ಮಡಿಕೇರಿ, ಡಿ.25– ಪಾಣತ್ತೂರು ಶ್ರೀಅಯ್ಯಪ್ಪಸ್ವಾಮಿ ಮಹೋತ್ಸವದ ಅಂಗವಾಗಿ ಕರಿಕೆ ಶ್ರೀಅಯ್ಯಪ್ಪ ಭಜನಾ ಮಂದಿರದ ವತಿಯಿಂದ ಮೆರವಣಿಗೆ ನಡೆಯಿತು. ಸ್ವಾಮಿ ಅಯ್ಯಪ್ಪನ ಭಜನೆ ಮತ್ತು ಚಂಡೆ ವಾದ್ಯದೊಂದಿಗೆ ಸಾಗಿದ ಮೆರವಣಿಗೆ ಶ್ರದ್ಧಾ ಭಕ್ತಿಯಿಂದ ಕೊನೆಗೊಂಡಿತು. ಹೆಚ್ಚಿನ ಸಂಖ್ಯೆಯಲ್ಲಿದ್ದ ಭಕ್ತರು ಮಹಾಮಂಗಳಾರತಿ, ಪ್ರಸಾದ ಸ್ವೀಕರಿಸಿದರು. ಮೆರವಣಿಗೆಯಲ್ಲಿದ್ದವರಿಗೆ ಕರಿಕೆ ತೋಟಂ ಮುಸ್ಲಿಂ ಜಮಾಯತ್ ವತಿಯಿಂದ ಸಿಹಿ ಮತ್ತು ನೀರನ್ನು ವಿತರಿಸಲಾಯಿತು.

ಇಂದಿನಿಂದ ಕಾಡಾನೆ ಸೆರೆ ಕಾರ್ಯಾಚರಣೆ

ಮಡಿಕೇರಿ, ಡಿ.25– ವಿರಾಜಪೇಟೆ ಅರಣ್ಯ ವಲಯದ ಅಮ್ಮತ್ತಿ ಶಾಖೆ ವ್ಯಾಪ್ತಿಯ ಸಿದ್ದಾಪುರ, ಕರಡಿಗೋಡು, ಇಂಜಲಗೆರೆ, ಆನಂದಪುರ, ಗುಹ್ಯ, ಮಾಲ್ದಾರೆ, ಬಿಬಿಟಿಸಿ ಕಾಫಿ ತೋಟ, ಆರೆಂಜ್ ಕೌಂಟಿ ಕಾಫಿ ತೋಟ, ಆಲೀತೋಪು ತೋಟ ಹಾಗೂ ಸುತ್ತಮುತ್ತ ಸಾರ್ವಜನಿಕರಿಗೆ ಉಪಟಳ ನೀಡುತ್ತಿರುವ ಕಾಡಾನೆಗಳನ್ನು ಸೆರೆ ಹಿಡಿಯುವ ಕಾರ್ಯಾಚರಣೆಯನ್ನು ಡಿ.26ರಿಂದ ಕೈಗೊಳ್ಳಲಾಗಿದೆ.

ಈ ಹಿನ್ನೆಲೆಯಲ್ಲಿ ಕಾಫಿ ತೋಟದಲ್ಲಿ ಕೆಲಸ ನಿರ್ವಹಿಸುವ ಕೂಲಿ ಕಾರ್ಮಿಕರು, ಸಾರ್ವಜನಿಕರು, ಸಿದ್ದಾಪುರ ಪಂಚಾಯಿತಿ ಮತ್ತು ಅಮ್ಮತ್ತಿ ಪಂಚಾಯ್ತಿ ವ್ಯಾಪ್ತಿಯ ಜನರು ಮತ್ತು ಶಾಲಾ ಮಕ್ಕಳು ಎಚ್ಚರಿಕೆಯಿಂದ ಇರಬೇಕು. ಸುತ್ತಮುತ್ತಲಿನ ಗ್ರಾಮಗಳಲ್ಲಿ ಒಂಟಿ ಆನೆ ಕಂಡು ಬಂದರೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡುವಂತೆ ವಿರಾಜಪೇಟೆ ಅರಣ್ಯ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕೊಚ್ಚೆರ ನೆಹರೂ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುಂಟಿಕೊಪ್ಪದಲ್ಲಿ ವಾಜಪೇಯಿ ಜನ್ಮದಿನಾಚರಣೆ




ಸುಂಟಿಕೊಪ್ಪ, ಡಿ.25– ಸುಂಟಿಕೊಪ್ಪ ಬಿಜೆಪಿ ಶಕ್ತಿ ಕೇಂದ್ರ ವತಿಯಿಂದ ಮಾಜಿ ಪ್ರಧಾನಿ ದಿವಂಗತ ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನ ಆಚರಿಸಲಾಯಿತು. ಸುಂಟಿಕೊಪ್ಪದ ಖಾಸಗಿ ಹೋಟೇಲ್ ಸಭಾಂಗಣದಲ್ಲಿ ಬಿಜೆಪಿ ಶಕ್ತಿ ಕೇಂದ್ರದ ಅಧ್ಯಕ್ಷ ವಾಸುದೇವ್ ಹಾಗೂ ಪ್ರಶಾಂತ್ ಕೋಕ ಅವರ ಅಧ್ಯಕ್ಷತೆಯಲ್ಲಿ ಅಟಲ್ ಬಿಹಾರಿ ವಾಜಪೇಯಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ನಮನ ಸಲ್ಲಿಸಲಾಯಿತು.

ತಾಲೂಕು ಓಬಿಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಪಿ.ಆರ್.ಸುನೀಲ್ ಕುಮಾರ್ ಮಾತನಾಡಿ, ಅಟಲ್ ಬಿಹಾರಿ ವಾಜಪೇಯಿ ಅವರು ದೇಶ ಕಂಡ ಧೀಮಂತ ನಾಯಕರಾಗಿದ್ದರು. ಅಜಾತ ಶತ್ರುವಾಗಿ ಎಲ್ಲರೊಂದಿಗೂ ಸ್ನೇಹಮಯವಾಗಿ ಉತ್ತಮ ಆಡಳಿತ ನಡೆಸಿದ ನಾಯಕರಾಗಿದ್ದಾರೆ ಎಂದು ಬಣ್ಣಿಸಿದರು. ಈ ಸಂದರ್ಭ ಪಕ್ಷದ ಹಿರಿಯರಾದ ಸಹದೇವನ್, ಜಿಲ್ಲಾ ಓಬಿಸಿ ಮೋರ್ಚಾ ಉಪಾಧ್ಯಕ್ಷ ಬಿ.ಕೆ. ಮೋಹನ್, ಗ್ರಾಮ ಪಂಚಾಯಿತಿ ಸದಸ್ಯ ಸುರೇಶ್, ಬೂತ್ ಸಮಿತಿಯ ಸದಸ್ಯ ರಾಕೇಶ್ ಗಣೇಶ್, ಸುದೇಶ್, ರವಿ ಹಾಗೂ ಪಕ್ಷದ ಕಾರ್ಯಕರ್ತರು ಹಾಜರಿದ್ದರು.

ಕೊಡಗಲ್ಲಿ ಸಂಭ್ರಮದ ಕ್ರಿಸ್‌ಮಸ್ ಆಚರಣೆ







ಕುಶಾಲನಗರ, ಡಿ.25– ಪಟ್ಟಣದಲ್ಲಿ ಭಾನುವಾರ ಕ್ರೈಸ್ತ ಧರ್ಮದವರು ಕ್ರಿಸ್‌ಮಸ್ ಹಬ್ಬವನ್ನು ಸಡಗರ, ಸಂಭ್ರಮದಿಂದ ಆಚರಿಸಿದರು.

ಪಟ್ಟಣ ಹಾಗೂ ಸುತ್ತಲಿನ ಕೂಡಿಗೆ, ಸಿದ್ದಲಿಂಗಪುರ ಹಾಗೂ ಏಳನೇ ಹೊಸ ಕೋಟೆ ಗ್ರಾಮಗಳಲ್ಲಿ ಕ್ರಿಸ್‌ಮಸ್ ಹಬ್ಬವನ್ನು ಆಚರಿಸಿ ಸಂಭ್ರಮಿಸಿದರು. ಕುಶಾಲನಗರ ಪಟ್ಟಣದಲ್ಲಿ ಕ್ರಿಸ್‌ಮಸ್ ಹಬ್ಬದ ಅಂಗವಾಗಿ ಕ್ರೈಸ್ತ ಬಾಂಧವರು ಹೊಸ ಉಡುಗೆ ಧರಿಸಿ, ಸಂತ ಸಬಾಸ್ಟೀನರ ದೇವಾಲಯ ಮತ್ತು ಮೆಡ್‌ಲಾಕ್ ಚರ್ಚ್‌ಗೆ ತೆರಳಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಚರ್ಚ್‌ಅನ್ನು ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಧರ್ಮಗುರು ಮಾರ್ಟಿನ್ ನೇತೃತ್ವದಲ್ಲಿ ವಿಶೇಷ ಪ್ರಾರ್ಥನೆ ನೆರವೇರಿಸಲಾಯಿತು. ಕೂಡಿಗೆ ಚರ್ಚ್‌ನಲ್ಲಿ ಧರ್ಮಗುರು ಸ್ಟೀಫನ್ ನೇತೃತ್ವದಲ್ಲಿ ಆಚರಣೆಗಳು ಜರುಗಿದವು. ಮುಖಂಡರಾದ ಕೆ.ಎ.ಪೀಟರ್, ಕೆ.ವಿ.ಸನ್ನಿ ಮೊದಲಾದವರು ಬಾಲ ಏಸು ಜನನದ ಕುರಿತ ಹಾಡುಗಳನ್ನು ಸಂಗೀತದೊಂದಿಗೆ ಹಾಡಿದ ರೀತಿ ಭಕ್ತರಲ್ಲಿ ಭಕ್ತಿ ಭಾವನೆ ಉದ್ದೀಪನಗೊಳಿಸಿತ್ತು. ಚರ್ಚ್, ಮನೆಗಳಲ್ಲಿ ಗೋದಲಿ ನಿರ್ಮಿಸಿ ಮಧ್ಯರಾತ್ರಿ ಪ್ರಭುವನ್ನು ಬರಮಾಡಿಕೊಂಡರು. ದನದ ಕೊಟ್ಟಿಗೆಯಲ್ಲಿ ಜನಿಸಿದ ಸಂಕೇತವಾಗಿ ಕ್ರೈಸ್ತರು ತಮ್ಮ ಮನೆಗಳಲ್ಲಿ ಕೊಟ್ಟಿಗೆಯನ್ನು ನಿರ್ಮಿಸಿ ಅದರಲ್ಲಿ ಬಾಲ ಏಸುವಿನ ಮೂರ್ತಿ ಮಲಗಿಸಿ ಪ್ರಾರ್ಥಿಸಿದರು. ಬಳಿಕ ಪರಸ್ಪರ ಕೇಕ್ ಹಂಚಿ ಸಂಭ್ರಮಿಸಿದರು. ಹಬ್ಬದ ಪ್ರಯುಕ್ತ ಮನೆಯನ್ನು ವಿದ್ಯುತ್ ದೀಪಾಲಂಕಾರ ಮಾಡಿ, ನಕ್ಷತ್ರ ದೀಪ ತೂಗು ಹಾಕಿ, ಪಟಾಕಿ ಸಿಡಿಸಲಾಯಿತು.

ಸಾಂತಾಕ್ಲಾಸ್ ವೇಷ ಧರಿಸಿದ್ದ ಪುಟಾಣಿ ಮಕ್ಕಳು ಮನೆ ಮನೆಗೆ ತೆರಳಿ ಪರಸ್ಪರ ಶುಭಾಶಯ ಹಂಚಿಕೊಂಡರು. ಕುಶಾಲನಗರ ಚರ್ಚ್‌ನ ಆಡಳಿತ ಮಂಡಳಿ ಕಾರ್ಯದರ್ಶಿ ಸವರಿನ್ ಡಿಸೋಜಾ, ಸದಸ್ಯರಾದ ಶಾಜಿ ಕೆ.ಜಾರ್ಜ್, ಕ್ರೆಜ್ವಲ್ ಕೊಟ್ಸ್, ರಾಯ್, ಏಸುದಾಸ್, ಜಾನ್, ಫಿಲಿಪ್ ವಾಸ್, ಅಂಥೋಣಿ ಪ್ರಭು ರಾಜ್ ಮತ್ತಿತರರು ಹಾಜರಿದ್ದರು.

ವಿರಾಜಪೇಟೆ ವರದಿ: ವಿರಾಜಪೇಟೆ ಸಂತ ಅನ್ನಮ್ಮ ದೇವಾಲಯದಲ್ಲಿ ಕ್ರೈಸ್ತ ಬಾಂಧವರು ಸಂಭ್ರಮ ಹಾಗೂ ಶ್ರದ್ಧಾ ಭಕ್ತಿಯಿಂದ ಕ್ರಿಸ್‌ಮಸ್ ಹಬ್ಬವನ್ನು ಆಚರಿಸಿದರು. ಶನಿವಾರ ರಾತ್ರಿ ಸಂತ ಅನ್ನಮ್ಮ ದೇವಾಲಯದಲ್ಲಿ ಆಡಂಬರ ಗಾಯನ, ವಿಶೇಷ ಪೂಜೆ ಹಾಗೂ ಪ್ರವಚನಗಳು ಬಲಿ ಪೂಜೆ ನಡೆದು, ಮಧ್ಯರಾತ್ರಿ ಏಸುವಿನ ಜನನ ಸಂದರ್ಭ ಗೋದಲಿಯನ್ನು ಸಿದ್ಧಪಡಿಸಲಾಗಿತ್ತು. ವಿದ್ಯುತ್ ದೀಪಗಳಿಂದ ಚರ್ಚ್ ಅಲಂಕೃತಗೊಂಡಿತ್ತು. ದೇವಾಲಯದ ಆವರಣದಲ್ಲಿ ಬೃಹತ್ ಕ್ರಿಸ್‌ಮಸ್ ನಕ್ಷತ್ರವನ್ನು ಅಳವಡಿಸಲಾಗಿತ್ತು. ಭಾನುವಾರ ಬೆಳಗ್ಗೆಯು ಕ್ರಿಸ್‌ಮಸ್ ಆಡಂಬರ ಗಾಯನ ನಡೆಯಿತು. ದೇವಾಲಯದ ಧರ್ಮಗುರುಗಳಾದ ಡಾ. ದಯಾನಂದ ಪ್ರಭು, ಸಹಾಯಕ ಗುರು ಐಸಕ್ ರತ್ನಾಕರ, ಏಸುಪ್ರಸಾದ್ ಹಾಗೂ ವಿರಾಜಪೇಟೆ ವ್ಯಾಪ್ತಿಯ ಕ್ರೈಸ್ತ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ನೆರೆದಿದ್ದರು.

ಕ್ರೀಡೆಯಿಂದ ಸೌಹಾರ್ದ ಸಮಾಜ ನಿರ್ಮಾಣ ಸಾಧ್ಯ: ಎ.ಎಸ್. ಪೊನ್ನಣ್ಣ



ಸಿದ್ದಾಪುರ, ಡಿ.25– ಕ್ರೀಡಾ ಜಿಲ್ಲೆ ಎಂದು ಹೆಸರುವಾಸಿಯಾಗಿದ್ದರೂ ಕ್ರೀಡಾಪಟುಗಳಿಗೆ ಅಗತ್ಯ ಪ್ರೋತ್ಸಾಹ ಸಿಗದಂತಾಗಿದೆ. ಮೈದಾನದ ಕೊರತೆ ನಡುವೆ ಕ್ರೀಡಾಪಟುಗಳು ಸಂಕಷ್ಟದ ಸಾಧನೆ ಮಾಡಬೇಕಾಗಿದೆ ಎಂದು ಕೆಪಿಸಿಸಿ ಕಾನೂನು ಘಟಕದ ಅಧ್ಯಕ್ಷ ಎ.ಎಸ್ ಪೊನ್ನಣ್ಣ ಬೇಸರ ವ್ಯಕ್ತಪಡಿಸಿದರು.

ವಿರಾಜಪೇಟೆ ತಾಲೂಕಿನ ಮಾಲ್ದಾರೆ ಸಮೀಪದ ಹುಂಡಿ ಗ್ರಾಮದಲ್ಲಿ ಫ್ರೀಡಂ ಬಾಯ್ ಸಂಘಟನೆ ಆಯೋಜಿಸಿದ್ದ 3ನೇ ವರ್ಷದ ಹೊನಲು ಬೆಳಕಿನ ಲೀಗ್ ಮಾದರಿಯ ವಾಲಿಬಾಲ್ ಪಂದ್ಯಾವಳಿಯ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಬಹುತೇಕ ಗ್ರಾಮೀಣ ಭಾಗದಲ್ಲಿ ಕ್ರೀಡಾಪಟುಗಳಿಗೆ ಮೈದಾನದ ಕೊರತೆ ಇದ್ದು ಕ್ರೀಡೆಯೊಂದಿಗೆ ಸಾಧನೆ ಮಾಡಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಎಲ್ಲಾ ಕ್ರೀಡಾಪಟುಗಳಿಗೂ ಮೈದಾನದೊಂದಿಗೆ ಪ್ರೋತ್ಸಾಹ ಸಿಗುವಂತಾಗಬೇಕೆಂದು ಹೇಳಿದ ಅವರು, ಆರೋಗ್ಯವಂತ ಸಮಾಜ ನಿರ್ಮಾಣ ಮಾಡಲು ಕ್ರೀಡೆ ಅತ್ಯವಶ್ಯಕವಾಗಿದ್ದು ಇದರೊಂದಿಗೆ ಸೌಹಾರ್ದ ಸಮಾಜ ನಿರ್ಮಾಣ ಮಾಡಲು ಸಾಧ್ಯವಾಗಲಿದೆ. ಕ್ರೀಡಾಪಟುಗಳು ಸಾಧಿಸುವ ಜಲದೊಂದಿಗೆ ಸಾಧನೆಯ ಮೂಲಕ ಸಮಾಜದ ಮುಖ್ಯ ವಾಹಿನಿಗೆ ಬರುವುದರೊಂದಿಗೆ ಉತ್ತಮ ಭವಿಷ್ಯ ರೂಪಿಕೊಳ್ಳಬೇಕೆಂದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಧರ್ಮದ ಉತ್ತಪ್ಪ, ಮಾಲ್ದಾರೆ ವಲಯ ಕಾಂಗ್ರೆಸ್ ಅಧ್ಯಕ್ಷ ಸಜಿ ತೋಮಸ್, ಮಾಲ್ದಾರೆ ಗ್ರಾಮ ಪಂಚಾಯಿತಿ ಸದಸ್ಯ ನಿಯಾಜ್, ಫ್ರೀಡಂ ಬಾಯ್ಸ್ ಸಂಘದ ಅಧ್ಯಕ್ಷ ರಿಯಾಜ್, ಪ್ರಮುಖರಾದ ರೆಹಮಾನ್, ಮುನ್ನ, ಬಶೀರ್, ಮಣಿ, ಸಮೀರ್, ರಾಜನ್, ಮುಸ್ತಫ್, ಹಮೀದ್, ಹಂಸ, ನಿಶಾದ್ ಮತ್ತಿತರು ಹಾಜರಿದ್ದರು.

ದೇಹದಾರ್ಢ್ಯ ಸ್ಪರ್ಧೆಯಲ್ಲಿ ಗಣೇಶ್‌ಗೆ ರಾಜ್ಯಕ್ಕೆ ನಾಲ್ಕನೇ ಸ್ಥಾನ



ಮಡಿಕೇರಿ, ಡಿ.25– ಕರ್ನಾಟಕ ಸಿರಿ–2022 ರಾಜ್ಯ ಮಟ್ಟದ ದೇಹ ದಾರ್ಢ್ಯ ಸ್ಪರ್ಧೆಯಲ್ಲಿ ಕೊಡಗಿನ ಕೆ.ಗಣೇಶ್ 4ನೇ ಸ್ಥಾನ ಪಡೆಯುವ ಮೂಲಕ ಸಾಧನೆ ಮಾಡಿದ್ದಾರೆ. ಮಾಯಾಸ್ ಫ್ರೆಂಡ್ಸ್ ಗ್ರೂಪ್ ಮತ್ತು ಗ್ಲೋಬಲ್ ಸ್ಪೋರ್ಟ್ಸ್ ನ್ಯೂಟ್ರಿಷನ್ಸ್ ಸಹಯೋಗದಲ್ಲಿ ದಾವಣಗೆರೆ ಜಿಲ್ಲಾ ಬಾಡಿ ಬಿಲ್ಡಿಂಗ್ ಅಸೋಸಿಯೇಷನ್ ವತಿಯಿಂದ ನಡೆಸಲಾದ ಸ್ಪರ್ಧೆಯಲ್ಲಿ ಕೆ.ಗಣೇಶ್ ಭಾಗವಹಿಸಿದ್ದರು.

ನಾಲ್ಕುನಾಡು ಪ್ರೀಮಿಯರ್ ಲೀಗ್ ಕ್ರಿಕೆಟ್‌ಗೆ ಚಾಲನೆ



ಸಿದ್ದಾಪುರ, ಡಿ.25– ನಾಪೋಕ್ಲು ಡೆಕ್ಕನ್ ಯೂತ್ ಕ್ಲಬ್ ವತಿಯಿಂದ ಚೆರಿಯಪರಂಬು ಜನರಲ್ ಕೆ ಎಸ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ 7ನೇ ವರ್ಷದ ನಾಲ್ಕು ನಾಡು ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಗೆ ಗಣ್ಯರು ಚಾಲನೆ ನೀಡಿ ಶುಭ ಹಾರೈಸಿದರು.

ಎರಡು ದಿನಗಳ ಕಾಲ ನಡೆಯುವ ಕ್ರಿಕೆಟ್ ಪಂದ್ಯಾವಳಿಯಲ್ಲಿ 10ಕ್ಕೂ ಹೆಚ್ಚು ತಂಡಗಳು ಭಾಗವಹಿಸಲಿವೆ.

ಈ ಸಂದರ್ಭ ಮಾಜಿ ವಖ್ಫ್ ಬೋರ್ಡ್ ಅಧ್ಯಕ್ಷ ಎಂ. ಎಚ್. ಅಬ್ದುಲ್ ರೆಹಮಾನ್, ಕೆಡಿಪಿ ಸದಸ್ಯ ಶಿವಚಾಳಿಯಂಡ ಅಂಬಿ ಕಾರ್ಯಪ್ಪ, ಜೆಡಿಎಸ್ ಮುಖಂಡ ಮನ್ಸೂರ್ ಆಲಿ, ಆರ್ ಟಿ ಐ ಕಾರ್ಯಕರ್ತ ಕೆ. ಎ. ಹಾರಿಸ್, ಡೆಕ್ಕನ್ ಯೂತ್ ಕ್ಲಬ್ ಅಧ್ಯಕ್ಷ ಮನ್ಸೂರ್, ಪದಾಧಿಕಾರಿಗಳಾದ ಉಬೈದ್, ಸಂಶುದ್ದೀನ್, ಮಸೂದ್, ಶಾನಿದ್, ಅಬ್ದುಲ್ ಖಾದರ್, ನೌಫಲ್, ನೌಶಾದ್, ಜಾಫರ್ ಸೇರಿದಂತೆ ಮತ್ತಿತರರು ಹಾಜರಿದ್ದರು.

ಅಪರಿಚಿತ ವಾಹನ ಡಿಕ್ಕಿ: ಬೈಕ್ ಸವಾರ ಸಾವು



ಕೊಳ್ಳೇಗಾಲ, ಡಿ.25– ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸಾವನ್ನಪ್ಪಿದ ಘಟನೆ ಶನಿವಾರ ರಾತ್ರಿ ಪಟ್ಟಣದಲ್ಲಿ ನಡೆದಿದೆ. ಹೊಂಡರಬಾಳು ಗ್ರಾಮದ ಶಿವಸ್ವಾಮಿ ಎಂಬುವರ ಪುತ್ರ ರಾಜೇಶ್(35) ತಮ್ಮ ಸಹೋದರನ್ನು ಕರೆದುಕೊಂಡು ಹೋಗಲು ಟಿವಿಎಸ್ ಬೈಕ್‌ನಲ್ಲಿ (ಕೆಎಂ10, ಯು, 5121) ಪಟ್ಟಣದ ಇಂದಿರಾಗಾಂಧಿ ಕ್ಯಾಂಟೀನ್ ರಸ್ತೆಯಲ್ಲಿ ಬರುತ್ತಿದ್ದ ವೇಳೆ ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ರಾಜೇಶ ಮೃತಪಟ್ಟಿದ್ದಾರೆ. ಈ ಸಂಬಂಧ ಕೊಳ್ಳೇಗಾಲ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಿಲ್ಲಾದ್ಯಂತ ಸಂಭ್ರಮದ ಕ್ರಿಸ್‌ಮಸ್ ಆಚರಣೆ



ಚಾಮರಾಜನಗರ, ಡಿ.25– ಪ್ರೀತಿ, ಮಮತೆ, ಶಾಂತಿ ಸಂದೇಶ ಸಾರಿದ ಯೇಸು ಕ್ರಿಸ್ತನ ಜನ್ಮದಿನದ ಪ್ರತೀಕವಾದ ಕ್ರಿಸ್‌ಮಸ್ ಹಬ್ಬವನ್ನು ಜಿಲ್ಲೆಯ ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು, ಕೊಳ್ಳೇಗಾಲ ಹಾಗೂ ಹನೂರು ಸೇರಿದಂತೆ ಎಲ್ಲೆಡೆ ಸಡಗರ– ಸಂಭ್ರಮದಿಂದ ಆಚರಿಸಲಾಯಿತು.

ಕಳೆದೆರಡು ವರ್ಷಗಳಿಂದ ಕೊರೊನಾ ಹಿನ್ನೆಲೆಯಲ್ಲಿ ಸರಳ ಆಚರಣೆಗಷ್ಟೇ ಸೀಮಿತವಾಗಿದ್ದ ಹಬ್ಬವನ್ನು ಈ ಬಾರಿ ಕ್ರೈಸ್ತ ಬಾಂಧವರು ಅದ್ದೂರಿಯಾಗಿ ಆಚರಿಸಿದರು.

ಚರ್ಚ್‌ಗಳಲ್ಲಿ ಸಾಮೂಹಿಕ ಪ್ರಾರ್ಥನೆ ನಡೆಸಲಾಯಿತು. ಹಬ್ಬದ ಪ್ರಯುಕ್ತ ಜಿಲ್ಲೆಯ ಎಲ್ಲಾ ಚರ್ಚ್‌ಗಳನ್ನು ಬಗೆ–ಬಗೆಯ ವಿದ್ಯುತ್ ದೀಪಗಳಿಂದ ಅಲಂಕೃತಗೊಳಿಸಲಾಗಿತ್ತು. ಶನಿವಾರ ರಾತ್ರಿಯಿಂದಲೇ ಚರ್ಚ್‌ಗಳಲ್ಲಿ ವಿಶೇಷ ಪೂಜೆ, ಪ್ರಾರ್ಥನೆ ನೆರವೇರಿಸಲಾಯಿತು. ಕ್ರೈಸ್ತ ಬಾಂಧವರು ಹೊಸಬಟ್ಟೆ ತೊಟ್ಟು, ಕೇಕ್ ಕತ್ತರಿಸಿ, ಪರಸ್ಪರ ಸಿಹಿ ಹಂಚಿ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು. ಅಲ್ಲದೇ ಕ್ರೈಸ್ತ ಬಾಂಧವರ ಮನೆಗಳನ್ನು ಬಣ್ಣ–ಬಣ್ಣದ ವಿದ್ಯುತ್ ದೀಪ, ಕ್ರಿಸ್‌ಮಸ್ ಟ್ರೀ, ಆಕಾಶ ದೀಪಗಳಿಂದ ಅಲಂಕರಿಸುವ ಜೊತೆಗೆ ಗೋದಲಿ ನಿರ್ಮಿಸಿಕೊಂಡು ಸಂಭ್ರಮಿಸಿದರು.

ವಿವಿಧೆಡೆ ಕ್ರಿಸ್‌ಮಸ್ ಆಚರಣೆ: ಚಾಮರಾಜನಗರ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಕ್ರೈಸ್ತ ಬಾಂಧವರು ಸಂಭ್ರಮದಿಂದ ಕ್ರಿಸ್‌ಮಸ್ ಆಚರಿಸಿದರು. ಚಾಮರಾಜನಗರದ ಸಂತಪೌಲರ ದೇವಾಲಯ, ತಾಲೂಕಿನ ಮಸಗಾಪುರ, ಮಾದಾಪುರ, ನಾಗವಳ್ಳಿ ಸೇರಿದಂತೆ ಇತರೆ ಗ್ರಾಮಗಳಲ್ಲಿರುವ ಚರ್ಚ್‌ಗಳಿಗೆ ಕ್ರೈಸ್ತರು ತೆರಳಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಹಬ್ಬದ ಅಂಗವಾಗಿ ಮನೆಗಳಲ್ಲಿ ಹಬ್ಬದೂಟ ತಂiಯಾರಿಸಿ ಸಂಭ್ರಮಿಸಿದರು. ಇತರೆ ಧರ್ಮದವರು ಸಹ ಕ್ರೈಸ್ತ ಬಾಂಧವರ ಮನೆಗಳಿಗೆ ತೆರಳಿ ಹಬ್ಬದ ಶುಭಾಶಯ ಕೋರಿದರು.

ಗುಂಡ್ಲುಪೇಟೆ ವರದಿ: ಪಟ್ಟಣದ ಹಾಗೂ ತಾಲೂಕಿನಾದ್ಯಂತ ಕ್ರಿಸ್‌ಮಸ್ ಹಬ್ಬವನ್ನು ಕ್ರಿಶ್ಚಿಯನ್ ಬಂಧುಗಳು ಸಡಗರ ಮತ್ತು ಸಂಭ್ರಮದಿಂದ ಆಚರಿಸಿದರು. ಪಟ್ಟಣದ ಸೆಂಟ್‌ಪೀಟರ್ ಲೂಥರನ್ ಚರ್ಚ್ ಸೇರಿದಂತೆ ವಿವಿಧ ಬಡಾವಣೆಗಳಲ್ಲಿರುವ ಚರ್ಚ್‌ಗಳಲ್ಲಿ ಯೇಸುಕ್ರಿಸ್ತನ ಪಾರ್ಥನೆಯನ್ನು ಕ್ರಿಶ್ಚಿಯನ್ ಬಂಧುಗಳು ಸಡಗರ ಮತ್ತು ಸಂಭ್ರಮದಿಂದ ನೆರವೇರಿಸಿದರು.

ಕಾಡಾನೆ ದಾಳಿ: ಅಂಧ ವ್ಯಕ್ತಿಗೆ ಗಾಯ

ಬಯಲೂರು ಅರಣ್ಯದಂಚಿನ ಜಮೀನಿನಲ್ಲಿ ಘಟನೆ



ಹನೂರು, ಡಿ.25– ಕಾಡಾನೆ ದಾಳಿಯಿಂದ ಅಂಧ ವ್ಯಕ್ತಿಯೋರ್ವ ತೀವ್ರವಾಗಿ ಗಾಯಗೊಂಡ ಘಟನೆ ತಾಲೂಕಿನ ಹುತ್ತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕತ್ತೇಕಾಲು ಪೋಡು ಬಳಿ ಭಾನುವಾರ ಮಧ್ಯಾಹ್ನ ನಡೆದಿದೆ.

ಪೋಡಿನ ನಿವಾಸಿ ಮಾದೇಶ್(45) ಗಾಯಗೊಂಡವರಾಗಿದ್ದು, ಬಯಲೂರು ಅರಣ್ಯಕ್ಕೆ ಹೊಂದಿಕೊಂಡಂತಿರುವ ಜಮೀನಿನಲ್ಲಿ ಈತನ ಮೇಲೆ ಭಾನುವಾರ ಮಧ್ಯಾಹ್ನ ಕಾಡಾನೆ ದಾಳಿ ನಡೆಸಿದೆ. ಕಾಡಾನೆ ದಾಳಿಯಿಂದ ಕೈ–ಕಾಲು ಮುರಿತಕ್ಕೊಳಗಾಗಿ ಜಮೀನಿನಲ್ಲೇ ಬಿದ್ದಿದ್ದ ಈತನನ್ನು ದನಗಾಹಿ ಯುವಕರು ನೋಡಿ ಕುಟುಂಬದವರಿಗೆ ಮಾಹಿತಿ ನೀಡಿದ್ದಾರೆ. ಕುಟುಂಬಸ್ಥರು ಗ್ರಾಮ ಪಂಚಾಯಿತಿ ಸದಸ್ಯ ನಿಂಗಯ್ಯ ಹಾಗೂ ಅರಣ್ಯ ಸಮಿತಿ ಅಧ್ಯಕ್ಷ ಕೃಷ್ಣಮೂರ್ತಿ ಸಹಕಾರದಿಂದ ಅರಣ್ಯ ಇಲಾಖೆಯ ವಾಹನದ ಮೂಲಕ ಪಿಜಿ ಪಾಳ್ಯ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿದ ನಂತರ, ಚಾಮರಾಜನಗರ ಜಿಲ್ಲಾಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ದಾಖಲಿಸಿದ್ದಾರೆ.

ಸಾರ್ವಜನಿಕರಿಂದ ಆಕ್ರೋಶ: ಪಿಜಿ ಪಾಳ್ಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆಂಬುಲೆನ್ಸ್ ಇದ್ದರೂ ಖಾಯಂ ಚಾಲಕನ್ನು ನೇಮಕ ಮಾಡದೆ ಇರುವ ಪರಿಣಾಮ ಪದೇ ಪದೆ ರೋಗಿಗಳು ತೊಂದರೆ ಅನುಭವಿಸಬೇಕಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಆಂಬುಲೆನ್ಸ್‌ಗೆ ಶೀಘ್ರದಲ್ಲೇ ಖಾಯಂ ಚಾಲಕನನ್ನು ನೇಮಕ ಮಾಡದಿದ್ದರೆ ಉಗ್ರ ಪ್ರತಿಭಟನೆ ನಡೆಸುವುದಾಗಿ ಅರಣ್ಯ ಸಮಿತಿ ಅಧ್ಯಕ್ಷ ಎನ್. ಕೃಷ್ಣಮೂರ್ತಿ ಎಚ್ಚರಿಕೆ ನೀಡಿದ್ದಾರೆ. ಸಮಯಕ್ಕೆ ಸರಿಯಾಗಿ ಆಂಬುಲೆನ್ಸ್ ಬಾರದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯ ಸಿಬ್ಬಂದಿಗಳಾದ ಗಿರೀಶ್ ಮತ್ತು ನವೀನ್ ಅರಣ್ಯ ಇಲಾಖೆ ವಾಹನವನ್ನು ನೀಡಿ ಮಾನವೀಯತೆ ಮೆರೆದಿದ್ದಾರೆ.

ಕೋವಿಡ್: ರಾಜ್ಯ ಸರ್ಕಾರ ಮುಂಜಾಗ್ರತೆಗೆ ವಾಟಾಳ್ ಆಗ್ರಹ



ಚಾಮರಾಜನಗರ, ಡಿ.25– ಚೀನಾದಲ್ಲಿ ಮತ್ತೆ ಕೊರೊನಾ ಹೆಚ್ಚಳವಾಗಿರುವುದರಿಂದ ಕರ್ನಾಟಕ ಸರ್ಕಾರ ಮುನ್ನೆಚ್ಚರಿಕೆ ವಹಿಸಬೇಕು ಎಂದು ಕನ್ನಡ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಆಗ್ರಹಿಸಿದರು.

ನಗರದ ದೊಡ್ಡರಾಯಪೇಟೆ ಕ್ರಾಸ್ ಬಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೊರೊನಾದಿಂದ ಚೀನಾದಲ್ಲಿ ಲಕ್ಷಾಂತರ ಜನ ಸಾವನ್ನಪ್ಪಿದ್ದಾರೆ. ಬೇರೆ ಬೇರೆ ದೇಶಗಳಲ್ಲೂ ಕೊರೊನಾ ಹರಡುತ್ತಿದೆ. ಇದರಿಂದ ಕರ್ನಾಟಕ ರಾಜ್ಯದಲ್ಲಿ ಬಹಳ ಎಚ್ಚರಿಕೆ ವಹಿಸುವುದು ಅಗತ್ಯವಾಗಿದೆ ಎಂದರು.

ರಾಜ್ಯದ ಆಸ್ಪತ್ರೆಗಳು ಸುಸಜ್ಜಿತವಾಗಬೇಕು. ಸರ್ಕಾರಿ, ಖಾಸಗಿ ಆಸ್ಪತ್ರೆಗಳು ಬಹಳ ಅತ್ಯಂತ ಸಜ್ಜಾಗಬೇಕಿದೆ. ಇಡೀ ಕರ್ನಾಟಕ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಜನರ ಸೇವೆಗೆ ಸಿದ್ಧರಾಗಬೇಕಿದೆ. ಸರ್ಕಾರ ಕೊನೆ ಗಳಿಗೆಯಲ್ಲಿ ಬಾವಿ ತೋಡುವುದು ಬೇಡ. ಆಮ್ಲಜನಕ ವೆಂಟಿಲೇಟರ್ ಮಂಚ, ಹಾಸಿಗೆ ಸಿದ್ಧತೆ ಮಾಡಿಕೊಳ್ಳಬೇಕು, ಪ್ರತಿ ಹೋಬಳಿಗೊಂದು ಆಂಬುಲೆನ್ಸ್ ಕಡ್ಡಾಯ ಕೊಡಬೇಕು. ಮಾನಿಟರ್ ಮಾಡುವುದಕ್ಕೆ ಇಡೀ ರಾಜ್ಯದಲ್ಲಿ ಸರ್ವ ಪಕ್ಷಗಳ ರಾಜ್ಯ ಸಮಿತಿ ರಚನೆ ಆಗಬೇಕು. ಅದಕ್ಕೆ ಮುಖ್ಯಮಂತ್ರಿಗಳು ಅಧ್ಯಕ್ಷರಾಗಿರಬೇಕು. ಎಲ್ಲಾ ವಿರೋಧ ಪಕ್ಷದವರು ಸಮಿತಿಯಲ್ಲಿ ಇರಬೇಕು ಎಂದರು.

ಅಲ್ಲದೆ ಜಿಲ್ಲಾ, ತಾಲೂಕು ಮಟ್ಟದಲ್ಲೂ ಸರ್ವಪಕ್ಷಗಳ ಸಮಿತಿ ರಚನೆ ಆಗಬೇಕು. ಜಾತ್ರೆ, ದೇವಸ್ಥಾನ, ಸಂತೆ, ಶಾಲಾ, ಕಾಲೇಜುಗಳು, ಕಚೇರಿಗಳು ಸೇರಿದಂತೆ ಎಲ್ಲಾ ಕಡೆ ಮಾಸ್ಕ್ ಕಡ್ಡಾಯವಾಗಿರಬೇಕು. ಹೊರಗಡೆಯಿಂದ ಬರುವವರನ್ನು ಸಂಪೂರ್ಣವಾಗಿ ತಪಾಸಣೆ ಮಾಡಬೇಕು ಎಂದರು. ಈ ಸಂದರ್ಭದಲ್ಲಿ ಅಜಯ್, ಸಂಜಯ್, ರೇವಣ್ಣಸ್ವಾಮಿ, ಗೋಪಾಲ ನಾಯಕ, ಹುಂಡಿಬಸವಣ್ಣ, ಶಿವಲಿಂಗಮೂರ್ತಿ, ಪ್ರಕಾಶ್, ಚನ್ನಂಜಪ್ಪ, ಪಾರ್ಥಸಾರಥಿ, ಇತರರು ಹಾಜರಿದ್ದರು.

ದಲಿತ ಸಂಘರ್ಷ ಸಮಿತಿಗಳ ಐಕ್ಯ ಹೋರಾಟ ಚಾಲನಾ ಸಮಿತಿಯಿಂದ ಮನುಸ್ಮೃತಿ ಸುಟ್ಟು ಪ್ರತಿಭಟನೆ



ಚಾಮರಾಜನಗರ, ಡಿ. 25– ದಲಿತ ಸಂಘರ್ಷ ಸಮಿತಿಗಳ ಐಕ್ಯ ಹೋರಾಟ ಚಾಲನಾ ಸಮಿತಿ ವತಿಯಿಂದ ನಗರದಲ್ಲಿ ಮನುಸ್ಮೃತಿ ಸುಟ್ಟು ಪ್ರತಿಭಟನೆ ನಡೆಸಲಾಯಿತು.

ನಗರದ ಜಿಲ್ಲಾಡಳಿತದ ಮುಂಭಾಗದಲ್ಲಿ ಸಮಾವೇಶಗೊಂಡು ಡಾ.ಬಿ.ಆರ್. ಅಂಬೇಡ್ಕರ್‌ರವರ ಪುತ್ಥಳಿಗೆ ಮಾಲಾರ್ಪಣೆ ಮಾಡಿದ ನಂತರ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ನಂತರ ಮೆರವಣಿಗೆ ಮೂಲಕ ಜಿಲ್ಲಾ ಡಳಿತ ಭವನದ ಗೇಟ್ ಮುಂಭಾಗಕ್ಕೆ ತೆರಳಿ ಮನುಸ್ಮೃತಿ ಸುಟ್ಟು ಅಕ್ರೋಶ ವ್ಯಕ್ತಪಡಿಸಿದರು. ಸಮಿತಿಯ ಯರಿಯೂರು ರಾಜಣ್ಣ ಮಾತನಾಡಿ, ರಾಜ್ಯ ಸಮಿತಿಯ ಆದೇಶ ಮೇರೆಗೆ ರಾಜ್ಯಾದ್ಯಂತ ಪ್ರತಿ ಜಿಲ್ಲಾ ಕೇಂದ್ರದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಮಂಭಾಗ ಪ್ರತಿಭಟನೆ ನಡೆಯುತ್ತಿದ್ದು, ಅದೇ ರೀತಿಯಲ್ಲಿ ಜಿಲ್ಲೆಯಲ್ಲೂ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್‌ರವರು ಮೇಲು–ಕೀಳು, ಸ್ಪೃಶ್ಯ–ಅಸ್ಪೃಶ್ಯ, ಜಾತಿ ಹಾಗೂ ಲಿಂಗ ತಾರತಮ್ಯದ ಅಸಮಾನತೆಯನ್ನು ಹೇರುವ ದಲಿತ, ಹಿಂದುಳಿದ ಹಾಗೂ ಶೂದ್ರ ಸಮುದಾಯಗಳ ವಿರೋಧಿ ಮನುಸ್ಮೃತಿಯನ್ನು ದಹನ ಮಾಡಿದ ದಿನದ ಅಂಗವಾಗಿ ಸಮಿತಿ ವತಿಯಿಂದ 'ಬನ್ನಿ ಸಂವಿಧಾನವನ್ನು ಎದೆಗಪ್ಪಿಕೊಳ್ಳೋಣ ಮನುಸ್ಮೃತಿಗೆ ಕೊಳ್ಳಿ ಇಡೋಣ' ಎಂಬ ವಿನೂತನ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದರು.

ಬಿಜೆಪಿ ಕೋಮುವಾದಿ ಸರ್ಕಾರಕ್ಕೆ ಸಾಂಸ್ಕೃತಿಕ ಪ್ರತಿರೋಧ ಒಡ್ಡಲಿಕ್ಕಾಗಿ ರಾಜ್ಯಾದ್ಯಂತ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಮನುವಾದಿಗಳೇ ನೀವೇನಾದರೂ ಮನುಸ್ಮೃತಿ ಕಾಯ್ದೆಗಳನ್ನು ಜಾರಿ ಮಾಡಲು ಹೊರಟರೇ ನಿಮ್ಮ ಪ್ರತಿಯೊಂದು ಹೆಜ್ಜೆಗಳನ್ನು ಹಿಮ್ಮೆಟ್ಟುವ ಕೆಲಸವನ್ನು ಡಿಎಸ್‌ಎಸ್ ನಿರಂತರವಾಗಿ ಮಾಡಲಿದೆ ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಮುಖಂಡರಾದ ಸಿ.ಎಂ.ಶಿವಣ್ಣ, ಕೆ.ಎಂ. ನಾಗರಾಜು, ಜಯಂತಿ, ರಂಗಸ್ವಾಮಿ, ಸುಭಾಷ್, ಮಲ್ಲೇಶ್, ನಂಜುಂಡಸ್ವಾಮಿ, ನಾರಾಯಣ್, ಶೇಖರ್, ಆಟೋ ಉಮೇಶ್, ಶಂಕರಮೂರ್ತಿ, ಮಹದೇವಸ್ವಾಮಿ, ಯಜಮಾನರಾದ ಮಹದೇವಯ್ಯ, ಶಿವಣ್ಣ, ಮಲ್ಲಿಕಾರ್ಜುನಯ್ಯ, ಉಮೇಶ್ ಕುಮಾರ್ ಇತರರು ಭಾಗವಹಿಸಿದ್ದರು.

ಚಾಮರಾಜನಗರ ಬಳಿ ಕಬ್ಬಿನ ಗದ್ದೆಯಲ್ಲಿ ಚಿರತೆ ಮರಿ ಪತ್ತೆ



ಚಾಮರಾಜನಗರ, ಡಿ.25– ತಾಲೂಕಿನ ಕಟ್ನವಾಡಿ ಗ್ರಾಮದ ಕಬ್ಬಿನ ಗದ್ದೆಯಲ್ಲಿ ಭಾನುವಾರ ಎರಡು ಚಿರತೆ ಮರಿಗಳು ಪತ್ತೆಯಾಗಿವೆ.

ಗ್ರಾಮದ ಗುರು ಎಂಬುವರ ಜಮೀನಿನಲ್ಲಿ ಕಬ್ಬು ಕಟಾವು ಮಾಡುವ ಸಂದರ್ಭದಲ್ಲಿ 2 ಹೆಣ್ಣು ಚಿರತೆ ಮರಿಗಳು ಸಿಕ್ಕಿವೆ. ಇವುಗಳಿಗೆ 15 ರಿಂದ 20 ದಿನ ಆಗಿರಬಹುದು ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಹೇಳಿದ್ದಾರೆ. ಮರಿಗಳು ಕಂಡು ಬಂದ ತಕ್ಷಣ ಗ್ರಾಮಸ್ಥರು ಚಾಮರಾಜನಗರ ವಲಯ ಅರಣ್ಯ ಸಿಬ್ಬಂದಿಗೆ ತಿಳಿಸಿದ್ದು, ಪ್ರಭಾರ ಆರ್‌ಎಫ್‌ಒ ವಿನೋದ್‌ಗೌಡ ಹಾಗೂ ಸಿಬ್ಬಂದಿ ಸ್ಥಳಕ್ಕೆ ತೆರಳಿ ಪರಿಶೀಲಿಸಿದರು. ಎರಡು ಮರಿಗಳೂ ಆರೋಗ್ಯದಿಂದಿವೆ. ಸ್ಥಳದಲ್ಲಿ ಕ್ಯಾಮೆರಾ ಟ್ರ್ಯಾಪ್ ಅಳವಡಿಸಿ ಎರಡ್ಮೂರು ದಿನ ಚಲನವಲನದ ಮೇಲೆ ನಿಗಾ ಇಡಲಾಗುವುದು. ತಾಯಿ ಚಿರತೆ ಮರಿಗಳಿಗಾಗಿ ವಾಪಸ್ ಬರಬಹುದು. ಸಿಬ್ಬಂದಿ ಸ್ಥಳದಲ್ಲೇ ಇರಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಡಿ.28ರಂದು ಚಾ.ನಗರದಲ್ಲಿ ಉಚಿತ ಹೃದಯರೋಗ ತಪಾಸಣಾ ಶಿಬಿರ

ಚಾಮರಾಜನಗರ, ಡಿ. 25– ಭಾರತದ ಮಾಜಿ ಪ್ರಧಾನಿ ದಿವಂಗತ ಅಟಲ್ ಬಿಹಾರಿ ವಾಜಪೇಯಿ ಅವರ ಹುಟ್ಟುಹಬ್ಬದ ಅಂಗವಾಗಿ ಜೆಎಸ್‌ಎಸ್ ಆಸ್ಪತ್ರೆ ಮೈಸೂರು, ಡಾ.ಬಾಬು ಸೋಷಿಯಲ್ ವೆಲ್‌ಫೇರ್ ಅಂಡ್ ಚಾರಿಟಬಲ್ ಟ್ರಸ್ಟ್ ಇವರ ಸಹಯೋಗದಲ್ಲಿ ಡಿ.28 ರಂದು ನಗರದಲ್ಲಿ ಬೃಹತ್ ಉಚಿತ ಹೃದಯರೋಗ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಡಾ. ಎ.ಆರ್.ಬಾಬು ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ನಗರದ ಜೋಡಿರಸ್ತೆಯಲ್ಲಿರುವ ಶ್ರೀಬಸವರಾಜ ಮಹಾಸ್ವಾಮಿಗಳವರ ಅನುಭವ ಮಂಟಪದಲ್ಲಿ ಬೆಳಿಗ್ಗೆ 9 ಗಂಟೆ ಆರಂಭವಾಗುವ ಶಿಬಿರ ಮಧ್ಯಾಹ್ನ 1 ಗಂಟೆಯವರೆಗೆ ನಡೆಯಲಿದೆ ಶಿಬಿರದಲ್ಲಿ ಉಚಿತವಾಗಿ ಬಿಪಿ, ಶುಗರ್, ಇಸಿಜಿ ಮತ್ತು ಎಕೋ ಪರೀಕ್ಷೆಗಳನ್ನು ಮಾಡಲಾಗುವುದು ಎಂದರು.

ಶಿಬಿರವನ್ನು ಗಣ್ಯರು ಉದ್ಘಾಟಿಸಲಿದ್ದಾರೆ. ನಗರದ ಶ್ರೀ ಸಿದ್ದಮಲ್ಲೇಶ್ವರ ವಿರಕ್ತ ಮಠದ ಶ್ರೀಚನ್ನಬಸವ ಸ್ವಾಮೀಜಿಗಳು, ಮೈಸೂರು ಜೆಎಸ್‌ಎಸ್ ಆಸ್ಪತ್ರೆಯ ಹೃದ್ರೋಗ ತಜ್ಞರು, ಇತರೆ ಗಣ್ಯರು ಭಾಗವಹಿಸಲಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಜಿಲ್ಲಾ ಬಿಜೆಪಿ ವಕ್ತಾರ ಅಯ್ಯನಪುರ ಶಿವಕುಮಾರ್, ಎಪಿಎಂಸಿ ಅಧ್ಯಕ್ಷ ಮನೋಜ್‌ಪಟೇಲ್, ಆನಂದ್ ಭಗೀರಥ್ ಹಾಜರಿದ್ದರು.

ಮೈಸೂರು ಮಿತ್ರ

ಒಂದನೇ ಪುಟದಿಂದ

ಯಶಸ್ವಿನಿ ವಿಸ್ತರಣೆ

ಈ ಹಿಂದೆ ಸರ್ಕಾರಿ ಹಾಗೂ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುವವರನ್ನು ಯಶಸ್ವಿನಿ ಯೋಜನೆಯಿಂದ ಹೊರಗಿಡಲಾಗಿತ್ತು. ಯಶಸ್ವಿನಿ ಯೋಜನೆಗೆ ಸದಸ್ಯತ್ವ ನೋಂದಣಿಯಲ್ಲಿ ಹತ್ತು ಜನರಿಗೆ ಅವಕಾಶವಿದ್ದು, ಹೆಚ್ಚುವರಿ ಜನರ ಸೇರ್ಪಡೆಗೆ ನಮೂನೆ ಲಗತ್ತಿಸಿ ಮಾಹಿತಿ ಭರ್ತಿ ಮಾಡಿ ಸಲ್ಲಿಸಬಹುದಾಗಿದೆ. ಅಲ್ಲದೆ ಆಯುಷ್ಮಾನ್ ಭಾರತ್ ಕಾರ್ಡ್ ಹೊಂದಿರುವವರಿಗೂ ಯಶಸ್ವಿನಿ ಕಾರ್ಡ್ ಪಡೆಯಲು ಅವಕಾಶವಿದ್ದರೂ ಯಾವುದಾದರೂ ಒಂದು ಯೋಜನೆಯಲ್ಲಿ ಮಾತ್ರ ಚಿಕಿತ್ಸೆ ಪಡೆಯಬಹುದಾಗಿದೆ ಎಂಬ ವಿವರ ನೀಡಿದೆ. ಯಶಸ್ವಿನಿ ಯೋಜನೆ ಅವಧಿ 01-01-2023ರಿಂದ 30-12-2023 ರವರೆಗೂ ಜಾರಿಯಲ್ಲಿರುತ್ತದೆ. 1650 ಕಾಯಿಲೆಗಳಿಗೆ ಈ ಯೋಜನೆಯಲ್ಲಿ ಚಿಕಿತ್ಸೆ ನೀಡಲಾಗುತ್ತದೆ. ಪ್ರತಿಯೊಬ್ಬ ಸದಸ್ಯನಿಗೆ ಯುನಿಕ್ ಐಡಿ ನಂಬರ್‌ಗಳಿರುವ ಬಾರ್ ಕೋಡ್ ರೀಡಿಂಗ್ ವ್ಯವಸ್ಥೆ ಇರುವ ಗುರುತಿಸುವ ಕಾರ್ಡ್ ಅನ್ನು ಕೊಡಲಾಗುತ್ತದೆ. ಯಶಸ್ವಿನಿ ಈ ಯೋಜನೆಯಲ್ಲಿ 823 ಬಗೆಯ ಶಸ್ತ್ರಚಿಕಿತ್ಸೆಗಳು ಒಳಗೊಂಡಿದೆ.

ಕೆ.ಆರ್.ಪೇಟೆಯಿಂದ ಹೊರಹಾಕಿ

ಮುಖ್ಯಮಂತ್ರಿಯಾಗಿ ಮೆರೆಯಬೇಕೆಂದು ಕಾಂಗ್ರೆಸ್ ಜೊತೆ ಹೋಗಲಿಲ್ಲ. ನಮ್ಮ ಎಲ್ಲಾ ಕಾರ್ಯಕ್ರಮ ಮುಂದುವರೆಸಬೇಕೆಂಬ ಕಾಂಗ್ರೆಸ್ ನಾಯಕರ ಮಾತಿನ ನಡುವೆ ಸಾಲ ಮನ್ನಾ ಮಾಡಿದೆ. ಸಾಲ ಮನ್ನಾ ಯೋಜನೆಯ ಹಣ ಇನ್ನೂ 2 ಲಕ್ಷ ಕುಟುಂಬಗಳಿಗೆ ತಲುಪಿಲ್ಲ ಎಂದು ಹೇಳಿದರು.

ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಮಾತನಾಡಿ, ಕುಮಾರಸ್ವಾಮಿ ಅವರ ಪರಿಸ್ಥಿತಿ ನೋಡಿದರೆ ಕಣ್ಣೀರು ಬರುತ್ತೆ. ಕಾಲಿಗೆ ಗಾಯವಾಗಿ ಊದಿಕೊಂಡಿದೆ. ಇಂತಹ ಸಂದರ್ಭದಲ್ಲೂ ಅವರ ಹೋರಾಟ ಬಡವರಿಗಾಗಿ. ಜಾತಿ ವ್ಯಾಮೋಹದಲ್ಲಿ ಎರಡೂ ರಾಷ್ಟ್ರೀಯ ಪಕ್ಷಗಳು ಜನತೆಗೆ ಮೋಸ ಮಾಡಿವೆ. ಕುಮಾರಸ್ವಾಮಿ ಮನೆ ಬಳಿ ನಿತ್ಯ ನೂರಾರು ಜನ ಬರುತ್ತಾರೆ. ಅಲ್ಲಿ ಜಾತಿ ನೋಡಿ ಸಹಾಯ ಮಾಡಲ್ಲ. ಪಂಚರತ್ನ ಯೋಜನೆಗಳ ಮೂಲಕ ಜನರ ಸಮಸ್ಯೆಗೆ ಶಾಶ್ವತ ಪರಿಹಾರ ನೀಡಲು ಮುಂದಾಗಿದ್ದಾರೆ. ಇದಕ್ಕಾಗಿ ಹೆಚ್.ಟಿ.ಮಂಜು ಗೆಲ್ಲಿಸುವ ಮೂಲಕ ಕುಮಾರಸ್ವಾಮಿ ಕೈ ಬಲಪಡಿಸಿ ಎಂದು ಮನವಿ ಮಾಡಿದರು.

ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ದೇವೇಗೌಡರು, ಕುಮಾರಸ್ವಾಮಿಯನ್ನು ಪ್ರೀತಿಸುವ ಅಪಾರ ಜನ ಇದ್ದಾರೆ. ನನ್ನನ್ನು ಈ ಹಿಂದೆ ಕೈ ಹಿಡಿದಿದ್ದು ಶೀಳನೆರೆ ಹೋಬಳಿ ಜನತೆ. ಕೆ.ಆರ್.ಪೇಟೆ ನಾಡಿಮಿಡಿತವನ್ನು ನಾನು ಅರಿತಿದ್ದೇನೆ. ಕೆ.ಆರ್.ಪೇಟೆ ಜನತೆ ಈ ಬಾರಿ ಹೆಚ್.ಟಿ.ಮಂಜು ಗೆಲ್ಲಿಸುತ್ತಾರೆ ಎಂದರು.

ಕೆ.ಆರ್.ಪೇಟೆ ಜೆಡಿಎಸ್ ಅಭ್ಯರ್ಥಿ ಹೆಚ್.ಟಿ.ಮಂಜು ಮಾತನಾಡಿ, ನಾನು ಡೋಂಗಿ ಮಾತನಾಡಲ್ಲ, ನಾನು ರೈತನ ಮಗ. ಅಭ್ಯರ್ಥಿಯಾಗಿ ಘೋಷಣೆ ಮಾಡಿದ್ದೀರಿ. ನಾನು ಜೆಡಿಎಸ್‌ಗೆ ಕೈ ಕೊಡುವ ಕೆಲಸ ಮಾಡಲ್ಲ. ನೀವು ಸಿಎಂ ಆಗುವುದಕ್ಕೆ ನಾನು ಶ್ರಮಿಸುತ್ತೇನೆ. ವೇದಿಕೆಯಲ್ಲಿ ಪ್ರಮಾಣ ಮಾಡುವೆ, ಪಕ್ಷಕ್ಕಾಗಿ ದುಡಿಯುವೆ ಎಂದು ಹೇಳಿದರು.

ಕುಮಾರಣ್ಣ ರೈತರ ಪರ ನಿಂತ ನಾಯಕರು. ಪಕ್ಷತೀತವಾಗಿ ರೈತರು ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬಕ್ಕೆ ಸಾಂತ್ವನ ಹೇಳಿದ್ದಾರೆ. ಕುಮಾರಸ್ವಾಮಿಗೆ ಬೇರೆ ಪಕ್ಷಗಳು ಕಷ್ಟ ಕೊಟ್ಟರು ರೈತರ ಸಾಲ ಮನ್ನಾ ಮಾಡಿದರು. ಈ ಪಂಚರತ್ನ ಯಾತ್ರೆ ಹಮ್ಮಿಕೊಂಡಿದ್ದಾರೆ. ಕುಮಾರಸ್ವಾಮಿ ಅಧಿಕಾರಕ್ಕೆ ಬಂದರೆ ಪಂಚರತ್ನ ಯೋಜನೆಯನ್ನು ಜಾರಿ ಖಂಡಿತ. ಈ ಕಾರ್ಯಕ್ರಮ ಜಾರಿಗೆ ತರಲು ಎಲ್ಲರೂ ಸಹಕರಿಸಬೇಕು. 2023ಕ್ಕೆ ಅವರನ್ನು ನಾವು ಮುಖ್ಯಮಂತ್ರಿ ಮಾಡೋಣ ಎಂದರು. ರಾಜ್ಯದಲ್ಲಿ 163 ಶುಗರ್ ಫ್ಯಾಕ್ಟರಿಗೆ ಅವಕಾಶ ಕೊಟ್ಟಿದ್ದು ನಮ್ಮ ದೇವೇಗೌಡರು. 90ನೇ ವಯಸ್ಸಿನಲ್ಲಿ ದೇವೇಗೌಡ್ರು ಮೀಸಲಾತಿ ಬಗ್ಗೆ ಧ್ವನಿ ಎತ್ತಿದ್ದಾರೆ ಎಂದು ಶ್ಲಾಘಿಸಿದರು.

ಚಿರತೆ ಹಿಂಡಿನ ಉಪಟಳ

ಪ್ರವಾಸಿಗರಿಗೆ ಪ್ರವೇಶ ನಿರ್ಬಂಧ ಇಲ್ಲ. ಈಗಾಗಲೇ ನಿರಂತರ ಚಿರತೆ ಹಾವಳಿ ಹಿನ್ನೆಲೆಯಲ್ಲಿ ಬೃಂದಾವನ್ ಗಾರ್ಡನ್‌ಗೆ ಅಂದಾಜು ಕೋಟಿ ರೂ. ವೆಚ್ಚದಲ್ಲಿ ಎತ್ತರದ ಚೈನ್ ಲಿಂಕ್ ಫೆನ್ಸ್ ನಿರ್ಮಿಸಲು ಟೆಂಡರ್ ಕರೆದಿದ್ದು, ಜನವರಿ ತಿಂಗಳಲ್ಲಿ ಕಾಮಗಾರಿ ಆರಂಭವಾಗಲಿದೆ. ಸದ್ಯ ಬೃಂದಾವನದಲ್ಲಿ ಚಿರತೆ ಆತಂಕ ಸದ್ಯಕ್ಕೆ ಇಲ್ಲ ಎಂದು ಕಾವೇರಿ ನೀರಾವರಿ ನಿಗಮದ ಎಇಇ ಅಬು ಫಾರುಖ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು. ಕೆಲ ದಿನಗಳ ಹಿಂದೆ ಚಿರತೆ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಬೃಂದಾವನಕ್ಕೆ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಲಾಗಿತ್ತು. ಜತೆಗೆ, ಚಿರತೆಯ ಸೆರೆಗಾಗಿ ಅರಣ್ಯಾಧಿಕಾರಿಗಳು ನಿರಂತರ ಕಾರ್ಯಾಚರಣೆ ನಡೆಸಿದ್ದರೂ ಚಿರತೆ ಸೆರೆ ಸಿಕ್ಕಿರಲಿಲ್ಲ.

'ಕಲ್ಯಾಣ ರಾಜ್ಯ ಪ್ರಗತಿ ಪಕ್ಷ'

ಸಂಘಟನೆ ಮಾಡುವೆ. ಸಾರ್ವಜನಿಕ ಜೀವನದಲ್ಲಿ ಏನೇ ಅಡೆತಡೆ ಬಂದರೂ ಮುನ್ನಡೆಯುವೆ. ರಾಜ್ಯದ ಪ್ರತಿಯೊಂದು ಮನೆಗೆ ತೆರಳುತ್ತೇನೆ ಎಂದು ಹೇಳಿದರು. ಮುಂದುವರಿದು, ನನ್ನ ಜೊತೆ ಆಪ್ತ ಗೆಳೆಯ ಶ್ರೀರಾಮುಲು ಅವರಿಗೆ ಬರುವಂತೆ ಹೇಳಿಲ್ಲ. ನಾವಿಬ್ಬರೂ ಒಳ್ಳೆಯ ಸ್ನೇಹಿತರು. ಮುಂದಿನ ದಿನಗಳಲ್ಲಿ ನನ್ನ ಪತ್ನಿ ಅರುಣಾ ಲಕ್ಷ್ಮಿ ಅವರು ಸಹ ಪಕ್ಷ ಸಂಘಟನೆಗಳಲ್ಲಿ ತೊಡಗಿಸಿಕೊಳ್ಳಲಿದ್ದಾರೆ. ಸಾರ್ವಜನಿಕ ಜೀವನದಲ್ಲಿ ಏನೇ ಅಡೆತಡೆ ಬಂದರೂ ಮುನ್ನಡೆಯುವೆ. ಕರ್ನಾಟಕ ರಾಜ್ಯದ ಅಭಿವೃದ್ಧಿಯೇ ನನ್ನ ಗುರಿ ಎಂದರು. ನಾನು ಕೆಲಸ ಮಾಡಿದ ಪಕ್ಷದಿಂದ ಸ್ಥಾನಮಾನ ಸಿಗದ ಹಿನ್ನಲೆಯಲ್ಲಿ ಹೊಸ ಪಕ್ಷ ಸ್ಥಾಪಿಸಬೇಕಾಯಿತು. ಹೀಗಾಗಿ, ನಾನು ಕರ್ನಾಟಕ ರಾಜ್ಯ ಕಲ್ಯಾಣ ಪ್ರಗತಿ ಪಕ್ಷ ಸ್ಥಾಪನೆ ಮಾಡಿ ಮುಂದೆ ಹೆಜ್ಜೆ ಹಾಕುತ್ತೇನೆ. 10 ರಿಂದ 155 ದಿನಗಳಲ್ಲಿ ಪಕ್ಷದ ಚಿಹ್ನೆ, ಕಚೇರಿ ಬಗ್ಗೆ ಮಾಹಿತಿ ನೀಡುತ್ತೇನೆ ಎಂದರು.

ರಾಜ್ಯ ರಾಜಕಾರಣದಲ್ಲಿ ನನ್ನವರು ಎಂದುಕೊಂಡವರಿಂದಲೇ ಮೋಸ ಹೋದೆ. ಕಷ್ಟದಲ್ಲಿ ಯಾರೂ ನನ್ನ ಜೊತೆ ನಿಂತಿಲ್ಲ. ಇದನ್ನು ನನ್ನ ಸ್ನೇಹಿತರು ಈಗಲೂ ಹೇಳುತ್ತಾರೆ. ಮಾಜಿ ಸಿಎಂ ಯಡಿಯೂರಪ್ಪ ಮತ್ತು ಜಗದೀಶ್ ಶೆಟ್ಟರ್ ಬಿಟ್ಟು ಇನ್ನು ಯಾವ ನಾಯಕರು ನನ್ನ ಮನೆಗೆ ಬಂದಿಲ್ಲ. ಅವರಿಬ್ಬರು ಮಾತ್ರ ನನಗೆ ಧೈರ್ಯ ಹೇಳಿದರು. ಅವರನ್ನು ನಾನು ನೆನಪು ಮಾಡಿಕೊಳ್ಳುತ್ತೇನೆ ಎಂದು ರೆಡ್ಡಿ ಹೇಳಿದರು. 2018ರಲ್ಲಿಯೇ ನಾನು ಸ್ವಂತ ನಿರ್ಧಾರ ತೆಗೆದುಕೊಳ್ಳಬೇಕಿತ್ತು. ಬಿಜೆಪಿಗೆ 104 ಸ್ಥಾನ ಬಂದಾಗ ಅಮಿತ್ ಶಾ ಅವರನ್ನು ಸಂಪರ್ಕಿಸಲು ಪ್ರಯತ್ನಿಸಿದೆ. ಆದರೆ, ಅದು ಸಾಧ್ಯವಾಗಲಿಲ್ಲ. ಬಿಜೆಪಿ ನನ್ನನ್ನು ಸರಿಯಾಗಿ ನಡೆಸಿಕೊಂಡಿಲ್ಲ ಎಂದು ಮಾಧ್ಯಮಗಳು ವರದಿ ಮಾಡಿದವು ಎಂದರು. ವಿಧಾನಸಭೆ ಚುನಾವಣೆಗೆ ಕೆಲವೇ ದಿನಗಳು ಇರುವಾಗ ಹೊಸ ಪಕ್ಷ ಘೋಷಣೆ ಮಾಡಿರುವುದು ಬಿಜೆಪಿಯೊಳಗೆ ತಳಮಳ ಶುರುವಾಗುವಂತೆ ಮಾಡಿದೆ.

ಚಾಮುಂಡಿಬೆಟ್ಟದ ಗೇಟ್ ಧ್ವಂಸ

ಗೇಟ್‌ಗಳಿಗೆ ಬೀಗ ಹಾಕಲಾಗುತ್ತಿತ್ತು. ಬೆಟ್ಟದ ನಿವಾಸಿಗಳು ಹಾಗೂ ತುರ್ತು ವಾಹನಗಳಿಗೆ ಹೊರತುಪಡಿಸಿ ಇನ್ನಿತರೆ ವಾಹನಗಳಿಗೆ ಬೆಟ್ಟ ಪ್ರವೇಶ ಮುಂಜಾನೆವರೆಗೆ ಬಂದ್ ಆಗಿತ್ತು. ಆದರೆ, ಕಳೆದ 10 ದಿನದ ಹಿಂದೆ ನಂದಿ ಕಡೆಯಿಂದ ಬಂದ ವಾಹನವೊಂದು ಡಿಕ್ಕಿ ಹೊಡೆದು ಗೇಟ್ ಒಂದೆಡೆ ನೆಲಸಮಗೊಂಡಿದೆ. ಡಿಕ್ಕಿ ಹೊಡೆದ ವಾಹನದ ಸುಳಿವು ಯಾರಿಗೂ ದೊರೆತಿಲ್ಲ. ಗೇಟ್ ಮುರಿದು ಬಿದ್ದಿದ್ದರೂ ಅಧಿಕಾರಿಗಳು ಹಾಗೂ ಪೊಲೀಸರು ಇತ್ತ ಗಮನಹರಿಸದಿರುವುದಕ್ಕೆ ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ವಾಹನ ಸವಾರರು ನುಸುಳಲು ಸಹಕಾರಿ: ಚಾಮುಂಡಿಬೆಟ್ಟಕ್ಕೆ ಸಂಪರ್ಕ ಕಲ್ಪಿಸುವ ತಾವರೆಕಟ್ಟೆಯ ಮುಖ್ಯ ರಸ್ತೆ, ಲಲಿತಮಹಲ್ ಪ್ಯಾಲೇಸ್ ಸಂಪರ್ಕ ರಸ್ತೆ, ಉತ್ತನಹಳ್ಳಿ ರಸ್ತೆ ಹಾಗೂ ತಾವರೆಕಟ್ಟೆಯಿಂದ ನಂದಿಗೆ ಹೋಗುವ ರಸ್ತೆಗಳಿಗೆ ಗೇಟ್ ಅಳವಡಿಸಲಾಗಿದೆ. ತಾವರೆಕಟ್ಟೆಯಿಂದ ನಂದಿಗೆ ಹೋಗುವ ರಸ್ತೆ ತೀವ್ರ ಕಡಿದಾಗಿರುವುದರಿಂದ ಆ ರಸ್ತೆಯಲ್ಲಿ ಏಕಮುಖ ಸಂಚಾರ ವ್ಯವಸ್ಥೆ ಮಾಡಲಾಗಿದ್ದು, ನಂದಿಯಿಂದ ನಗರಕ್ಕೆ ಹಿಂದಿರುಗುವ ವಾಹನಗಳಿಗೆ ಮಾತ್ರ ಇಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಉಳಿದ ಮೂರು ರಸ್ತೆಯಲ್ಲೂ ದ್ವಿಮುಖ ಸಂಚಾರ ವ್ಯವಸ್ಥೆ ಇದೆ. ಮುಖ್ಯ ರಸ್ತೆಯಲ್ಲಿ ವಾಹನ ಸಂಚಾರ ಸದಾ ಹೆಚ್ಚಾಗಿರುವುದರಿಂದ ಹಾಗೂ ಪೊಲೀಸರು ಗಸ್ತು ತಿರುಗುವುದರಿಂದ ಅನೈತಿಕ ಚಟುವಟಿಕೆಗೆ ಕಡಿವಾಣ ಬಿದ್ದಿತ್ತು. ಆದರೆ, ನಂದಿ ರಸ್ತೆಯಲ್ಲಿ ಜನ ಸಂಚಾರ ವಿರಳವಾಗಿರುವುದರಿಂದ ಇಲ್ಲಿ ವಿಹರಿಸಲು ಹೋಗುತ್ತಿದ್ದ ಯುವ ಜೋಡಿಗಳನ್ನು ಬೆದರಿಸಿ, ದೋಚುವಂತಹ ಪ್ರಕರಣಗಳು ಈ ಹಿಂದೆ ವರದಿಯಾಗಿತ್ತು. ಆದರೆ, ಗೇಟ್ ಅಳವಡಿಕೆ ಬಳಿಕ ಬಹುತೇಕ ಅನೈತಿಕ ಚಟುವಟಿಕೆಗೆ ಕಡಿವಾಣ ಬಿದ್ದಿತ್ತು. ಆದರೆ, ಇದೀಗ ಗೇಟ್ ಧ್ವಂಸಗೊಳಿಸಿರುವುದರಿಂದ ದ್ವಿಚಕ್ರ ವಾಹನಗಳಲ್ಲಿ ಯುವ ಜೋಡಿಗಳು, ಜಾಲಿ ರೈಡ್‌ಗೆ ಬಂದವರು ನುಸುಳುತ್ತಿದ್ದಾರೆ. ಕೂಡಲೇ ಗೇಟ್ ಅಳವಡಿಸಿ, ಅನೈತಿಕ ಚಟುವಟಿಕೆಗೆ ಕಡಿವಾಣ ಹಾಕುವಂತೆ ಬೆಟ್ಟದ ನಿವಾಸಿಗಳು ಆಗ್ರಹಿಸಿದ್ದಾರೆ.

ನಂದಿ ರಸ್ತೆಯಲ್ಲಿ ಭೂ ಕುಸಿತದ ಬಳಿಕ ಆ ರಸ್ತೆಯಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು. ಇದರಿಂದ ಕಳೆದ ಒಂದೂವರೆ ವರ್ಷದಿಂದ ಬಹುತೇಕ ವಾಯುವಿಹಾರಿಗಳು ತಾವರೆಕಟ್ಟೆಯಿಂದ ನಂದಿ ರಸ್ತೆಯಲ್ಲಿ ವಾಯುವಿಹಾರಕ್ಕೆ ತೆರಳುತ್ತಿದ್ದರು. ಇದುವರೆಗೆ ವಾಹನ ಸಂಚಾರವಿಲ್ಲದೆ, ಯುವ ಜೋಡಿಗಳ ಕಿರಿಕಿರಿ ಇಲ್ಲದೆ ಈ ರಸ್ತೆಯಲ್ಲಿ ನಿಶ್ಚಿಂತೆಯಿಂದ ವಿಹಾರ ಮಾಡುತ್ತಿದ್ದ ವಾಯುವಿಹಾರಿಗಳಿಗೆ ಕಳೆದ ಒಂದು ವಾರದಿಂದ ಕಿರಿಕಿರಿ ಆರಂಭವಾಗಿದೆ. ದ್ವಿಚಕ್ರ ವಾಹನಗಳು, ಭಾರೀ ಶಬ್ದದೊಂದಿಗೆ ವೇಗವಾಗಿ ಸಾಗುವುದರಿಂದ ನಿಶಬ್ದವಾಗಿದ್ದ ರಸ್ತೆಯಲ್ಲಿ ಈಗ ಶಬ್ದಮಾಲಿನ್ಯದೊಂದಿಗೆ ವಾಯುಮಾಲಿನ್ಯವಾಗುತ್ತಿದೆ. ಇದನ್ನು ಮನಗಂಡು ಧ್ವಂಸಗೊಂಡಿರುವ ಗೇಟ್ ದುರಸ್ತಿ ಮಾಡುವಂತೆ ವಾಯುವಿಹಾರಿಗಳು ಒತ್ತಾಯಿಸಿದ್ದಾರೆ.

ಕಳಪೆ ಗುಣಮಟ್ಟದ ಗೇಟ್: ವಾಹನ ಡಿಕ್ಕಿ ಹೊಡೆದು ಮುರಿದು ಬಿದ್ದಿರುವ ಗೇಟ್ ಕಳಪೆ ಗುಣಮಟ್ಟದಿಂದ ಕೂಡಿದೆ. ಗೇಟ್‌ಗೆ ಬಳಸಿರುವ ಕಬ್ಬಿಣದ ಪಟ್ಟಿಗಳು ತೀರಾ ತೆಳುವಾಗಿವೆ. ಅಲ್ಲದೆ, ಹಲವೆಡೆ ತುಕ್ಕು ಹಿಡಿದು ಶಿಥಿಲಗೊಂಡಿರುವುದರಿಂದ ವಾಹನ ಡಿಕ್ಕಿ ಹೊಡೆದಾಗ ಮುರಿದು ಬಿದ್ದಿದೆ. ಸ್ಥಳದಲ್ಲಿ ಡಿಕ್ಕಿ ಹೊಡೆದ ವಾಹನದ ಯಾವುದೇ ಅವಶೇಷ ಕಂಡು ಬಂದಿಲ್ಲ. ಹಾಗಾಗಿ ವಾಹನಕ್ಕೆ ಯಾವುದೇ ಹಾನಿಯಾಗಿಲ್ಲ ಎಂಬುದು ಖಾತರಿಯಾಗಿದೆ. ಇನ್ನಾದರೂ ಗುಣಮಟ್ಟದ ಗೇಟ್ ಅಳವಡಿಸಬೇಕು. ಆಗ ಮಾತ್ರ ದೀರ್ಘಕಾಲ ಬಾಳಿಕೆ ಬರುತ್ತದೆ ಎಂದು ಸ್ಥಳೀಯರು ಅಭಿಪ್ರಾಯಪಟ್ಟಿದ್ದಾರೆ.

ಶ್ರೀರಾಮಪುರದಲ್ಲಿ ನಮ್ಮ ಕ್ಲಿನಿಕ್ ಪ್ರಾರಂಭ

ಮೈಸೂರು ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉದ್ಘಾಟನೆ

ಅಗತ್ಯವಿರುವವರಿಗೆ ಆರೋಗ್ಯ ಕಲ್ಪಿಸುವ ಶಾಶ್ವತ ವ್ಯವಸ್ಥೆ

ಮೈಸೂರು,ಡಿ.25(ಎಂಟಿವೈ)- ಎಲ್ಲರಿಗೂ ಆರೋಗ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಹೊಸದಾಗಿ ಆರಂಭಿಸಿರುವ 'ನಮ್ಮ ಕ್ಲಿನಿಕ್' ಗುಣಮಟ್ಟದ ಚಿಕಿತ್ಸೆ ಒದಗಿಸುವ ಮೂಲಕ ಜನರ ವಿಶ್ವಾಸ ಗಳಿಸುವಂತೆ ಕಾರ್ಯನಿರ್ವಹಿಸಬೇಕು ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಸಲಹೆ ನೀಡಿದ್ದಾರೆ.

ಮೈಸೂರಿನ ಶ್ರೀರಾಮಪುರದ ಮಧುವನ ಲೇಔಟ್‌ನಲ್ಲಿ 'ನಮ್ಮ ಕ್ಲಿನಿಕ್' ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯ ಸರ್ಕಾರ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ನಮ್ಮ ಕ್ಲಿನಿಕ್ ಆರಂಭಿಸಿದೆ. ವಿಶಾಲವಾದ ಆಲೋಚನೆಯೊಂದಿಗೆ ವ್ಯವಸ್ಥಿತ ಆರೋಗ್ಯ ಸೇವೆ ಒದಗಿಸಲು ಈ ಕ್ಲಿನಿಕ್ ಪೂರಕವಾಗಿ ಕಾರ್ಯನಿರ್ವಹಿಸಲಿದೆ. ಇತರೆ ಆರೋಗ್ಯ ಕೇಂದ್ರಗಳಿಗಿಂತ ವಿಭಿನ್ನವಾಗಿ ನಮ್ಮ ಕ್ಲಿನಿಕ್ ಕೆಲಸ ಮಾಡುತ್ತವೆ. ಎಂಬ ವಿಶ್ವಾಸವಿದೆ. ವಿವಿಧ ಆರೋಗ್ಯ ಸಮಸ್ಯೆಗಳಿಂದ ಕ್ಲಿನಿಕ್‌ಗೆ ಬರುವವರಿಗೆ ನಗುಮುಖದ ಸೇವೆ ಒದಗಿಸಬೇಕು. ಇತರೆ ಕ್ಲಿನಿಕ್‌ಗಳಂತೆ ಯಾವುದೇ ಕಳಂಕಕ್ಕೆ ಆಸ್ಪದ ನೀಡದೆ ಉತ್ತಮ ಸೇವೆ ನೀಡಲು ಸಿಬ್ಬಂದಿಗಳು ಪಣ ತೊಡಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಎಸ್.ಎ.ರಾಮದಾಸ್ ಮಾತನಾಡಿ, ಕೆ.ಆರ್.ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಗೆ ಒಳಪಡುವ ಶ್ರೀರಾಮಪುರ ಸೇರಿದಂತೆ ಸುತ್ತಮುತ್ತಲಿನ ನಿವಾಸಿಗಳಿಗೆ ಆರೋಗ್ಯ ಸೇವೆ ಕಲ್ಪಿಸಲು 'ನಮ್ಮ ಕ್ಲಿನಿಕ್' ಆರಂಭಿಸಲಾಗಿದೆ. ಈ ಕ್ಲಿನಿಕ್ ತಾತ್ಕಾಲಿಕವಾಗಿ ನಿರ್ಮಿಸಿರುವುದಲ್ಲ.



ಇನ್ನು ಮುಂದೆ ಶಾಶ್ವತವಾಗಿ ವರ್ಷದ 365 ದಿನವೂ ಜನರಿಗೆ ಆರೋಗ್ಯ ಸೇವೆ ಒದಗಿಸಲಿದೆ. ಇದರ ಸದುಪಯೋಗ ಪಡೆದುಕೊಳ್ಳುವಂತೆ ಸಲಹೆ ನೀಡಿದರಲ್ಲದೆ, ಈ ಕ್ಲಿನಿಕ್ 'ನನ್ನ ಮನೆ – ನನ್ನ ಡಾಕ್ಟರ್' ಎಂಬ ಭಾವನೆಯನ್ನು ಮೂಡಿಸುವುದರೊಂದಿಗೆ ಚಿಕಿತ್ಸೆ ನೀಡುವ ಮುನ್ನ ಆಪ್ತ ಸಮಾಲೋಚನೆ ವ್ಯವಸ್ಥೆಯನ್ನು ಒಳಗೊಂಡಿರಲಿದೆ ಎಂದು ತಿಳಿಸಿದರು.

ಇಂದು ಎಲ್ಲೆಡೆ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ. ಆ ಮಹಾನ್ ನಾಯಕರ ಜನ್ಮದಿನದಂದೇ ನಮ್ಮ ಕ್ಲಿನಿಕ್ ಉದ್ಘಾಟಿಸಿರುವುದು ಸಂತೋಷವನ್ನುಂಟು ಮಾಡಿದೆ. ಅಟಲ್‌ಜೀ ಅವರು ಜೈ ವಿಜ್ಞಾನ್... ಎನ್ನುತ್ತಲೇ ದೇಶಕ್ಕೆ ತಂತ್ರಜ್ಞಾನವನ್ನು ಸ್ವಾಗತಿಸಿದರು.

ಅಟಲ್ ಜೀ ಅವರು ಪ್ರಧಾನಿಯಾಗಿದ್ದ ವೇಳೆ ಸಾಂವಿಧಾನಿಕವಾಗಿ ವಿಶೇಷಚೇತನರಿಗೆ ವಿವಿಧ ಸೌಲಭ್ಯ ಒದಗಿಸಿದರು. ಹಾಗಾಗಿ ಇಂದು 18 ವರ್ಷದೊಳಗಿನ 164 ವಿಶೇಷ ಮಕ್ಕಳಿಗೆ ಅವಶ್ಯಕತೆಗೆ ಅನುಗುಣವಾಗಿ ವಾಟರ್ ಬೆಡ್, ವ್ಹೀಲ್ ಛೇರ್, ಸಿ.ಪಿ. ಛೇರ್, ಕ್ರಚಸ್, ಬುದ್ಧಿಮಾಂದ್ಯ ಮಕ್ಕಳಿಗೆ ಎಂ.ಆರ್. ಕಿಟ್, ವಾಕರ್, ಸ್ಟ್ಯಾಂಡಿಂಗ್ ಬೆಡ್, ಕೃತಕ ಕಾಲು, ಏರ್‌ಬೆಡ್ ಸೇರಿದಂತೆ ಇನ್ನಿತರ ಪರಿಕರಗಳನ್ನು ವಿತರಿಸಲಾಗಿದೆ. ವಿಶೇಷಚೇತನ ಮಕ್ಕಳು ಶೈಕ್ಷಣಿಕ ಕ್ಷೇತ್ರದಲ್ಲಿ ಎಲ್ಲಾ ರೀತಿಯಲ್ಲೂ ಸಾಧನೆ ಮಾಡುವ ನಿಟ್ಟಿನಲ್ಲಿ ಸಕಲ ನೆರವು ನೀಡಬೇಕು. ಕಲಿಕಾ ಪ್ರಗತಿಗೆ ಅನುಕೂಲಕರವಾದ ಶೈಕ್ಷಣಿಕ ಪರಿಸರವನ್ನು ನಿರ್ಮಾಣ ಮಾಡಬೇಕು. ವಿಶೇಷ ಮಕ್ಕಳಿಗೆ ಪ್ರೇರಣಾ ಶಕ್ತಿಯಾಗಿ, ಅವರು ಸಾಧನೆ ಮಾಡಲು ಒತ್ತಾಸೆಯಾಗಿ ನಿಲ್ಲಬೇಕು. ಮುಂದಿನ ಒಂದು ವರ್ಷದ ಅವಧಿವರೆಗೆ ವಿಶೇಷ ಮಕ್ಕಳ ಆರೋಗ್ಯದ ಬಗ್ಗೆ ನಾವೇ ಕಾಳಜಿ ವಹಿಸುತ್ತೇವೆ ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಮೇಯರ್ ಶಿವಕುಮಾರ್, ಉಪ ಮೇಯರ್ ರೂಪ ಯೋಗೇಶ್, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ಪಾಲಿಕೆ ಸದಸ್ಯೆ ಗೀತಾ ಯೋಗಾನಂದ, ಡಿಹೆಚ್‌ಓ ಡಾ.ಕೆ.ಹೆಚ್.ಪ್ರಸಾದ್, ಟಿಹೆಚ್‌ಓ ಡಾ.ರಾಜೇಶ್ವರಿ, ಪಾಲಿಕೆಯ ಹೆಚ್ಚುವರಿ ಆಯುಕ್ತೆ ಎಂ.ಜೆ.ರೂಪಾ, ಶಿಕ್ಷಣ ಇಲಾಖೆಯ ಶ್ರೀಕಂಠಶಾಸ್ತ್ರೀ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿ ಯಾದ ಮಧುಸೂದನ್, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಅಧಿಕಾರಿ ಮಾಲಿನಿ, ಮುಖಂಡರಾಗಳಾದ ವಡಿವೇಲು, ಗಿರೀಶ್, ಮೈಪು ರಾಜೇಶ್, ಸತೀಶ್, ಗೋಪಾಲ್, ಸಂಪತ್, ಪ್ರಸನ್ನ, ರಾಜೀವ್, ರೋಹಿತ್, ಪಾಪಣ್ಣ, ರವೀಂದ್ರ, ಜಗದೀಶ್, ರಾಮು, ಜಯಂತಿ, ರೂಪ, ಸುವರ್ಣ, ಪ್ರಫುಲ್ಲ, ದೀಪ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಮತ್ತು ಸ್ಥಳೀಯ ನಿವಾಸಿಗಳು ಪಾಲ್ಗೊಂಡಿದ್ದರು.

ಬೆಳವಾಡಿಯ ಸಮಾಧಿ ಸ್ಥಳದಲ್ಲಿ ದಿ.ಪ್ರತೀಪ್ ಪುತ್ಥಳಿ ಅನಾವರಣ

ನನ್ನ ಗೆಲುವಿನ ಹಿಂದೆ ಪ್ರತೀಪ್ ಶ್ರಮವೂ ಇತ್ತು

ಶಾಸಕ ಜಿ.ಟಿ.ದೇವೇಗೌಡರಿಂದ ಸ್ಮರಣೆ

ಮೈಸೂರು, ಡಿ. 25(ಆರ್‌ಕೆಬಿ)– ಜೆಡಿಎಸ್ ಮುಖಂಡರು, ಬೆಳವಾಡಿ ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷರೂ ಆದ ಬೆಳವಾಡಿ ಶಿವಮೂರ್ತಿ ಹಾಗೂ ಮೈಸೂರು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ಭಾಗ್ಯ ಶಿವಮೂರ್ತಿ ಅವರ ಪುತ್ರ ದಿ. ಪ್ರತೀಪ್ ಅವರ ಪುತ್ಥಳಿ ಅನಾವರಣ ಭಾನುವಾರ ನೆರವೇರಿತು. ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅವರು ಪುತ್ಥಳಿ ಅನಾವರಣಗೊಳಿಸಿದರು.

ವರ್ಷದ ಹಿಂದೆ ನಿಧನರಾಗಿದ್ದ ಪ್ರತೀಪ್ ಅವರ ಸಮಾಧಿ ಸ್ಥಳದಲ್ಲೇ ಬೆಳವಾಡಿಯ ಶಿವಮೂರ್ತಿ ಅವರ ಜಮೀನಿನಲ್ಲಿ ಅವರ ಪುತ್ಥಳಿಯನ್ನು ಸ್ಥಾಪಿಸಲಾಗಿದೆ. ಶಾಸಕ ಜಿ.ಟಿ.ದೇವೇಗೌಡ, ನಗರಪಾಲಿಕೆ ಮಾಜಿ ಸದಸ್ಯ ಸಿ.ಮಹದೇಶ ಸೇರಿದಂತೆ ಅನೇಕ ರಾಜಕೀಯ ಮುಖಂಡರು ಸ್ಥಳಕ್ಕೆ ಭೇಟಿ ನೀಡಿ, ಪ್ರತೀಕ್ ಅವರ ಪುತ್ಥಳಿಗೆ ಪುಷ್ಪ ನಮನ ಸಲ್ಲಿಸಿದರು.

ಪುತ್ಥಳಿ ಅನಾವರಣಗೊಳಿಸಿದ ಬಳಿಕ ಮಾತನಾಡಿದ ಶಾಸಕ ಜಿ.ಟಿ.ದೇವೇಗೌಡರು, ಜೆಡಿಎಸ್ ಪಕ್ಷದ ಮುಖಂಡ ಬೆಳವಾಡಿ ಶಿವಮೂರ್ತಿ ಅವರ ಪುತ್ರ ಪ್ರತೀಪ್ ದೈವಾಧೀನರಾಗಿ ಒಂದು ವರ್ಷವಾಯಿತು. ವರ್ಷದಿಂದ ಅವರ ಯಾವುದೇ ಕಾರ್ಯಕ್ರಮ ಮಾಡಿರಲಿಲ್ಲ. ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರಿಗೂ ಈ ಕಾರ್ಯಕ್ರಮಕ್ಕೆ ಆಹ್ವಾನ ನೀಡಿದ್ದಾರೆ. ಪಂಚರತ್ನ ಯಾತ್ರೆಯಲ್ಲಿ ಭಾಗವಹಿಸಿರುವ ಅವರಿಗೆ ಬರಲಾಗಿಲ್ಲ. ಶಿವಮೂರ್ತಿ ಅವರ ಮನೆಗೆ ಭೇಟಿ ನೀಡುವುದಾಗಿ ಸಂದೇಶ ಕಳಿಸಿದ್ದಾರೆ ಎಂದು ಹೇಳಿದರು.

ಪ್ರತೀಪ್ ಅತ್ಯಂತ ಬುದ್ಧಿವಂತ, ಪ್ರಜ್ಞಾವಂತ. ಮನೆಯ ಎಲ್ಲಾ ವ್ಯವಹಾರಗಳನ್ನು ನಿಭಾಯಿಸಿಕೊಂಡು ಹೋಗುವ



ಶಕ್ತಿ ಹೊಂದಿದ್ದರು. 2018ರ ಚುನಾವಣೆಯಲ್ಲಿ ಅವರು ಜನರನ್ನು ಸಂಘಟಿಸಿ ನನ್ನ ಗೆಲುವಿಗೆ ಕಾರಣರಾಗಿದ್ದರು. ಪ್ರತೀಪ್ ಹೆಸರು ತಾಲೂಕಿನಾದ್ಯಂತ ಉಳಿಯುವ ರೀತಿಯಲ್ಲಿ ಅವರ ತಂದೆ–ತಾಯಿ ಉತ್ತಮ ಕೆಲಸ ಮಾಡಿದ್ದಾರೆ. ಪ್ರತೀಪ್ ಅವರ ಜನಪರ ಕೆಲಸವನ್ನು ತಂದೆ ಶಿವಮೂರ್ತಿ ಮತ್ತು ತಾಯಿ ಭಾಗ್ಯ ಶಿವಮೂರ್ತಿ ಮುಂದುವರಿಸಿ ಕೊಂಡು ಹೋಗಲಿ ಎಂದು ಹಾರೈಸಿದರು.

ಎಂತಹ ಸಂದರ್ಭ ಎದುರಾದರೂ ಅದನ್ನು ಧೈರ್ಯವಾಗಿ ಎದುರಿಸಬೇಕು. ಹುಟ್ಟು ಆಕಸ್ಮಿಕ, ಸಾವು ನಿಶ್ಚಿತ. ಆದರೆ ಮಾಡಿದ ತಪ್ಪನ್ನು ತಿದ್ದಿಕೊಂಡು ಹೋಗುವುದು ಒಳಿತು ಎಂದು ತಿಳಿಸಿದರು. ಪ್ರತೀಪ್ ವಾರ್ಷಿಕ ಕಾರ್ಯಕ್ರಮ, ಪುತ್ಥಳಿ ಅನಾವರಣ ಕಾರ್ಯಕ್ರಮದ ಅಂಗವಾಗಿ ಬೆಳವಾಡಿಯ ಶಿವಮೂರ್ತಿಗಳ ತೋಟದಲ್ಲಿ ಸಹಸ್ರಾರು ಜನರು ನೆರೆದಿದ್ದು,ಎಲ್ಲರಿಗೂ ಊಟದ ವ್ಯವಸ್ಥೆ ಮಾಡಲಾಗಿತ್ತು.

ಟಾಲಿವುಡ್ ಹಿರಿಯ ನಟ ಚಲಪತಿ ರಾವ್ ವಿಧಿವಶ

ಹೈದರಾಬಾದ್, ಡಿ.25– ತೆಲುಗು ಚಿತ್ರರಂಗದ ಹಿರಿಯ ನಟ ಚಲಪತಿ ರಾವ್ (78) ಅವರು ಶನಿವಾರ ತಡರಾತ್ರಿ ನಿಧನರಾಗಿದ್ದಾರೆ, ಹೃದಯಾಘಾತದಿಂದ ಬಂಜಾರ ಹಿಲ್ಸ್, ಎಂಎಲ್‌ಎ ಕಾಲೋನಿಯಲ್ಲಿರುವ ತಮ್ಮ ಪುತ್ರ ರವಿಬಾಬು ಅವರ ನಿವಾಸದಲ್ಲಿ ಚಲಪತಿ ರಾವ್ ಅವರು ಕೊನೆಯುಸಿರೆಳೆದಿದ್ದಾರೆಂದು ತಿಳಿದುಬಂದಿದೆ.




ಚಲಪತಿ ರಾವ್ ಅವರ ಮಗ ರವಿಬಾಬು ಕೂಡ ತೆಲುಗು ಚಿತ್ರರಂಗದಲ್ಲಿ ನಟ, ನಿರ್ದೇಶಕ ಮತ್ತು ನಿರ್ಮಾಪಕರಾಗಿದ್ದಾರೆ.

ಪೋಷಕ ನಟ ಮತ್ತು ಖಳನಟ ಪಾತ್ರಗಳಿಗೆ ಹೆಸರಾದ ಚಲಪತಿ ರಾವ್ ಅವರು 600ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದರು.

ತೆಲುಗು ಸ್ಟಾರ್ ನಟರಾದ ಎನ್‌ಟಿ ರಾಮರಾವ್, ಕೃಷ್ಣ, ಚಿರಂಜೀವಿ, ನಂದಮುರಿ ಬಾಲಕೃಷ್ಣ, ಪವನ್ ಕಲ್ಯಾಣ್, ವೆಂಕಟೇಶ್, ಅಕ್ಕಿನೇನಿ ನಾಗಾರ್ಜುನ, ಜ್ಯೂ ಎನ್‌ಟಿಆರ್, ಮಹೇಶ್ ಬಾಬು ಅಭಿನಯಿಸಿದ್ದ ಹಲವು ಸೂಪರ್ ಹಿಟ್ ಚಿತ್ರಗಳಲ್ಲಿ ಚಲಪತಿ ರಾವ್ ಕಾಣಿಸಿಕೊಂಡಿದ್ದರು.

ರಾಜಕೀಯ ಮುಖಂಡರು ಸೇರಿದಂತೆ ಚಿತ್ರರಂಗದ ಗಣ್ಯರು ಸಂತಾಪ ಸೂಚಿಸಿದ್ದಾರೆ.



ಅಖಿಲ ಕರ್ನಾಟಕ ಡಾ.ಮಲ್ಲಿಕಾರ್ಜುನ ಖರ್ಗೆ ಅಭಿಮಾನಿಗಳ ಸಂಘದ 2023ನೇ ಸಾಲಿನ ಕ್ಯಾಲೆಂಡರ್ ಅನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬೆಂಗಳೂರಿನ ತಮ್ಮ ನಿವಾಸದಲ್ಲಿ ಬಿಡುಗಡೆಗೊಳಿಸಿದರು. ಈ ವೇಳೆ ಸಂಘದ ರಾಜ್ಯಾಧ್ಯಕ್ಷರೂ ಆದ ನಾಗವಾಲ ಗ್ರಾಪಂ ಅಧ್ಯಕ್ಷ ಸಿ.ನರೇಂದ್ರ, ನಾಗವಾಲ ಮಹೇಶ್, ಗ್ರಾಪಂ ಸದಸ್ಯರಾದ ಸೀಗಳ್ಳಿ ಕುಮಾರ್, ಹೊಸಕಾಮನಕೊಪ್ಪಲು ರಮೇಶ್, ನಾಗವಾಲ ಮಂಜು, ರೈಲ್ವೆ ಮಂಡಳಿ ಮಾಜಿ ಸದಸ್ಯ ಬಂಡಿಪಾಳ್ಯ ವಿಜಯ್‌ಕುಮಾರ್, ಯೂತ್ ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿಳಿಕೆರೆ ಸ್ವಾಮಿ, ರಾಜ್ಯ ಕಾರ್ಯದರ್ಶಿ (ಕಾರ್ಮಿಕ ವಿಭಾಗ) ಹೆಚ್.ಡಿ.ಕೋಟೆ ಸುರೇಶ್, ಜಿಲ್ಲಾ ಉಪಾಧ್ಯಕ್ಷ ಪುಟ್ಟರಾಜು ಇನ್ನಿತರರಿದ್ದರು.

ಹುಯಿಲಾಳು ರಾಮಸ್ವಾಮಿ ಮಾಡಿರುವ ಆರೋಪ ಸತ್ಯಕ್ಕೆ ದೂರ

ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕಿ ಕೆ.ಎನ್. ಸುಧಾಮಣಿ ಸ್ಪಷ್ಟನೆ

ಮೈಸೂರು, ಡಿ. 25– ತಾವು ನಿಗಮದ ಫಲಾನುಭವಿಗಳನ್ನು ವರ್ಷಾನುಗಟ್ಟಲೆ ಅಲೆಸುತ್ತಿರುವುದಾಗಿಯೂ ಮಹಿಳಾ ಸಂಘದ ಸದಸ್ಯರಿಗೆ ತೊಂದರೆ ಕೊಡುತ್ತಿರುವುದಾಗಿಯೂ ಹುಯಿಲಾಳು ರಾಮಸ್ವಾಮಿ ಮತ್ತಿತರರು ಶಾಸಕ ಜಿ.ಟಿ. ದೇವೇಗೌಡರಿಗೆ ಸಲ್ಲಿಸಿರುವ ಮನವಿಯಲ್ಲಿ ಆರೋಪಿಸಿರುವುದು ಸತ್ಯಕ್ಕೆ ದೂರವಾದ ವಿಚಾರ ಎಂದು ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕಿ ಕೆ.ಎನ್. ಸುಧಾಮಣಿ ಸ್ಪಷ್ಟಪಡಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ತಾವು ಈ ಕಚೇರಿಗೆ ವರ್ಗಾವಣೆಯಾಗಿ ಬಂದು ಕೇವಲ 3 ತಿಂಗಳಷ್ಟೇ ಆಗಿದೆ ತಾವು ಬಂದ ನಂತರ ಎಲ್ಲಾ ಫಲಾನುಭವಿಗಳಿಗೂ ಶೀಘ್ರವಾಗಿಯೇ ಸವಲತ್ತುಗಳನ್ನು ಒದಗಿಸುತ್ತಿರುವುದಾಗಿ ತಿಳಿಸಿದ್ದಾರೆ.

ಶಾಸಕರಿಗೆ ದೂರು ನೀಡಿರುವ ನಿಯೋಗದಲ್ಲಿರುವ ಹುಯಿಲಾಳು ರಾಮಸ್ವಾಮಿ ಮಾತ್ರ ಫಲಾನುಭವಿಯಾಗಿದ್ದು, ಅವರ ಜೊತೆ ಬಂದ ಬೇರೆ ಯಾರೂ ನಿಗಮದ ಫಲಾನುಭವಿಗಳಲ್ಲ ಎಂದಿರುವ ಅವರು, ರಾಮಸ್ವಾಮಿಯವರ ಪತ್ನಿ ಸುನೀತಾ ಅವರು 2019ರ ಜುಲೈ 20ರಂದು ನೇರ ಸಾಲ ಯೋಜನೆಯಡಿ ಹೈನುಗಾರಿಕೆ ಉದ್ದೇಶಕ್ಕೆ ಸಾಲ ಪಡೆದಿದ್ದಾರೆ. ಹೀಗಿದ್ದರೂ ರಾಮಸ್ವಾಮಿಯವರು ಮತ್ತೇ ಗಂಗಾ ಕಲ್ಯಾಣ ಯೋಜನೆಯಡಿ ಸೌಲಭ್ಯಕ್ಕೆ ಮತ್ತೆ ಅರ್ಜಿ ಸಲ್ಲಿಸಿದ್ದಾರೆ. ಒಂದು ಕುಟುಂಬಕ್ಕೆ ಒಂದೇ ಸೌಲಭ್ಯ ಎಂದು ಸರ್ಕಾರಿ ಆದೇಶವಿದ್ದು ನಿಯಮಗಳ ಪ್ರಕಾರ ಮತ್ತೆ ಸೌಲಭ್ಯ ನೀಡಲು ಅವಕಾಶವಿಲ್ಲದ ಕಾರಣ ರಾಮಸ್ವಾಮಿಯವರಿಗೆ ಅಕ್ಟೋಬರ್ 17ರಂದು ಹಿಂಬರಹ ನೀಡಲಾಗಿದೆ ಎಂದಿರುವ ಅವರು, ಈ ಕಾರಣದಿಂದ ರಾಮಸ್ವಾಮಿ ನಮ್ಮ ಕಚೇರಿಗೆ ಬಂದು ತಮ್ಮನ್ನು ಏಕವಚನದಿಂದ ಮಾತನಾಡಿ, ಅಸಭ್ಯ ವರ್ತನೆ ತೋರಿದ್ದಾರೆ. ತಮ್ಮ ಮೇಲಿನ ವೈಯಕ್ತಿಕ ದ್ವೇಷದಿಂದ ಅವರು ಶಾಸಕರಿಗೆ ಸತ್ಯಕ್ಕೆ ದೂರವಾದ ದೂರನ್ನು ನೀಡಿದ್ದಾರೆ ಎಂದು ಸುಧಾಮಣಿ ತಿಳಿಸಿದ್ದಾರೆ.

ಹೊಸ ವರ್ಷಾಚರಣೆಗೆ ರಾತ್ರಿ 1ರವರೆಗೆ ಅವಕಾಶ ಕಲ್ಪಿಸಲು ಚಿಂತನೆ

● ಪೊಲೀಸ್ ಆಯುಕ್ತ ರಮೇಶ್ ಭರವಸೆ ● ಕ್ರಿಮಿನಲ್‌ಗಳಿಗೆ ಕಡಿವಾಣ ಹಾಕಲು ವಾಹನ ತಪಾಸಣೆ ಅವಶ್ಯ ● ಅಪ್ರಾಪ್ತರಿಗೆ ರೂಂಗಳ ನೀಡಬೇಡಿ ● ಹೋಟೆಲ್ ಮಾಲೀಕರು, ಸಾರ್ವಜನಿಕರೊಂದಿಗೆ ಪೊಲೀಸ್ ಆಯುಕ್ತರ ಸಂವಾದ

ಮೈಸೂರು, ಡಿ.25(ಎಸ್‌ಪಿಎನ್)–ಮೈಸೂರಿನಲ್ಲಿ ಹೊಸ ವರ್ಷ ಆಚರಣೆಗೆ ರಾತ್ರಿ 1 ಗಂಟೆಯವರೆಗೆ ಷರತ್ತು ಬದ್ಧ ಅನುಮತಿ ನೀಡುವ ಸಂಬಂಧ ಚರ್ಚಿಸಿ ತೀರ್ಮಾನಿಸಲಾಗುವುದು ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ರಮೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಕಚೇರಿ ಆವರಣದಲ್ಲಿ ಅಪರಾಧ ತಡೆ ಮಾಸಾಚರಣೆ ಹಿನ್ನೆಲೆಯಲ್ಲಿ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೈಸೂರಿಗೆ ದೇಶ, ವಿದೇಶಗಳಿಂದ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಾರೆ. ಜ.2ರವರೆಗೆ ಎಲ್ಲಾ ಹೋಟೆಲ್ ಬುಕ್ ಆಗಿದ್ದು, ಪೊಲೀಸರು ಸದಾ ಅಲರ್ಟ್ ಆಗಿರಲು ಹೇಳಿದ್ದೇನೆ. ಡ್ರಿಂಕ್ ಅಂಡ್ ಡ್ರೈವ್, ಸಂಚಾರಿ ನಿಯಮ ಉಲ್ಲಂಘನೆ ಸೇರಿದಂತೆ ಇತರೆ ನಿಯಮ ಉಲ್ಲಂಘನೆ ಮಾಡುವವರ ವಿರುದ್ಧ ಹದ್ದಿನ ಕಣ್ಣಿಡುವಂತೆ ತಿಳಿಸಿದ್ದೇನೆ. ಡಿಸೆಂಬರ್ 31ರ ರಾತ್ರಿ 1 ಗಂಟೆವರೆಗೆ ಹೊಸ ವರ್ಷ ಆಚರಣೆಗೆ ಅವಕಾಶ ನೀಡುವ ಬಗ್ಗೆ ಚರ್ಚಿಸಿ ಕ್ರಮ ವಹಿಸಲಾಗುವುದು ಎಂದರು.

ಪೊಲೀಸರು ಪ್ರವಾಸಿಗರ ವಾಹನಗಳನ್ನು ಚೆಕ್ ಮಾಡಿ ದಂಡ ವಿಧಿಸುವುದಕ್ಕೂ ಆಕ್ಷೇಪವಿದೆ. ಅಲ್ಲದೆ, ಸಂಚಾರಿ ಪೊಲೀಸರು ಪ್ರವಾಸಿ ತಾಣದ ಸುತ್ತಮುತ್ತ ನಿಲ್ಲಿಸುತ್ತಿರುವ ಪ್ರವಾಸಿಗರ ವಾಹನಗಳಿಗೆ ಹೆಚ್ಚಿನ ದಂಡ ವಿಧಿಸುತ್ತಿದ್ದಾರೆ ಎಂಬ ಆರೋಪವಿದೆ ಆರೋಪವಿದ್ದರೂ ಮೈಸೂರಿಗೆ ಆಗಮಿಸುವ ಕ್ರಿಮಿನಲ್‌ಗಳಿಗೆ ಕಡಿವಾಣ ಹಾಕಲು ತಪಾಸಣೆ ಅನಿವಾರ್ಯ. ಸಂಚಾರಿ ಪೊಲೀಸರು ಅಧಿಕ ದಂಡ ವಸೂಲಿ ಮಾಡುವುದರಿಂದ ಮೈಸೂರಿನ ಪೊಲೀಸರಿಗೇನು ಕಿರೀಟ ಬರುವುದಿಲ್ಲ. ಆದರೆ, ಜನರ ಸುರಕ್ಷತೆ ಮುಖ್ಯ ಎಂದರು.

ಮೈಸೂರು ಬೆಳವಣಿಗೆ ಹೊಂದುತ್ತಿರುವುದರಿಂದ ಕ್ರಿಮಿನಲ್‌ಗಳು ತಮ್ಮ ಚಟುವಟಿಕೆ ವಿಸ್ತರಿಸಲು ಮೈಸೂರಿನತ್ತ ಆಗಮಿಸುತ್ತಿದ್ದಾರೆ. ಅಂತಹವರನ್ನು ಗುರುತಿಸುವುದು ಸವಾಲಿನ ವಿಷಯ. ಇತ್ತೀಚೆಗೆ ಸುರಕ್ಷಾ ಯೋಜನೆ ಜಾರಿಗೆ ತರಲಾಗಿದೆ. ಹೋಟೆಲ್‌ಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರ ಮನೆ ವಿಳಾಸಗಳನ್ನು ದೃಢೀಕರಿಸಲು ಸುರಕ್ಷಾ ಅರ್ಜಿಯನ್ನು ಭರ್ತಿ ಮಾಡಲು, ಪೊಲೀಸರೊಂದಿಗೆ ಮನೆಗಳ ಮಾಲೀಕರು ಸ್ಪಂದಿಸುವಂತೆ ಮನವಿ ಮಾಡಿದರು.

ಅಪ್ರಾಪ್ತರಿಗೆ ರೂಂ ನೀಡಬೇಡಿ: ಅಪ್ರಾಪ್ತ ವಯಸ್ಸಿನವರು, ಗುರುತು–ಪರಿಚಯವಿಲ್ಲದವರಿಗೆ ಕೆಲಸ ನೀಡಬೇಡಿ, ಬೆಂಕಿ ನಂದಿಸುವ ಮಾರ್ಗಸೂಚಿಗಳನ್ನು ಪಾಲಿಸಬೇಕು. ಇದರಿಂದ ಲಕ್ಷಾಂತರ ರೂ. ಬಂಡವಾಳ ಹಾಕಿ, ಸಣ್ಣ–ಪುಟ್ಟ ತಪ್ಪುಗಳಿಂದ ನಿಮ್ಮ ಉದ್ಯಮಕ್ಕೆ ತೊಂದರೆ ತಂದುಕೊಳ್ಳಬೇಡಿ ಎಂದು ಸಲಹೆ ನೀಡಿದ ಆಯುಕ್ತರು, ಕಾಲ ಕಾಲಕ್ಕೆ ಪೊಲೀಸ್ ಇಲಾಖೆ



ರೂಪಿಸುವ ಮಾರ್ಗಸೂಚಿಗಳನ್ನು ತಪ್ಪದೇ ಪಾಲಿಸಿ. ನಗರದ ಹೃದಯ ಭಾಗದಲ್ಲಿರುವ ಪ್ರಮುಖ ಸ್ಥಳಗಳಲ್ಲಿ ಪಾರ್ಕಿಂಗ್ ಸಮಸ್ಯೆಯನ್ನು ಬಗೆಹರಿಸಲು ಜಿಲ್ಲಾಡಳಿತದೊಂದಿಗೆ ಮಾತುಕತೆ ನಡೆಸುತ್ತೇನೆ. ಕೊರೊನಾ ನೀತಿ–ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಅನುಮಾನಾಸ್ಪದ ವ್ಯಕ್ತಿಗಳಿಗೆ, ಅಪ್ರಾಪ್ತರಿಗೆ ಹಾಗೂ ನೂತನ ವರ್ಷಾಚರಣೆ ನೆಪದಲ್ಲಿ ಅನೈತಿಕ ಚಟುವಟಿಕೆ ನಡೆಸಲು ರೂಂಗಳನ್ನು ನೀಡಬೇಡಿ. ಏಕೆಂದರೆ, ಇತ್ತೀಚೆಗೆ ಮಂಗಳೂರು ಕುಕ್ಕರ್ ಪ್ರಕರಣ ಆದ ಮೇಲೆ ಕೇಂದ್ರ ಗೃಹ ಇಲಾಖೆ ಸ್ಪಷ್ಟ ಮಾರ್ಗಸೂಚಿ ರೂಪಿಸಿದ್ದು, ಆ ನಿಯಮವನ್ನು ಮೈಸೂರಿನ ಎಲ್ಲಾ ಬಾರ್ ಅಂಡ್ ರೆಸ್ಟೋರೆಂಟ್ ಮಾಲೀಕರು ಪಾಲಿಸಬೇಕು ಎಂದು ತಿಳಿಸಿದರು.

ಪ್ರಮುಖ ವೃತ್ತದಲ್ಲಿ ಭಿಕ್ಷಾಟನೆ: ಇದಕ್ಕೂ ಮುನ್ನ ಸಂವಾದದಲ್ಲಿ ನಗರದ ಹೃದಯ ಭಾಗದ ಪಾರ್ಕಿಂಗ್ ಸ್ಥಳದಲ್ಲಿ ಪ್ರವಾಸಿ ವಾಹನಗಳಿಗೆ ಹೆಚ್ಚು ಹೆಚ್ಚು ದಂಡ ವಿಧಿಸಬೇಡಿ. ಇದರಿಂದ ಮೈಸೂರಿಗೆ ಬರುವ ಪ್ರವಾಸಿಗರ ಸಂಖ್ಯೆ ಕಡಿಮೆಯಾಗುತ್ತದೆ. ದೇವರಾಜ ಅರಸ್ ರಸ್ತೆ, ಗಾಂಧಿಚೌಕದ ಅಂಗಡಿ ಮಾಲೀಕರು ಮತ್ತು ಕಾರ್ಮಿಕರು ವಾಹನಗಳನ್ನು ದಿನಪೂರ್ತಿ ನಿಲ್ಲಿಸುವುದರಿಂದ ಪ್ರವಾಸಿಗರ ವಾಹನಗಳಿಗೆ ಪಾರ್ಕಿಂಗ್ ಸಮಸ್ಯೆಯಾಗುತ್ತಿದೆ. ಅಲ್ಲದೆ, ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಭಿಕ್ಷಾಟನೆ ಮಾಡುವವರು ಹಾಗೂ ಸಿಗ್ನಲ್‌ನಲ್ಲಿ ನಿಂತು ವ್ಯಾಪಾರ ಮಾಡುವವರು ಪ್ರವಾಸಿಗರೊಂದಿಗೆ ಅನುಚಿತವಾಗಿ ವರ್ತಿಸುತ್ತಿರುವ ಬಗ್ಗೆ ಅನೇಕ ದೂರುಗಳು ಬರುತ್ತಿವೆ. ಇದನ್ನು ತಪ್ಪಿಸುವಂತೆ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣ್‌ಗೌಡ ಮನವಿ ಮಾಡಿದರು.

ಈ ವೇಳೆ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಮುತ್ತುರಾಜ್, ಸಂಚಾರ ಮತ್ತು ಅಪರಾಧ ವಿಭಾಗದ ಡಿಸಿಪಿ ಎಂ.ಎಸ್.ಗೀತಾ ಪ್ರಸನ್ನ, ಹೋಟೆಲ್ ಮಾಲೀಕರ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕರ್ನಾಟಕ ಗಡಿಯ ಕೋಟೆ ಗೆಲ್ಲಲು ಪೈಪೋಟಿ






ಅನಿಲ್ ಚಿಕ್ಕಮಾದು


ಕೃಷ್ಣಸ್ವಾಮಿ


ದೊಡ್ಡ ನಾಯಕ


ಎಂ. ಅಪ್ಪಣ್ಣ


ಕೃಷ್ಣ ನಾಯಕ್


ಬಾಬು ನಾಯಕ್


ದೇವದತ್ತ


ಜಯಪ್ರಕಾಶ್


ಜಗದಾಂಬ

ಕೋಟೆಯ ಶಾಸಕರ ಪರಂಪರೆ

- 1962 – ಪೀರಣ್ಣ – ಸ್ವತಂತ್ರ ಪಾರ್ಟಿ
- 1967 – ಪೀರಣ್ಣ – ಕಾಂಗ್ರೆಸ್
- 1972 – ಪೀರಣ್ಣ – ಸಂಸ್ಥಾ ಕಾಂಗ್ರೆಸ್
- 1978 – ಸುಶೀಲ – ಕಾಂಗ್ರೆಸ್
- 1983 – ಚೆಲುವಯ್ಯ – ಜನತಾ ಪಕ್ಷ
- 1985 – ಎಂ. ಶಿವಣ್ಣ – ಕಾಂಗ್ರೆಸ್
- 1989 – ಎಂ.ಪಿ. ವೆಂಕಟೇಶ್ – ಸಮಾಜವಾದಿ ಪಕ್ಷ
- 1994 – ಎನ್. ನಾಗರಾಜು – ಜನತಾ ದಳ
- 1999 – ಎಂ. ಶಿವಣ್ಣ – ಕಾಂಗ್ರೆಸ್
- 2004 – ಎಂ.ಪಿ. ವೆಂಕಟೇಶ್ – ಜೆಡಿಎಸ್
- 2008 – ಬೀಚನಹಳ್ಳಿ ಚಿಕ್ಕಣ್ಣ – ಕಾಂಗ್ರೆಸ್
- 2013 – ಎಸ್. ಚಿಕ್ಕಮಾದು – ಜೆಡಿಎಸ್
- 2018 – ಅನಿಲ್ ಚಿಕ್ಕಮಾದು – ಕಾಂಗ್ರೆಸ್

ಮಂಜು ಬೀಚನಹಳ್ಳಿ

ಹೆಚ್.ಡಿ.ಕೋಟೆ, ಡಿ.25– ವನಸಿರಿ ನಾಡು, ಜಲಾಶಯಗಳ ಬೀಡು ಎಂದೇ ಕರೆಯಲ್ಪಡುವ, ಆದರೆ ಅಭಿವೃದ್ಧಿಯಲ್ಲಿ ಹಿಂದುಳಿದ ತಾಲೂಕು ಎಂದು ಪರಿಗಣಿತ ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರ ಕೇರಳದೊಂದಿಗೆ ಗಡಿ ಹಂಚಿಕೊಂಡಿದೆ. ಈ ಕ್ಷೇತ್ರದಲ್ಲಿ ಬುಡಕಟ್ಟು ಸಮುದಾಯ ಹೆಚ್ಚಾಗಿರುವ ಕಾರಣದಿಂದ ಇದನ್ನು ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಲಾಗಿದೆ. ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕುಗಳನ್ನು ಒಳಗೊಂಡಿರುವ ಈ ಕ್ಷೇತ್ರ ಮೈಸೂರು ಜಿಲ್ಲೆಗೆ ಸೇರಿದ್ದರೂ, ಚಾಮರಾಜನಗರ ಲೋಕಸಭಾ ವ್ಯಾಪ್ತಿಗೆ ಒಳಪಟ್ಟಿದೆ.

ಈ ಕ್ಷೇತ್ರದಲ್ಲಿ ನಡೆದಿರುವ 13 ಚುನಾವಣೆಗಳಲ್ಲಿ 6ರಲ್ಲಿ ಕಾಂಗ್ರೆಸ್ ಗೆಲುವು ಸಾಧಿಸುವ ಮೂಲಕ ಪ್ರಥಮ ಸ್ಥಾನದಲ್ಲಿದ್ದರೆ, ಜನತಾ ಪರಿವಾರದ ಅಭ್ಯರ್ಥಿಗಳು 4 ಬಾರಿ ಗೆದ್ದಿದ್ದಾರೆ. ಸಮಾಜವಾದಿ ಪಕ್ಷವೂ ಈ ಕ್ಷೇತ್ರದಲ್ಲಿ ಖಾತೆ ತೆರೆದಿದ್ದು, ಒಮ್ಮೆ ಸಂಸ್ಥಾ ಕಾಂಗ್ರೆಸ್ ಹಾಗೂ ಸ್ವತಂತ್ರ ಪಾರ್ಟಿ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ. ಬಿಜೆಪಿ ಈವರೆವಿಗೂ ಈ ಕ್ಷೇತ್ರದಲ್ಲಿ ಗೆಲುವಿನ ಸವಿ ಕಂಡಿಲ್ಲ.

ಈ ಕ್ಷೇತ್ರ ಆರಂಭದಲ್ಲಿ ಪರಿಶಿಷ್ಟ ಜಾತಿಗೆ ಮೀಸಲಾಗಿದ್ದು, ಇಲ್ಲಿಂದ ಗೆಲುವು ಸಾಧಿಸಿದ್ದ ಎಂ.ಶಿವಣ್ಣ ಸಚಿವ ಸ್ಥಾನ ಪಡೆದಿದ್ದರು. ಪೀರಣ್ಣ ಅವರ ಪುತ್ರ ಎಂ.ಪಿ. ವೆಂಕಟೇಶ್ ಎರಡು ಬಾರಿ ಶಾಸಕರಾಗಿದ್ದರು. 2008ರಲ್ಲಿ ಕ್ಷೇತ್ರ ಮರುವಿಂಗಡಣೆ ಆದಾಗ ಈ ಕ್ಷೇತ್ರವನ್ನು ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಿದ್ದು, ನಂತರ ನಡೆದ 3 ಚುನಾವಣೆಗಳ ಪೈಕಿ ಎರಡನ್ನು ಕಾಂಗ್ರೆಸ್ ಗೆದ್ದಿದ್ದರೆ, ಒಮ್ಮೆ ಜೆಡಿಎಸ್ ಗೆಲುವು ಸಾಧಿಸಿದೆ.

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ಪಡೆಯುವ ಸಲುವಾಗಿ ಕಾಂಗ್ರೆಸ್, ಜೆಡಿಎಸ್, ಬಿಜೆಪಿಯಲ್ಲಿ ಆಕಾಂಕ್ಷಿಗಳು ತಮ್ಮದೇ ಧಾಟಿಯಲ್ಲಿ ಲಾಬಿ ನಡೆಸುತ್ತಿದ್ದಾರೆ. ಹಾಲಿ ಶಾಸಕ ಅನಿಲ್ ಚಿಕ್ಕಮಾದು, ಕಾಂಗ್ರೆಸ್‌ನ ನಿಯಮದಂತೆ ಹಾಲಿ ಶಾಸಕರಾಗಿರುವ ತಮಗೇ ಟಿಕೆಟ್ ದೊರೆಯುತ್ತದೆ ಎಂಬ ವಿಶ್ವಾಸದೊಂದಿಗೆ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯದೊಂದಿಗೆ ಮುಂದೆಯೂ ನಾನೇ ಅಭ್ಯರ್ಥಿ ಎಂದು ಬಿಂಬಿಸಿಕೊಳ್ಳುತ್ತಿದ್ದಾರೆ. ಅಲ್ಲದೇ, ಮಂಡಲ ಪಂಚಾಯ್ತಿ ಮಾಜಿ ಅಧ್ಯಕ್ಷ ಎಂ.ಸಿ. ದೊಡ್ಡ ನಾಯಕ ಹಾಗೂ ಯಳಂದೂರಿನ ಬಾಬು ನಾಯಕ್ ಕೂಡ ಕಾಂಗ್ರೆಸ್ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿದ್ದಾರೆ.

ಕ್ಷೇತ್ರವು ಪರಿಶಿಷ್ಟ ಪಂಗಡಕ್ಕೆ ಮೀಸಲಾದ ನಂತರ 2008ರಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆಲುವು ಸಾಧಿಸಿದ್ದ ಬೀಚನಹಳ್ಳಿ ಚಿಕ್ಕಣ್ಣ, 2013ರಲ್ಲಿ ಜನತಾ ದಳದಿಂದ ಸ್ಪರ್ಧಿಸಿದ್ದ ಚಿಕ್ಕಮಾದು ವಿರುದ್ಧ ಪರಾಭವಗೊಂಡಿದ್ದರು. ಶಾಸಕರಾಗಿದ್ದಾಗಲೇ ಚಿಕ್ಕಮಾದು ಅವರು ನಿಧನ ಹೊಂದಿದಾಗ ಬೀಚನಹಳ್ಳಿ ಚಿಕ್ಕಣ್ಣ ಕಾಂಗ್ರೆಸ್ ತೊರೆದು ಜೆಡಿಎಸ್ ಸೇರ್ಪಡೆಗೊಂಡರು. ಅವರಿಗೆ ಜೆಡಿಎಸ್ ಟಿಕೆಟ್ ದೊರೆಯುತ್ತದೆ ಎಂಬ ಮಾತುಗಳು ವ್ಯಾಪಕವಾಗಿ ಕೇಳಿ ಬಂದ ಹಿನ್ನೆಲೆಯಲ್ಲಿ ಚಿಕ್ಕಮಾದು ಪುತ್ರ ಅನಿಲ್ ಚಿಕ್ಕಮಾದು ಅವರು ಸಿದ್ದರಾಮಯ್ಯನವರ ನೇತೃತ್ವದಲ್ಲಿ ಕಾಂಗ್ರೆಸ್ ಸೇರ್ಪಡೆಗೊಂಡು ಟಿಕೆಟ್ ಗಿಟ್ಟಿಸುವಲ್ಲಿ ಯಶಸ್ವಿಯಾದದ್ದು ಮಾತ್ರವಲ್ಲದೇ, ಜೆಡಿಎಸ್‌ನಿಂದ ಸ್ಪರ್ಧಿಸಿದ್ದ ಬೀಚನಹಳ್ಳಿ ಚಿಕ್ಕಣ್ಣ ಅವರನ್ನು ಸೋಲಿಸಿ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾದರು.



ಹಾಲಿ ಜೆಡಿಎಸ್‌ನಲ್ಲಿರುವ ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸದಿರಲು ನಿರ್ಧರಿಸಿದ್ದು, ತಮ್ಮ ಪುತ್ರ ಜಯಪ್ರಕಾಶ್‌ಗೆ ಜೆಡಿಎಸ್ ಟಿಕೆಟ್ ಕೊಡಿಸಲು ಕಸರತ್ತು ನಡೆಸುತ್ತಿದ್ದಾರೆ. ಈಗಾಗಲೇ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಮತ್ತು ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾಗಿರುವ ಜೆಡಿಎಸ್‌ನ ಪ್ರಭಾವಿ ನಾಯಕ ಜಿ.ಟಿ. ದೇವೇಗೌಡರು ಹೆಚ್.ಡಿ. ಕೋಟೆ ಅಭ್ಯರ್ಥಿ ಎಂದು ಚಿಕ್ಕಣ್ಣ ಪುತ್ರ ಜಯಪ್ರಕಾಶ್ ಹೆಸರನ್ನು ಮಾಧ್ಯಮಗಳ ಮುಂದೆ ಹೇಳಿದ್ದಾರೆ. ಆದರೂ ಇತ್ತೀಚೆಗೆ ಬಿಡುಗಡೆಯಾದ ಜೆಡಿಎಸ್ ಅಭ್ಯರ್ಥಿಗಳ ಪಟ್ಟಿಯಲ್ಲಿ ಹೆಚ್.ಡಿ.ಕೋಟೆ ಅಭ್ಯರ್ಥಿ ಹೆಸರನ್ನು ಘೋಷಿಸಿಲ್ಲ.

ಸಮಾಜ ಸೇವಕ ಕೆ.ಎಂ. ಕೃಷ್ಣ ನಾಯಕ್ ಕೂಡ ಜೆಡಿಎಸ್‌ನ ಪ್ರಬಲ ಆಕಾಂಕ್ಷಿಯಾಗಿದ್ದು, ಕ್ಷೇತ್ರಾದ್ಯಂತ ಕಳೆದ ಮೂರ್‍ನಾಲ್ಕು ವರ್ಷಗಳಿಂದ ನಿರಂತರವಾಗಿ ಸಾಮಾಜಿಕ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಹೆಸರಿನಲ್ಲಿ ಹೆಚ್.ಡಿ.ಕೋಟೆ ಮತ್ತು ಸರಗೂರಿನಲ್ಲಿ 'ಅಪ್ಪಾಜಿ ಕ್ಯಾಂಟೀನ್' ಪ್ರಾರಂಭಿಸಿ ನಿರಂತರವಾಗಿ ಬಡವರಿಗೆ ಕಡಿಮೆ ದರದಲ್ಲಿ ತಿಂಡಿ–ಊಟ ನೀಡುತ್ತಾ ಬಂದಿದ್ದಾರೆ. ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿಯವರು ಟಿಕೆಟ್ ಕೊಡುವ ಭರವಸೆ ನೀಡಿದ್ದಾರೆ ಎಂದು ಹೇಳಿಕೊಳ್ಳುತ್ತಿರುವ ಅವರು, ಕ್ಷೇತ್ರಾದ್ಯಂತ ಸಮಾಜ ಸೇವೆ ಮೂಲಕ ಮಿಂಚಿನ ಸಂಚಾರ ಮಾಡುತ್ತಿದ್ದಾರೆ.

ಬಿಜೆಪಿಯಿಂದ ಅರಣ್ಯ ಮತ್ತು ವಸತಿ ನಿಗಮದ ಮಾಜಿ ಅಧ್ಯಕ್ಷ ಎಂ. ಅಪ್ಪಣ್ಣ, ಸಮಾಜ ಸೇವಕ ಡಾ. ಹೆಚ್.ವಿ. ಕೃಷ್ಣಸ್ವಾಮಿ ಆಕಾಂಕ್ಷಿಗಳಾಗಿದ್ದು, ಇವರಿಬ್ಬರೂ ತಮಗೇ ಟಿಕೆಟ್ ದೊರೆಯುತ್ತದೆ ಎಂಬ ವಿಶ್ವಾಸದಿಂದ ಕ್ಷೇತ್ರಾದ್ಯಂತ ಕಾರ್ಯಕರ್ತರೊಂದಿಗೆ ಪಕ್ಷ ಸಂಘಟನೆಯಲ್ಲಿ ತೊಡಗಿದ್ದಾರೆ ಈ ನಡುವೆ ಸಮಾಜ ಸೇವಕ ಜಿ.ಎನ್. ದೇವದತ್ತ ಹಾಗೂ ಜಗದಾಂಬ ಅವರುಗಳು ಕ್ಷೇತ್ರದಲ್ಲಿ ಸಂಚರಿಸುತ್ತಿದ್ದು, ಯಾವ ಪಕ್ಷದಿಂದ ಸ್ಪರ್ಧಿಸುತ್ತಾರೆ ಎಂಬುದರ ಬಗ್ಗೆ ಹೇಳಿಕೊಂಡಿಲ್ಲವಾದರೂ ಪಕ್ಷೇತರರಾಗಿಯಾದರೂ ಕಣದಲ್ಲಿ ಉಳಿಯುವ ಸಾಧ್ಯತೆಗಳಿವೆ.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ವೇದ (ಕ): ಬೆ.7ಕ್ಕೆ, ಬೆ.10.05ಕ್ಕೆ, ಮ.1.05ಕ್ಕೆ, ಕಾಂತಾರ (ಕ): ಸಂ.4.15ಕ್ಕೆ, ಧಮಾಕ (ತೆ): ರಾ.7.10ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.9.50ಕ್ಕೆ, ಕನೆಕ್ಟ್ (ತ): ಮ.1.40ಕ್ಕೆ, 18 ಪೇಜಸ್ (ತೆ): ಸಂ.4.05ಕ್ಕೆ, ವೇದ (ಕ): ರಾ.7.05ಕ್ಕೆ, ಕಾಪ (ಮ): ರಾ.10.05ಕ್ಕೆ.
ಸ್ಕ್ರೀನ್ 3	ಹೊಸ ದಿನಚರಿ (ಕ): ಬೆ.10.45ಕ್ಕೆ, ಸರ್ಕಸ್ (ಹಿಂ): ಮ.1.20ಕ್ಕೆ, ರಾ.7.05ಕ್ಕೆ, ರಾ.9.55ಕ್ಕೆ, ವಿಶಾಲ್ ಇನ್ ಲಾಠಿ (ತ): ಸಂ.4.10ಕ್ಕೆ.
ಸ್ಕ್ರೀನ್ 4	ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.10.55ಕ್ಕೆ, ಮ.2.35ಕ್ಕೆ, ಸಂ.6.15ಕ್ಕೆ, ರಾ.9.50ಕ್ಕೆ.

ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1	ವೇದ (ಕ): ಬೆ.9.55ಕ್ಕೆ, ಮ.1.05ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ, 18 ಪೇಜಸ್ (ತೆ): ಸಂ.4.15ಕ್ಕೆ.
ಸ್ಕ್ರೀನ್ 2	ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.11ಕ್ಕೆ, ಮ.2.50ಕ್ಕೆ, ಸಂ.6.40ಕ್ಕೆ, ರಾ.10.30ಕ್ಕೆ,
ಸ್ಕ್ರೀನ್ 3	ಕಾಂತಾರ (ಕ): ಬೆ.11.10ಕ್ಕೆ, ಡಾ.56 (ಕ): ಮ.2.05ಕ್ಕೆ, ವಿಜಯಾನಂದ (ಕ): ಸಂ.4.25ಕ್ಕೆ, ಮೈಸೂರು ಡೈರಿಸ್ (ಕ): ರಾ.7.40ಕ್ಕೆ, ಪಂಚತಾರಂ (ತೆ): ರಾ.10.10ಕ್ಕೆ.
ಸ್ಕ್ರೀನ್ 4	ಗುರುತುಂದ ಶೀತಾಕಾಲಂ (ತೆ): ಬೆ.10.25ಕ್ಕೆ, ರಾ.7.20ಕ್ಕೆ, ನೈ ಸೇಕರ್ ರಿಟರ್ನ್ಸ್ (ತ): ಮ.1.15ಕ್ಕೆ, ಕಾಂತಾರ (ಕ): ಸಂ.4.15ಕ್ಕೆ, ವರಲಾಕು ಮುಕ್ಕಿಯಂ (ತ): ರಾ.10.20ಕ್ಕೆ,

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಓ (ಕ): ಬೆ.10.30ಕ್ಕೆ, ಯಶೋಧಾ (ತೆ): ಮ.1.15ಕ್ಕೆ, ರಾಣಾ (ಕ): ಸಂ.4ಕ್ಕೆ, ಲವ್ ಟುಡೆ (ತ): ಸಂ.6.30ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ರಾ.9.30ಕ್ಕೆ.
ಸ್ಕ್ರೀನ್ 2	ಹುಬ್ಬಳ್ಳಿ ಡಾಬಾ (ಕ): ಬೆ.10.15ಕ್ಕೆ, ಕಾಂತಾರ (ಕ): ಮ.12.45ಕ್ಕೆ, ಸಂ.6.35ಕ್ಕೆ, ದಿಲ್ ಪಸಂದ್ (ಕ): ಮ.3.40ಕ್ಕೆ, ಗಂಧದಗುಡಿ (ಕ): ರಾ.9.30ಕ್ಕೆ.
ಸ್ಕ್ರೀನ್ 3	ಕಾಂತಾರ (ಕ): ಬೆ.10.30ಕ್ಕೆ, ಮ.3.25ಕ್ಕೆ, ಗಂಧದ ಗುಡಿ (ಕ): ಮ.1.25ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.6.20ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 4	ದಿಲ್ ಪಸಂದ್ (ಕ): ಬೆ.10.40ಕ್ಕೆ, ಬನಾರಸ್ (ಕ): ಮ.1.45ಕ್ಕೆ, ಮಿರಲ್ (ತ): ಸಂ.4.45ಕ್ಕೆ, ಗಂಧದ ಗುಡಿ (ಕ): ರಾ.7.15ಕ್ಕೆ, ಲವ್ ಟುಡೆ (ತ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.9.20ಕ್ಕೆ, ಮ.12.30ಕ್ಕೆ, ಮ.1ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ, ದಿ ಬ್ಲ್ಯಾಕ್ ಆಡಮ್ (ಇ): ಬೆ.9.55ಕ್ಕೆ, ಮ.12.45ಕ್ಕೆ, ಸ.7.05ಕ್ಕೆ, ರಾ.9.50ಕ್ಕೆ, ಪ್ರಿನ್ಸ್ (ತ): ಮ.12.40ಕ್ಕೆ, ರಾ.7.10ಕ್ಕೆ ಸರ್ದಾರ್ (ತ): ಬೆ. 9.15ಕ್ಕೆ ಮ.3.45ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ವೇದ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಾಂತಾರ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ವೇದ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಟೆಂಪರ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ವೇದ (ಕ)	4 ಪ್ರದರ್ಶನಗಳು
ಸಂಗಂ	
ಲಾಠಿ (ತ)	4 ಪ್ರದರ್ಶನಗಳು
ಲಿಡೋ	
ಸರ್ಕಸ್ (ಹಿ)	4 ಪ್ರದರ್ಶನಗಳು
ತಿಬ್ಬಾದೇವಿ	
ವೇದ (ಕ)	4 ಪ್ರದರ್ಶನಗಳು
ಪ್ರಭಾ	
ಕಾಂತಾರ (ಕ)	4 ಪ್ರದರ್ಶನಗಳು

ಮೊರಾರ್ಜಿ ಶಾಲೆಯಲ್ಲಿ ವಿದ್ಯುತ್ ಸ್ಪರ್ಶಕ್ಕೆ ಬಾಲಕ ಸಾವು



ನಂಜನಗೂಡು, ಡಿ.25– ವಿದ್ಯುತ್ ಸ್ಪರ್ಶದಿಂದ ಬಾಲಕ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ತಾಲೂಕಿನ ಮಹದೇವ ನಗರದ ಶ್ರೀಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಭಾನುವಾರ ನಡೆದಿದೆ.

ಶಾಲೆಯ ದೈಹಿಕ ಶಿಕ್ಷಕ, ಚಾಮರಾಜನಗರ ತಾಲೂಕಿನ ದೊಡ್ಡರಾಯಪೇಟೆ ಗ್ರಾಮದ ನಿವಾಸಿ ಬಸವಣ್ಣ ಅವರ ಪುತ್ರ ಯುವೀನ್(7) ಸಾವನ್ನಪ್ಪಿದ ಬಾಲಕನಾಗಿದ್ದು, ಈತ ನಂಜನಗೂಡಿನ ದಳವಾಯಿ ಸರ್ಕಾರಿ ಬಾಲಕರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2ನೇ ತರಗತಿ ವ್ಯಾಸಂಗ ಮಾಡುತ್ತಿದ್ದಾನೆ.


ವಸತಿ ಶಾಲೆ ವಸತಿ ಗೃಹದಲ್ಲಿ ವಾಸವಿದ್ದ ಬಸವಣ್ಣ, ಪುತ್ರ ಯುವೀನ್ ಜೊತೆ ಬೆಳಗ್ಗೆ ಶಾಲೆ ಭೋಜನಾಲಯದಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕದಲ್ಲಿ ನೀರು ತರಲು ಹೋಗಿದ್ದರು. ನೀರು ಸಣ್ಣ ಪ್ರಮಾಣದಲ್ಲಿ ಬರುತ್ತಿದ್ದರಿಂದ ಕ್ಯಾನ್‌ನಲ್ಲಿ ಇಟ್ಟು ಮನೆಗೆ ಬಂದಿದ್ದಾರೆ. ಸ್ವಲ್ಪ ಹೊತ್ತಿನ ನಂತರ ಕ್ಯಾನ್ ನೀರು ತುಂಬಿದೆಯೇ ಎಂದು ನೋಡಲು ಹೋದ ಯುವೀನ್ ನೀರಿನ ಪೈಪ್ ಹೊರಗಿಡುವಾಗ ವಿದ್ಯುತ್ ಸ್ಪರ್ಶಿಸಿ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಇದನ್ನು ಗಮನಿಸಿದ ಅಡುಗೆ ಸಿಬ್ಬಂದಿ ಕೂಡಲೇ ಬಸವಣ್ಣ ಅವರಿಗೆ ವಿಷಯ ತಿಳಿಸಿದ್ದು, ತಕ್ಷಣ ಯುವೀನ್‌ನನ್ನು ಚಿಕಿತ್ಸೆಗಾಗಿ ನಂಜನಗೂಡಿನ ಖಾಸಗಿ ಆಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲಿ ಆತ ಸಾವನ್ನಪ್ಪಿದ್ದಾನೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ತಾಲೂಕು ಸರ್ಕಾರಿ ಆಸ್ಪತ್ರೆಗೆ ರವಾನಿಸಲಾಯಿತು.

ಮೃತ ಬಾಲಕನ ತಂದೆ ಬಸವಣ್ಣ ಅವರು, ಶಾಲೆ ಪ್ರಾಂಶುಪಾಲ, ಜಿಲ್ಲಾ ಕ್ರೈಸ್ಟ್ ಅಧಿಕಾರಿ, ನಿಲಯಪಾಲಕ ಹಾಗೂ ಅಡುಗೆ ಸಿಬ್ಬಂದಿ ನಿರ್ಲಕ್ಷ್ಯ ಹಾಗೂ ಬೇಜವಾಬ್ದಾರಿಯಿಂದ ಈ ಅವಘಡ ನಡೆದಿದ್ದು, ನನ್ನ ಮಗನ ಸಾವಿಗೆ ಇವರೇ ಕಾರಣ ಎಂದು ಬಿಳಿಗೆರೆ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಡಿವೈಎಸ್ಪಿ ಗೋವಿಂದರಾಜು, ಸಿಪಿಐ ಲಕ್ಷ್ಮಿಕಾಂತ ತಳವಾರ್, ಎಸ್‌ಐ ಆರತಿ ಪರಿಶೀಲಿಸಿದರು.

ಹೈನುಗಾರಿಕೆಯಿಂದ ಆರ್ಥಿಕ ಸುಧಾರಣೆ

ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಅಭಿಮತ



ಹುಣಸೂರು, ಡಿ.25– ರೈತರು ಕೃಷಿಯೊಂದಿಗೆ ಹೈನುಗಾರಿಕೆ ಕೈಗೊಳ್ಳುವ ಮೂಲಕ ಕುಟುಂಬದ ಆರ್ಥಿಕ ಪರಿಸ್ಥಿತಿ ಸುಧಾರಿಸಿಕೊಳ್ಳಬೇಕು ಎಂದು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಸಲಹೆ ನೀಡಿದರು.

ಪಟ್ಟಣದ ಕನಕ ಭವನದಲ್ಲಿ ಮೈಮುಲ್ ನಿರ್ದೇಶಕ ಕೆ.ಎಸ್.ಕುಮಾರ್ ಹೊರತಂದಿರುವ 2023ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ ಮಾಡಿ ಮಾತನಾಡಿದ ಅವರು, ರೈತರು ಕೃಷಿ ಜೊತೆಗೆ ಹೈನುಗಾರಿಕೆಗೆ ಒತ್ತು ಕೊಟ್ಟರೆ ಕುಟುಂಬದ ಆರ್ಥಿಕ ಪರಿಸ್ಥಿತಿ ಚೆನ್ನಾಗಿರುತ್ತದೆ ಎಂದು ಅಭಿಪ್ರಾಯಪಟ್ಟರು.

ಮೈಮುಲ್ ನಿರ್ದೇಶಕ ಕೆ.ಎಸ್. ಕುಮಾರ್ ಮಾತನಾಡಿ, ಪ್ರತಿವರ್ಷ ಕ್ಯಾಲೆಂಡರ್ ಅನ್ನು ಉಚಿತವಾಗಿ ವಿತರಿಸಲಾಗುತ್ತಿದೆ. ರೈತರ ಹೈನುಗಾರಿಕೆಗೆ ಪ್ರೋತ್ಸಾಹ ನೀಡುತ್ತಿದ್ದೇವೆ. ಅಲ್ಲದೇ ಮೈಮುಲ್ ಮತ್ತು ಕೆಎಂಎಫ್‌ನಿಂದ ಸಿಗುವ ಪರಿಕರ ಒದಗಿಸಿದ್ದೇವೆ. ಜಿ.ಡಿ.ಹರೀಶ್‌ಗೌಡರ ಸಹಕಾರದಿಂದ ಜಿಲ್ಲೆಯಲ್ಲೇ ಹುಣಸೂರು ತಾಲೂಕಿನಲ್ಲಿ ಅತಿ ಹೆಚ್ಚು ಸ್ವಂತ ಕಟ್ಟಡ ನಿರ್ಮಿಸಿದ್ದೇವೆ ಎಂದರು.

ಈ ವೇಳೆ ಟಿಎಪಿಸಿಎಂಎಸ್ ಅಧ್ಯಕ್ಷ ಕೆಂಪೇಗೌಡ, ಜಿಪಂ ಮಾಜಿ ಸದಸ್ಯ ಎಂ.ಬಿ.ಸುರೇಂದ್ರ, ಕಸಬಾ ಪ್ರಾಥಮಿಕ ಕೃಷಿ ಸಹಕಾರ ಸಂಘದ ಅಧ್ಯಕ್ಷ ವಾಸುಗೌಡ, ಟಿಎಪಿಸಿಎಂಎಸ್ ನಿರ್ದೇಶಕ ಗೋವಿಂದೇಗೌಡ, ಮೈಮುಲ್ ವಿಸ್ತರಣಾಧಿಕಾರಿ ಗೌತಮ್ ಮತ್ತಿತರರಿದ್ದರು.

ಮನೆ ಪಡಸಾಲೆಯಲ್ಲಿ ಮಲಗಿದ್ದ ವ್ಯಕ್ತಿ ಮೇಲೆ ಚಿರತೆ ದಾಳಿ



ತಿ.ನರಸೀಪುರ, ಡಿ.25– ಮನೆಯ ಪಡಸಾಲೆಯಲ್ಲಿ ಮಲಗಿದ್ದ ವ್ಯಕ್ತಿ ಮೇಲೆ ಚಿರತೆ ದಾಳಿ ನಡೆಸಿ ಗಾಯಗೊಳಿಸಿರುವ ಘಟನೆ ತಾಲೂಕಿನ ಮುತ್ತತ್ತಿ ಗ್ರಾಮದಲ್ಲಿ ಭಾನುವಾರ ಮುಂಜಾನೆ ನಡೆದಿದೆ.

ತಾಲೂಕಿನ ಕರೋಹಟ್ಟಿ ಗ್ರಾಮದ ಮಹದೇವಯ್ಯ(60) ಗಾಯಗೊಂಡಿದ್ದು, ಚಿಕಿತ್ಸೆಗಾಗಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿದೆ. ಮಹದೇವಯ್ಯ ಮುತ್ತತ್ತಿ ಗ್ರಾಮದ ತಮ್ಮ ಮಗಳ ಮನೆಗೆ ಬಂದಿದ್ದರು. ಆದರೆ ಮನೆ ನವೀಕರಣವಾಗುತ್ತಿದ್ದ ಹಿನ್ನೆಲೆಯಲ್ಲಿ ಮನೆ ಮುಂದಿನ ಪಡಸಾಲೆಯಲ್ಲಿ ಮಲಗಿದ್ದರು. ಇಂದು ಮುಂಜಾನೆ 3ರ ಸಮಯದಲ್ಲಿ ಚಿರತೆ ಇವರ ಮೇಲೆ ದಾಳಿ ನಡೆಸಿ ಗಾಯಗೊಳಿಸಿದ್ದು, ಈ ವೇಳೆ ಗಾಬರಿಗೊಂಡ ಅವರು ತನ್ನ ಮೈಮೇಲೆ ಹೊದ್ದುಕೊಂಡಿದ್ದ ಕಂಬಳಿಯನ್ನು ಚಿರತೆ ಮೇಲೆ ಎಸೆದಿದ್ದರಿಂದ ಪರಾರಿ ಯಾಗಿದೆ. ಕೂಡಲೇ ಸ್ಥಳಕ್ಕೆ ಧಾವಿಸಿದ ಉಪ ವಲಯ ಅರಣ್ಯಾಧಿಕಾರಿ ಉಮೇಶ್ ಹಾಗೂ ಸಿಬ್ಬಂದಿಗಳಾದ ಮರಿಸ್ವಾಮಿ, ಪುಟ್ಟಸ್ವಾಮಿ ಚಿರತೆ ದಾಳಿಯಿಂದ ಗಾಯಗೊಂಡ ವ್ಯಕ್ತಿಯಿಂದ ಮಾಹಿತಿ ಪಡೆದು ಆತನನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ.

ತಾಲೂಕಿನಲ್ಲಿ ಚಿರತೆ ಹಾವಳಿ ಹೆಚ್ಚಾಗಿದ್ದು, ಇತ್ತೀಚೆಗೆ ಮುತ್ತತ್ತಿ ಗ್ರಾಮದಲ್ಲಿ ಹಾಗೂ ಮೊನ್ನೆ ಉಕ್ಕಲಗೆರೆ ಮಲ್ಲಿಕಾರ್ಜುನಸ್ವಾಮಿ ಬೆಟ್ಟದಲ್ಲಿ 2 ಚಿರತೆಗಳನ್ನು ಅರಣ್ಯ ಇಲಾಖೆ ಅಧಿಕಾರಿಗಳು ಸೆರೆ ಹಿಡಿದಿದ್ದರು. ಈಗ ಮತ್ತೆ ಅದೇ ಗ್ರಾಮದಲ್ಲಿ ಚಿರತೆ ದಾಳಿ ನಡೆಸಿರುವುದು ಗ್ರಾಮಸ್ಥರನ್ನು ಮತ್ತಷ್ಟು ಆತಂತಕ್ಕೆ ದೂಡಿದೆ.



ಪಿರಿಯಾಪಟ್ಟಣದಲ್ಲಿ ಕಲ್ಪವೃಕ್ಷ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ನೂತನ ದಿನದರ್ಶಿಕೆಯನ್ನು ಸೊಸೈಟಿ ಅಧ್ಯಕ್ಷ ಪಿ.ಪ್ರಶಾಂತ್‌ಗೌಡ ಬಿಡುಗಡೆಗೊಳಿಸಿದರು. ಈ ವೇಳೆ ಉಪಾಧ್ಯಕ್ಷ ಕೃಷ್ಣೇಗೌಡ, ನಿರ್ದೇಶಕರಾದ ಎಸ್.ಆರ್.ದಿನೇಶ್, ದಿನೇಶ್ ಕುಮಾರ್, ಕೆ.ಎಲ್.ಸುರೇಶ್, ಹರೀಶ್, ವಿಜಯ್ ಕುಮಾರ್ ಇನ್ನಿತರರಿದ್ದರು.

ನಾಯಕ ಸಮುದಾಯದ ಶೈಕ್ಷಣಿಕ ಪ್ರಗತಿಗೆ ನೆರವಾಗಿ

ಬಿಜೆಪಿ ಮುಖಂಡ ಕುಂಬ್ರಳ್ಳಿ ಸುಬ್ಬಣ್ಣ ಒತ್ತಾಯ



ನಂಜನಗೂಡು, ಡಿ.25– ನಾಯಕ ಸಮುದಾಯ ಶೈಕ್ಷಣಿಕವಾಗಿ ಹಿಂದುಳಿದಿದ್ದು ಸಂಘಟನೆಗಳು, ಅಧಿಕಾರಿಗಳು ಸಮುದಾಯದ ಶೈಕ್ಷಣಿಕ ಪ್ರಗತಿಗೆ ನೆರವಾಗಬೇಕು ಎಂದು ಬಿಜೆಪಿ ಮುಖಂಡ ಕುಂಬ್ರಳ್ಳಿ ಸುಬ್ಬಣ್ಣ ಒತ್ತಾಯಿಸಿದರು.


ನಗರದ ನಾಯಕ ಸಮುದಾಯ ಭವನದಲ್ಲಿ ಶ್ರೀಮಹರ್ಷಿ ವಾಲ್ಮೀಕಿ ನಾಯಕರ ಕ್ಷೇಮಾಭಿವೃದ್ಧಿ ಸಂಘದಿಂದ ಏರ್ಪಡಿಸಿದ್ದ ಪ್ರತಿಭಾ ಪುರಸ್ಕಾರ, ಸಾಧಕರಿಗೆ ಸನ್ಮಾನ ಮತ್ತು ಕ್ಯಾಲೆಂಡರ್ ಬಿಡುಗಡೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಸಮುದಾಯದವರು ಭವನ ನಿರ್ಮಾಣ, ಜಯಂತಿ ಆಚರಣೆಗೆ ತೋರುವ ಆಸಕ್ತಿಯನ್ನು ಶೈಕ್ಷಣಿಕ ಪ್ರಗತಿಗೆ ತೋರುತ್ತಿಲ್ಲ. ಎಷ್ಟೋ ಹೆಣ್ಣುಮಕ್ಕಳ ಶಿಕ್ಷಣ ಎಸ್‌ಎಸ್‌ಎಲ್‌ಸಿ ನಂತರ ಅರ್ಧಕ್ಕೆ ಮೊಟಕುಗೊಳ್ಳುತ್ತಿದೆ. ಆದ್ದರಿಂದ ನಿಮ್ಮ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡಿಸುವ ಜೊತೆಗೆ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಬೇಕು. ಅಲ್ಲದೆ ಸಮುದಾಯದ ಶೈಕ್ಷಣಿಕ ಪ್ರಗತಿಗಾಗಿ ಅಧಿಕಾರಿಗಳು, ಮುಖಂಡರು, ಸಂಘಟನೆಗಳು ಸೇರಿ ಐಎಎಸ್, ಕೆಎಎಸ್ ತರಬೇತಿ ಕೇಂದ್ರಗಳನ್ನು ತೆರೆಯಲು ಮುಂದಾಗಬೇಕು. ಸಂಘ ಸಂಸ್ಥೆಗಳು ಸಹ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವಂತಹ, ಬಡವರಿಗೆ ನೆರವಾಗುವಂತಹ ಸಾಮಾಜಿಕ ಕಾರ್ಯಕ್ರಮ ರೂಪಿಸಿ ಎಂದು ಸಲಹೆ ನೀಡಿದರು.

ಸಮಾರಂಭದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಹಾಗೂ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರನ್ನು ಸನ್ಮಾನಿಸಲಾಯಿತು. 2023ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಯಿತು.

ಸಮಾರಂಭದಲ್ಲಿ ದಂತ ವೈದ್ಯೆ ಡಾ.ಅನಿತಾ, ಅಂಚೆ ಪಾಲಕರಾದ ಮಂಜುನಾಥ್, ಜಿಪಂ ಎಇ ಶಿವಪ್ರಕಾಶ್, ನಂಜುಂಡನಾಯಕ, ನಗರಸಭಾ ಸದಸ್ಯೆ ವಸಂತ, ಮಹದೇವಸ್ವಾಮಿ, ಮುಖಂಡರಾದ ನಾಗರಾಜು, ಡಿ.ಪ್ರಕಾಶ್, ಸಂಘದ ಅಧ್ಯಕ್ಷ ಸುಧೀಂದ್ರ ಕುಮಾರ್, ಸೋಮನಾಯಕ, ನಂಜುಂಡ, ಶ್ರೀನಿವಾಸ್, ಜಯರಾಮು, ಸುಬ್ರಹ್ಮಣ್ಯ, ಚಂದ್ರಕುಮಾರ್, ಉಮೇಶ್, ಶಿವಕುಮಾರ್ ಸೇರಿದಂತೆ ಇತರರಿದ್ದರು.

ನೇಮಕ



ಮಲ್ಲುಂಡಿ, ಡಿ.25– ನಂಜನಗೂಡು ವಿಧಾನಸಭಾ ಕ್ಷೇತ್ರದ ಹುಲ್ಲಹಳ್ಳಿ ಬ್ಲಾಕ್ ಕಾಂಗ್ರೆಸ್ ಸಮಿತಿ ಕಾರ್ಮಿಕರ ವಿಭಾಗದ ಅಧ್ಯಕ್ಷರಾಗಿ ಚನ್ನಪಟ್ಟಣ ಗ್ರಾಮದ ಹುರ ಗ್ರಾಪಂ ಸದಸ್ಯ ಮಣಿಕಂಠ ಅವರನ್ನು ನೇಮಕ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಸಣ್ಣ ಸಮುದಾಯಗಳು ರಾಜಕೀಯ ಸ್ಥಾನಮಾನ ಪಡೆಯಲು

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಇಚ್ಛಾಶಕ್ತಿಯೇ ಕಾರಣ

ಪ್ರತಿಭಾ ಪುರಸ್ಕಾರ ಕಾರ್ಯಕ್ರಮಲ್ಲಿ ಶಾಸಕ ಎಂ.ಅಶ್ವಿನ್ ಕುಮಾರ್ ಅಭಿಪ್ರಾಯ



ತಿ.ನರಸೀಪುರ, ಡಿ.25– ಸಣ್ಣ ಸಮುದಾಯಗಳು ರಾಜಕೀಯ ಸ್ಥಾನಮಾನ ಪಡೆಯಲು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಇಚ್ಛಾಶಕ್ತಿಯೇ ಕಾರಣ ಎಂದು ಶಾಸಕ ಎಂ. ಅಶ್ವಿನ್ ಕುಮಾರ್ ಅಭಿಪ್ರಾಯ ವ್ಯಕ್ತಪಡಿಸಿದರು.

ತಿರುಮಕೂಡಲಿನ ಆದಿಚುಂಚನಗಿರಿ ರಜತೋತ್ಸವ ಭವನದಲ್ಲಿ ಕುಲಾಲಗುಂಡ ಬ್ರಹ್ಮಾರ್ಯ ಕುಂಬಾರ ಸಂಘ ಹಮ್ಮಿಕೊಂಡಿದ್ದ 2023ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರಸ್ತುತ ಗ್ರಾಪಂಗಳಲ್ಲಿ ಸಣ್ಣ ಸಮುದಾಯದವರು ಅಧ್ಯಕ್ಷ ಉಪಾಧ್ಯಕ್ಷ ಸ್ಥಾನ ಅಲಂಕರಿಸಲು ಮಾಜಿ ಪ್ರಧಾನಿ ದೇವೇಗೌಡರೇ ಕಾರಣ. ಇಂದಿನ ರಾಜಕೀಯ ದೊಂಬರಾಟದಲ್ಲಿ ಎಲ್ಲಾ ಸಮಾಜವನ್ನು ಒಂದೇ ರೀತಿ ಕಾಣಲಾಗುತ್ತಿದೆ. ಹಿಂದುಳಿದ ಕುಂಬಾರ ಜನಾಂಗವನ್ನು ಕೇವಲ ಓಟಿಗಾಗಿ ಬಳಸಿಕೊಳ್ಳಲಾಗುತ್ತಿದ್ದು, ಈ ಬಗ್ಗೆ ಜನಾಂಗ ಎಚ್ಚರಿಕೆ ವಹಿಸಬೇಕಿದೆ. ಜನರಿಂದ ಮಾತ್ರ ಒಬ್ಬ ನಾಯಕ ಉದಯವಾಗಲು ಸಾಧ್ಯ. ಜನ ಯಾರನ್ನು ಬೇಕಾದರೂ ಲೀಡರ್ ಮಾಡುವ ಸಾಮರ್ಥ್ಯ ಹೊಂದಿದ್ದಾರೆ. ಅದಕ್ಕೆ ಸಾಕಷ್ಟು ಉದಾಹರಣೆಗಳಿವೆ. ಸಮಾಜದಲ್ಲಿ ಅಲ್ಪ ಸಂಖ್ಯಾತರಾಗಿರುವ ನಮಗೆ ರಾಜಕೀಯ ಸ್ಥಾನಮಾನ ದೊರೆಯುವುದು ಕನಸಿನ ಮಾತು ಎಂಬುದನ್ನು ಮನಸ್ಸಿಂದ ತೆಗೆದು ಹಾಕಬೇಕಿದೆ ಸಣ್ಣ ಸಮಾಜದಿಂದ ಬಂದ ಮೋದಿ ಪ್ರಧಾನಿಯಾಗಲಿಲ್ಲವೇ? ಎಲ್ಲರಲ್ಲೂ ತಮ್ಮದೇ ಆದ ಸಾಮರ್ಥ್ಯವಿರುತ್ತದೆ ಅದನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು ಎಂದರು.

ಕುಲಾಲ ಸಮುದಾಯ ಈ ನೆಲದ ನಾಗರಿಕತೆ ಹುಟ್ಟಿನೊಂದಿಗೆ ಜನ್ಮ ತಾಳಿದ ಶ್ರೇಷ್ಠ ಸಮುದಾಯ. ಈ ನಾಡಿನ ಮೂಲೆ ಮೂಲೆಯಲ್ಲೂ ಸಾಕಷ್ಟು ಸಂಖ್ಯೆಯಲ್ಲಿರುವ ಕುಂಬಾರ ಸಮುದಾಯ ಇಂದು ಬಲಿಷ್ಠ ಸಂಘಟನೆಯಲ್ಲಿ ಒಗ್ಗೂಡುತ್ತಿವೆ ಈ ಕುಂಬಾರ ಸಮುದಾಯಕ್ಕೆ ಮುಂಬರುವ ಚುನಾವಣೆಯಲ್ಲಿ ರಾಜಕೀಯ ಸ್ಥಾನಮಾನ ಕೊಡುವ ಕೆಲಸವನ್ನು ಎಲ್ಲ ರಾಜಕೀಯ ಪಕ್ಷಗಳು ಮಾಡಬೇಕಿದೆ ಎಂದರು.

ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾತನಾಡಿ, ಕುಂಬಾರ ಸಮುದಾಯದವರು ಶೈಕ್ಷಣಿಕ, ಸಾಮಾಜಿಕ, ರಾಜಕೀಯ ಕ್ಷೇತ್ರಗಳಲ್ಲಿ ಸಾಧನೆ ಮಾಡುವುದು ಅವಶ್ಯ. ಪ್ರಾಚೀನ ಕಾಲದಿಂದಲೂ ಕುಂಬಾರ ಸಮಾಜ ಗುಡಿ ಕೈಗಾರಿಕೆಗೆ ಹೆಸರುವಾಸಿ. ಆದರೆ ಆಧುನಿಕ ತಂತ್ರಜ್ಞಾನದ ಯುಗದಲ್ಲಿ ವಿನೂತನ ಮಾದರಿಯಲ್ಲಿ ಗುಡಿ ಕೈಗಾರಿಕೆ ವಸ್ತುಗಳು ತಯಾರು ಮಾಡುತ್ತಿರುವುದರಿಂದ ಸಣ್ಣ ಕೈಗಾರಿಕೆಗಳು ನಶಿಸಿ ಹೋಗುತ್ತಿರುವುದು ವಿಷಾದನೀಯ ಎಂದರು.

ಕಾರ್ಯಕ್ರಮದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು, ಜೆಡಿಎಸ್ ಕ್ಷೇತ್ರಾಧ್ಯಕ್ಷ ಚೆನ್ನಸ್ವಾಮಿ, ತಾಪಂ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ, ಪಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಕುಲಾಲಗುಂಡ ಬ್ರಹ್ಮಾರ್ಯ ಸಂಘದ ಅಧ್ಯಕ್ಷ ರಮೇಶ್, ಸಂಘದ ಸಂಸ್ಥಾಪಕ ಎಂ.ರಾಜು, ಡಾ.ಗೋವಿಂದಶೆಟ್ಟಿ ಹಿರಿಯ ಸಾಹಿತಿ ಷಣ್ಮುಖಸ್ವಾಮಿ, ಮಂಡ್ಯ ಕುಂಬಾರ ಜಾಗೃತಿ ವೇದಿಕೆ ಅಧ್ಯಕ್ಷ ಎಂ.ಕೃಷ್ಣಪ್ಪ, ಡಿ. ದೇವರಾಜ ಅರಸ್ ಹಿಂದುಳಿದ ವೇದಿಕೆ ಜಿಲ್ಲಾಧ್ಯಕ್ಷ ಎಲ್.ಸಂದೇಶ್, ಜಿಲ್ಲಾ ಸಂಘದ ನಿರ್ದೇಶಕ ಟಿ.ಎಸ್.ಚಂದ್ರಶೇಖರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸೋಮಶೇಖರ್, ಬನ್ನೂರು ಪುರಸಭೆ ಸದಸ್ಯ ರಮೇಶ್, ಗ್ರಾಪಂ ಸದಸ್ಯರಾದ ನಾಗೇಂದ್ರ, ಮಂಜುನಾಥ್, ನಂದಿನಿ, ಗುಣ, ಸಂಘದ ಉಪಾಧ್ಯಕ್ಷ ಸಿದ್ದರಾಜು, ಕಾರ್ಯದರ್ಶಿ ಮಹದೇವಸ್ವಾಮಿ, ಖಜಾಂಚಿ ಸ್ವಾಮಿ, ರವಿಕುಮಾರ್, ಸಂಘಟನಾ ಕಾರ್ಯದರ್ಶಿ ಹೆಚ್.ಆರ್.ರವಿಕುಮಾರ್, ಸಹ ಕಾರ್ಯದರ್ಶಿ ವೆಂಕಟೇಶ್, ನಿರ್ದೇಶಕರಾದ ಮಹದೇವಶೆಟ್ಟಿ, ನಾಗರಾಜು, ನಂಜುಂಡ, ಮಾದಶೆಟ್ಟಿ ಮತ್ತಿತರರಿದ್ದರು.

ಶೀತಲ ಸಮರ ಅನಾವರಣ!

ಕಾರ್ಯಕ್ರಮದಲ್ಲಿ ಶಾಸಕ ಅಶ್ವಿನ್‌ಕುಮಾರ್ ಹಾಗೂ ಮಾಜಿ ಸಚಿವ ಹೆಚ್.ಸಿ. ಮಹದೇವಪ್ಪ ನಡುವಿನ ಶೀತಲ ಸಮರ ಅನಾವರಣಗೊಂಡಿತು.

ಕಾರ್ಯಕ್ರಮಕ್ಕೆ ಮೊದಲು ಬಂದ ಡಾ.ಹೆಚ್.ಸಿ.ಮಹದೇವಪ್ಪ ಕುರ್ಚಿಯಲ್ಲಿ ಆಸೀನರಾದರು. ಸ್ವಲ್ಪ ಸಮಯದ ನಂತರ ಶಾಸಕ ಅಶ್ವಿನ್ ಕುಮಾರ್ ಬಂದ ವೇಳೆ ವೇದಿಕೆಯಲ್ಲಿ ಮಹದೇವಪ್ಪ ಪಕ್ಕ ಗುತ್ತಿಗೆದಾರ ಕೇತಹಳ್ಳಿ ರಾಜಣ್ಣ ಕುಳಿತಿದ್ದರು. ಅಶ್ವಿನ್ ಕುಮಾರ್ ಬರುತ್ತಿದ್ದಂತೆ ಅವರಿಗೆ ಮಹದೇವಪ್ಪ ಪಕ್ಕ ಕೂರುವಂತೆ ಕೋರಲಾಯಿತಾದರೂ, ಅದಕ್ಕೆ ಮನ್ನಣೆ ನೀಡದ ಶಾಸಕರು ರಾಜಣ್ಣ ಪಕ್ಕದಲ್ಲೇ ಕುಳಿತರು.

ಕಾರ್ಯಕ್ರಮದಲ್ಲಿ ಮಾತನಾಡುವ ವೇಳೆ ಮಹದೇವಪ್ಪ, ಸಿದ್ದರಾಮಯ್ಯ ಸಿಎಂ ಆಗಿದ್ದ ವೇಳೆ ಕುಂಬಾರ ಜನಾಂಗದ ಅಭಿವೃದ್ಧಿ ಪ್ರಾಧಿಕಾರ ರಚಿಸಿ ಕೋಟ್ಯಾಂತರ ರೂ. ಜನಾಂಗದ ಅಭಿವೃದ್ಧಿಗೆ ಮೀಸಲಿರಿಸಿ, ಸಮುದಾಯದ ಹಿತ ಕಾಯಲಾಗಿತ್ತು. ಹಾಗಾಗಿ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರಲಿದೆ ಎಂದರಲ್ಲದೇ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತೆ ಅಲ್ವಾ ಅಶ್ವಿನ್ ಎಂದು ಕಾಲೆಳೆದರು. ಇದಕ್ಕೆ ಅಶ್ವಿನ್ ಕುಮಾರ್ ನಸುನಕ್ಕು ಸುಮ್ಮನಾದರು. ನಂತರ ತಮ್ಮ ಭಾಷಣದಲ್ಲಿ ಸಣ್ಣ ಪುಟ್ಟ ಸಮುದಾಯ ಗುರುತಿಸಿ ಅಧಿಕಾರ ನೀಡಿದ್ದು ಮಾಜಿ ಪ್ರಧಾನಿ ದೇವೇಗೌಡರು. ಇಲ್ಲಿ ರಾಜಕೀಯ ಮಾತನಾಡಬಾರದು ಎಂದುಕೊಂಡಿದ್ದೆ. ಆದರೆ ಅಂತಹ ಸನ್ನಿವೇಶ ಸೃಷ್ಟಿಯಾಯಿತು. ಈ ಬಾರಿ ಜೆಡಿಎಸ್ ಪಕ್ಷವೇ ಅಧಿಕಾರ ಹಿಡಿಯಲಿದ್ದು, ಕುಮಾರಸ್ವಾಮಿ ಮುಖ್ಯಮಂತ್ರಿಯಾಗಲಿದ್ದಾರೆ. ಕುಂಬಾರ ಜನಾಂಗಕ್ಕೆ ರಾಜಕೀಯ ಸ್ಥಾನಮಾನ ನೀಡುವ ಸಂಬಂಧ ಕುಮಾರಣ್ಣರೊಂದಿಗೆ ಮಾತನಾಡಲಿದ್ದೇನೆ ಎನ್ನುವ ಮೂಲಕ ಮಹದೇವಪ್ಪರ ಮಾತಿಗೆ ಟಾಂಗ್ ನೀಡಿದರು.

ಚಿಕಿತ್ಸಾ ದರ ಪರಿಷ್ಕರಣೆಗೆ ಖಾಸಗಿ ಆಸ್ಪತ್ರೆಗಳ ಪಟ್ಟು: ಯಶಸ್ವಿನಿ ಆರೋಗ್ಯ ಯೋಜನೆಗೆ ಆರಂಭದಲ್ಲೇ ಕಂಟಕ

● ಸರ್ಕಾರ ನಿರ್ಧರಿಸಿರುವ ದರಗಳಲ್ಲಿ ಚಿಕಿತ್ಸೆ ನೀಡಲು ನಕಾರ ● ಜ.1ರಿಂದ ಯೋಜನೆ ಜಾರಿಗೊಳ್ಳುತ್ತಿದ್ದರೂ ಚಿಕಿತ್ಸೆಗೆ ಆಸ್ಪತ್ರೆಗಳೇ ಸಜ್ಜಾಗಿಲ್ಲ


■ ಮೋಹನ್ ಕಾಯಕ

ಮೈಸೂರು, ಡಿ.25– ರಾಜ್ಯ ಸರ್ಕಾರ ಪುನಃ ಜಾರಿಗೊಳಿಸಿರುವ ಯಶಸ್ವಿನಿ ಸಹಕಾರ ರೈತರ ಆರೋಗ್ಯ ರಕ್ಷಾ ಯೋಜನೆ(ಯಶಸ್ವಿನಿ ಯೋಜನೆ)ಗೆ ರಾಜ್ಯಾದ್ಯಂತ ತೀವ್ರ ಆಕ್ಷೇಪ ವ್ಯಕ್ತಪಡಿಸಿರುವ ಖಾಸಗಿ ಆಸ್ಪತ್ರೆಗಳ ವೈದ್ಯರು, ಸರ್ಕಾರ ಆರ್ಥಿಕ ಸಂಕಷ್ಟದಲ್ಲಿರುವ ಖಾಸಗಿ ಆಸ್ಪತ್ರೆಗಳ ಬೇಡಿಕೆಗಳಿಗೆ ಲಿಖಿತ ಭರವಸೆ ನೀಡಿದರಷ್ಟೇ ಯೋಜನೆಯ ಒಡಂಬಡಿಕೆ ಮಾಡಿಕೊಳ್ಳುವ ಸಂಬಂಧ ಒಮ್ಮತದ ನಿರ್ಣಯ ಕೈಗೊಂಡಿದ್ದಾರೆ.

ಜಿಲ್ಲೆಯ ಸಹಕಾರ ಸಂಘಗಳಲ್ಲಿ ಸದಸ್ಯರಾಗಿರುವ ನಾಲ್ವರು ಸದಸ್ಯರ ಕುಟುಂಬಕ್ಕೆ ನಗರ ಪ್ರದೇಶಕ್ಕೆ 1 ಸಾವಿರ ರೂ. ಹಾಗೂ ಗ್ರಾಮೀಣ ಮತ್ತು ಸ್ವಸಹಾಯ ಗುಂಪುಗಳಿಗೆ 500 ವಂತಿಕೆಯನ್ನು ಪಾವತಿಸಬೇಕು. ಪ್ರತಿ ಹೆಚ್ಚುವರಿ ಸದಸ್ಯರಿಗೆ ಶೇ.20 ರಷ್ಟು ಅಂದರೆ 100 ರೂ. ಪಾವತಿಸಿ ಯಶಸ್ವಿನಿ ಯೋಜನೆಯ ಬಳಸಿಕೊಳ್ಳಬಹುದಾಗಿದೆ. 1650 ಖಾಯಿಲೆಗಳಿಗೆ 5 ಲಕ್ಷ ರೂ.,ವರೆಗೆ ಚಿಕಿತ್ಸೆ ಪಡೆಯಬಹುದಾದ ಯಶಸ್ವಿನಿ ಯೋಜನೆಗೆ ನ.1 ರಿಂದಲೇ ನೋಂದಣಿ ಪ್ರಾರಂಭವಾಗಿದ್ದು, 2023ರ ಜನವರಿ 1ರಿಂದ ಡಿ.30ರವರೆಗೂ ಸೇವೆ ಜಾರಿಯಲ್ಲಿರುತ್ತದೆ.

2004ರಲ್ಲಿ ಆರಂಭವಾದ ಈ ಯಶಸ್ವಿನಿ ಯೋಜನೆ 2018 ರಲ್ಲಿ ಸ್ಥಗಿತಗೊಂಡಿತ್ತು. ಆದರೀಗ ಮರು ಜಾರಿಯಾಗಿದ್ದು, ಸರ್ಕಾರ ನೀಡುತ್ತಿರುವ ಚಿಕಿತ್ಸಾ ವೆಚ್ಚ ಈಗ ಕಡಿಮೆಯಾಗಿದೆ. ಶಸ್ತ್ರಚಿಕಿತ್ಸೆಗಳನ್ನು 8–10 ಸಾವಿರಗಳಲ್ಲಿ ಮಾಡಲು ಹೇಗೆ ಸಾಧ್ಯ? ಸರ್ಕಾರ ಚುನಾವಣೆ ಹತ್ತಿರ ಬಂದಾಗ ಖಾಸಗಿ ಆಸ್ಪತ್ರೆ ವೈದ್ಯರೊಂದಿಗೆ ಸೌಜನ್ಯಕ್ಕೂ ಚರ್ಚಿಸದೆ ಏಕಪಕ್ಷೀಯವಾಗಿ ನಿರ್ಧಾರ ತೆಗೆದುಕೊಂಡಿದೆ. ಸದ್ಯಕ್ಕೆ ಯೋಜನೆ ಸಂಬಂಧ ನೋಂದಣಿ ಪ್ರಕ್ರಿಯೆ ನಡೆಯುತ್ತಿದೆ. ಆದರೆ ಮಾರ್ಗಸೂಚಿಗಳಲ್ಲಿ ಯಾವುದೇ ಬದಲಾವಣೆ ತರದೆ, ಯಾವ್ಯಾವ ಆಸ್ಪತ್ರೆಗಳಲ್ಲಿ ಚಿಕಿತ್ಸೆಗಳು ದೊರೆಯಲಿವೆ ಎಂಬುದರ ಯಾವೊಂದು ವಿವರಣೆಯೂ ಇಲ್ಲ ಎಂದು ಬೇಸರ ಹೊರಹಾಕಿದ್ದಾರೆ. ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಮೈಸೂರು ಅಸೋಸಿಯೇಷನ್ ಆಫ್ ಹಾಸ್ಪಿಟಲ್ಸ್ ಅಂಡ್ ನರ್ಸಿಂಗ್ ಹೋಮ್ಸ್, ಡಯಾಗ್ನೋಸ್ಟಿಕ್ ಸೆಂಟರ್ಸ್(ಮಹಾನ್) ಅಧ್ಯಕ್ಷ ಡಾ.ಜಾವೀದ್ ನಯೀಮ್, ಮೈಸೂರಿನಲ್ಲಿ ಒಂದೆರಡು ಆಸ್ಪತ್ರೆಗಳು ಮಾತ್ರ ಯಶಸ್ವಿನಿ ಯೋಜನೆ ಒಡಂಬಡಿಕೆ ಮಾಡಿಕೊಂಡಿವೆ. ಆದರೆ ನಮ್ಮ ಮಹಾನ್‌ನಿಂದ ಯಶಸ್ವಿನಿ ಯೋಜನೆಯ ಒಡಂ ಬಡಿಕೆ ಮಾಡಿಕೊಳ್ಳದಂತೆ ನಿರ್ಣಯ ತೆಗೆದುಕೊಂಡಿದ್ದೇವೆ. ಮೈಸೂರಿನಲ್ಲಿ ಮಾತ್ರವಲ್ಲ ರಾಜ್ಯಾದ್ಯಂತ ಇರುವ ಖಾಸಗಿ ಆಸ್ಪತ್ರೆಗಳ ವೈದ್ಯರ ನಿರ್ಧಾರವೂ ಇದೇ ಆಗಿದೆ ಎಂದರು.

ಚುನಾವಣೆ ಮುಗಿದ ಕೂಡಲೇ ಸರ್ಕಾರದ ಆಸಕ್ತಿ ಮಾಯ...!



ರಾಜ್ಯ ಸರ್ಕಾರ ಯಶಸ್ವಿನಿ ಯೋಜನೆ ಸಂಬಂಧ ಕಮಿಟಿ ರಚನೆ ಮಾಡಿದ್ದು, ಅದರಲ್ಲಿ ಮೂರ್‍ನಾಲ್ಕು ಮಂದಿ ಖಾಸಗಿ ವೈದ್ಯರನ್ನು ಹಾಕಿಕೊಂಡಿದ್ದಾರೆ. ಆದರೆ ಆಸ್ಪತ್ರೆ ನಡೆಸಿದ ಅನುಭವವುಳ್ಳ ಯಾವ ಖಾಸಗಿ ವೈದ್ಯರು ಈ ಯೋಜನೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವುದಿಲ್ಲ. ಕೊರೊನಾ ತುರ್ತು ಸಂದರ್ಭದಲ್ಲಿ ಜವಾಬ್ದಾರಿ ಅರಿತು ನಷ್ಟವಾದರೂ ಚಿಕಿತ್ಸೆ ನೀಡಿದ್ದೇವೆ. ಆದರೆ ಈಗ ಅಂತಹ ತುರ್ತು ಪರಿಸ್ಥಿತಿಯಿಲ್ಲ. ಸಂಕಷ್ಟದಲ್ಲಿ ಸಿಲುಕಿರುವ ಖಾಸಗಿ ಆಸ್ಪತ್ರೆ ಪರಿಸ್ಥಿತಿಯನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ಚುನಾವಣೆ ಹತ್ತಿರದಲ್ಲಿ ಯಶಸ್ವಿನಿ ಯೋಜನೆಯಂತಹ ಯೋಜನೆಗಳ ಜಾರಿಗೆ ಆಸಕ್ತಿ ತೋರಿಸುವ ಸರ್ಕಾರ, ಚುನಾವಣೆ ಮುಗಿದ ಕೂಡಲೇ ಮರೆತೇ ಬಿಡುತ್ತವೆ. ಈ ಯೋಜನೆಗಳನ್ನು ಮುಂದುವರೆಸಬೇಕು, ವಿಸ್ತರಿಸಬೇಕು ಎಂಬ ಆಸಕ್ತಿಯೇ ಹೊರಟು ಹೋಗಿರುತ್ತದೆ. ಇದು ಈ ಸರ್ಕಾರದ ಸಮಸ್ಯೆ ಮಾತ್ರವಲ್ಲ. ಎಲ್ಲಾ ಸರ್ಕಾರಗಳು ಹೀಗೆಯೇ. ಅಧಿಕಾರಕ್ಕೆ ಬರಬೇಕು, ಆಡಳಿತ ನಡೆಸಬೇಕು ಎಂಬ ಒಂದೇ ಮಾನದಂಡ ಈ ರೀತಿಯ ಅಸ್ಪಷ್ಟ ಯೋಜನೆಗಳನ್ನು ತರುವುದು ಸಾಮಾನ್ಯ.

–ಡಾ.ಜಾವೀದ್ ನಯೀಮ್, ಅಧ್ಯಕ್ಷರು, ಮಹಾನ್

ಸರ್ಕಾರಿ ಯೋಜನೆಗಳಿಗೆ ಮೀಸಲಿಟ್ಟ ಮೊತ್ತ ಹೆಚ್ಚಾಗುತ್ತಿಲ್ಲ



ಎಲ್ಲಾ ವಸ್ತುಗಳ ಬೆಲೆ ಹೆಚ್ಚಾಗುತ್ತಿದೆ. ಆದರೆ ಸರ್ಕಾರಿ ಯೋಜನೆಗಳಿಗೆ ಮೀಸಲಿಟ್ಟಿರುವ ಮೊತ್ತ ಮಾತ್ರ ಹೆಚ್ಚಾಗುತ್ತಿಲ್ಲ. ಇದೇ ರೀತಿಯಾದರೆ ಖಾಸಗಿ ಆಸ್ಪತ್ರೆಗಳ ಉನ್ನತಿ ಹೇಗೆ ಸಾಧ್ಯ ಖಾಸಗಿ ಆಸ್ಪತ್ರೆಗಳನ್ನು ಸರ್ಕಾರಿ ಆಸ್ಪತ್ರೆಗಳ ಮಟ್ಟಕ್ಕೆ ತಂದರೆ ಯಾರು ನಮ್ಮನ್ನು ಪ್ರಶ್ನಿಸುವುದಿಲ್ಲ ಎಂಬ ಮನೋಭಾವನೆ ಸರ್ಕಾರದ್ದಾಗಿದೆ.

ಯಶಸ್ವಿನಿ ಯೋಜನೆ ಜಾರಿಗೆ ಸಮಿತಿ ರಚನೆ ಮಾಡಲಾಗಿದೆ ಎಂದು ಸರ್ಕಾರ ಹೇಳಿದೆ. ಆದರೆ ಈ ಸಮಿತಿಯಲ್ಲಿ ಮೂವರು ಮಾತ್ರ ವೈದ್ಯರಿದ್ದಾರೆ ಎನ್ನಲಾಗಿದೆ. ಚಿಕಿತ್ಸೆಯ ಖರ್ಚು–ವೆಚ್ಚದ ವಾಸ್ತವ ಸ್ಥಿತಿ ಅರಿವಾಗಬೇಕಾದರೆ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗಳಾಗಿರುವ ಜಯದೇವ ಆಸ್ಪತ್ರೆ, ನಿಮಾನ್ಸ್, ಕಿದ್ವಾಯಿ ಜೊತೆಗೆ ಖಾಸಗಿ ಆಸ್ಪತ್ರೆಗಳ ವೈದ್ಯರು ಹಾಗೂ ಖಾಸಗಿ ವೈದ್ಯರ ಸಂಘಟನೆಗಳ ಮುಖ್ಯಸ್ಥರನ್ನು ಸಮಿತಿಯಲ್ಲಿ ಸೇರಿಸಿಕೊಳ್ಳುವುದು ಅವಶ್ಯ. ಇಲ್ಲವಾದಲ್ಲಿ ಯೋಜನೆಯಲ್ಲಿ ಯಾವುದೇ ಬದಲಾವಣೆ ತರಲು ಸಾಧ್ಯವಿಲ್ಲ.

–ಡಾ.ಸಂತೃಪ್ತ್, ಮುಖ್ಯಸ್ಥರು, ಶಾಂತವೇರಿ ಗೋಪಾಲಗೌಡ ಆಸ್ಪತ್ರೆ



ಯಶಸ್ವಿನಿ ಯೋಜನೆಯ ಮಾರ್ಗಸೂಚಿಗಳಲ್ಲಿ ಬದಲಾವಣೆ, ಚಿಕಿತ್ಸಾ ವೆಚ್ಚದ ಮೊತ್ತ ಹೆಚ್ಚಳ, ಬಾಕಿ ಉಳಿಸಿಕೊಂಡಿರುವ ಚಿಕಿತ್ಸಾ ವೆಚ್ಚ ಹಾಗೂ ಮುಂದಿನ ದಿನಗಳಲ್ಲಿ ಚಿಕಿತ್ಸೆ ಪೂರ್ಣಗೊಂಡ ಕೂಡಲೇ ಅಂದರೆ ಆಗಿಂದಾಗಲೇ ಚಿಕಿತ್ಸಾ ವೆಚ್ಚ ಭರಿಸುವ ಲಿಖಿತ ಭರವಸೆಯನ್ನು ಸರ್ಕಾರ ನೀಡಿದರಷ್ಟೇ ಒಡಂಬಡಿಕೆ ಮಾಡಿಕೊಳ್ಳುತ್ತೇವೆ. ಸರ್ಕಾರದಿಂದ ಪೇಮೆಂಟ್ ಆಗುವುದು ತುಂಬಾ ನಿಧಾನ. ಸಾಕಷ್ಟು ಆಸ್ಪತ್ರೆಗಳಿಗೆ ಕೋಟ್ಯಾಂತರ ರೂ. ಹಣ ಸಂದಾಯವಾಗದೆ ಬಾಕಿ ಉಳಿದಿದೆ ಎಂದು ಬೇಸರ ವ್ಯಕ್ತಪಡಿಸಿದರು. 20 ವರ್ಷದ ಹಳೇ ರೇಟ್‌ನಲ್ಲಿ ಖಾಸಗಿ ಆಸ್ಪತ್ರೆಗಳು ಈಗ ಚಿಕಿತ್ಸೆ ನೀಡುವುದಕ್ಕೆ ಸಾಧ್ಯವಿಲ್ಲ.

ವೈದ್ಯಕೀಯ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ವೈದ್ಯಕೀಯ ಸಲಕರಣೆಗಳ ಬೆಲೆ ಜಾಸ್ತಿಯಾಗಿದೆ. ಚಿಕಿತ್ಸಾ ವೆಚ್ಚ ಹೆಚ್ಚಾಗಿರುವ ಸಂದರ್ಭದಲ್ಲಿ ಹಳೇ ರೇಟ್‌ನಲ್ಲಿ ಚಿಕಿತ್ಸೆ ಕೊಡಿ ಎಂದರೆ ಹೇಗೆ ಸಾಧ್ಯ ಎಂದು ಪ್ರಶ್ನಿಸಿದ ಅವರು, ಸರ್ಕಾರ ಖಾಸಗಿ ಆಸ್ಪತ್ರೆಗಳ ಮುಖ್ಯಸ್ಥರು, ವೈದ್ಯರ ಸಭೆ ಕರೆದು ಯೋಜನೆ ಸಂಬಂಧ ಚರ್ಚಿಸಿಲ್ಲ. ಕಾರ್ಡ್ ಪಡೆದವರು ಯಾವ ಆಸ್ಪತ್ರೆಗಳಿಗೆ ಹೋಗಬೇಕು ಎಂಬ ಮಾಹಿತಿಯೇ ಇಲ್ಲ. ಆಸ್ಪತ್ರೆಗೆ ಬರುವ ಫಲಾನುಭವಿಗಳು ಸ್ಪೆಷಲ್ ವಾರ್ಡ್ ಬೇಕೆಂದರೆ ಸರ್ಕಾರ ನೀಡುವ ಚಿಕಿತ್ಸಾ ವೆಚ್ಚದಲ್ಲಿ ನೀಡಬೇಕೆಂದರೆ ನಮ್ಮ ಕೈಯಿಂದಲೇ ಹಣ ಕೊಟ್ಟು ಚಿಕಿತ್ಸೆ ನೀಡಿದಂತಾಗುತ್ತದೆ ಎಂದರು.

ಮೇಜರ್ ಸರ್ಜರಿಗಳಿಗೆ ಸರ್ಕಾರ 8 ಸಾವಿರ ನೀಡಿದರೆ ಯಾರಿಗೆಂದು ಹಂಚಿಕೆ ಮಾಡುವುದು. ಮಧ್ಯರಾತ್ರಿ ಹೆರಿಗೆ ಕೇಸ್ ಬಂದರೆ ಮನೆಯಿಂದ ವೈದ್ಯರನ್ನು ಕರೆತರಬೇಕು. ಕನಿಷ್ಠ ಇಬ್ಬರು ಮಕ್ಕಳ ವೈದ್ಯರು, ನರ್ಸ್‌ಗಳು, ಅನಸ್ತೇಶಿಯದವರಿರಬೇಕು, ಗೈನಕಾಲಜಿಸ್ಟ್ ಇರಬೇಕಾಗುತ್ತದೆ. ಜೊತೆಗೆ ವೈದ್ಯಕೀಯ ಉಪಕರಣಗಳು, ಆಸ್ಪತ್ರೆ ನಿರ್ವಹಣೆ ವೆಚ್ಚ ಸಾಕಷ್ಟಿದೆ. ಇದಕ್ಕೆಲ್ಲಾ ಸರ್ಕಾರ ಕೊಡುವ 8 ಸಾವಿರ ಏನೇನೂ ಸಾಲದು ಎಂದು ವಿಷಾದಿಸಿದರು.

ಖಾಸಗಿ ಆಸ್ಪತ್ರೆಗಳು ನಡೆಯುವುದು ಬ್ಯಾಂಕ್ ಸಾಲದಿಂದಲೇ ಬ್ಯಾಂಕ್‌ನಲ್ಲಿ ಆಸ್ಪತ್ರೆಗಳಿಗೆ ಯಾವುದೇ ಬಗೆಯ ಬಡ್ಡಿ ರಿಯಾಯಿತಿಯೂ ಇರುವುದಿಲ್ಲ. ಸರ್ಕಾರದಿಂದ ಹಣ ಬರಬೇಕು ಸ್ವಲ್ಪ ಟೈಮ್ ಕೋಡಿ ಎಂದರೆ ಬ್ಯಾಂಕ್‌ನವರು ಕೇಳುವುದೇ ಇಲ್ಲ. ಚೆಕ್ ಬೌನ್ಸ್ ಆಗುತ್ತದೆ. ನಂತರ ಯಾವುದೇ ಬಗೆಯ ಲೋನ್ ಪಡೆಯುವುದು ಕಷ್ಟ. ವಿದ್ಯುತ್ ಬಿಲ್, ವಾಟರ್ ಬಿಲ್, ತೆರಿಗೆ ಎಲ್ಲವೂ ಕಮರ್ಷಿಯಲ್ ಎಂದು ಪರಿಗಣಿಸಿ ಶುಲ್ಕ ವಿಧಿಸಲಾಗುತ್ತದೆ. ಸರ್ಕಾರಿ ಆಸ್ಪತ್ರೆಗಳಲ್ಲಿರುವ ಚಿಕಿತ್ಸಾ ದರಗಳಂತೆ ಖಾಸಗಿ ಆಸ್ಪತ್ರೆಗಳಲ್ಲಿಯೂ ಅನುಸರಿಸಿ ಎಂದು ಹೇಳುತ್ತಾರೆ. ಆದರಿದು ಸಾಧ್ಯವೇ ಇಲ್ಲ. ಸರ್ಕಾರಿ ಆಸ್ಪತ್ರೆಗಳಲ್ಲಿ ಯಾವ ನಿರ್ವಹಣೆ ತಲೆನೋವು ಇಲ್ಲ. ಹೀಗಾಗಿ ಸೇವೆಯತ್ತ ಗಮನ ನೀಡಬಹುದು. ಆದರೆ ಖಾಸಗಿ ಆಸ್ಪತ್ರೆಗಳ ಬಿಲ್ಡಿಂಗ್ ನಿರ್ವಹಣೆ, ವೈದ್ಯಕೀಯ ಸಿಬ್ಬಂದಿಗೆ ಸಂಬಳ, ತೆರಿಗೆ ಪಾವತಿ ಸೇರಿದಂತೆ ಹತ್ತು–ಹಲವು ಖರ್ಚುಗಳಿರುತ್ತವೆ.

ಸರ್ಕಾರಿ ಆಸ್ಪತ್ರೆಯಲ್ಲೇ ಖರ್ಚು ಜಾಸ್ತಿಯಾಗುತ್ತೆ: ಕಾವೇರಿ ಹಾರ್ಟ್ ಅಂಡ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಮುಖ್ಯಸ್ಥ ಡಾ. ಚಂದ್ರಶೇಖರ್ ಮಾತನಾಡಿ, ಯಶಸ್ವಿನಿ ಯೋಜನೆಯಡಿ ಸರ್ಕಾರ ಭರಿಸುವ ಚಿಕಿತ್ಸಾ ವೆಚ್ಚದ ಮೊತ್ತವೂ ಸರ್ಕಾರಿ ಆಸ್ಪತ್ರೆಯಲ್ಲಾಗುವ ಚಿಕಿತ್ಸಾ ವೆಚ್ಚಕ್ಕಿಂತಲೂ ಕಡಿಮೆ ಇದೆ. ಯಾವ ಆಧಾರದ ಮೇಲೆ ಚಿಕಿತ್ಸಾ ವೆಚ್ಚನಿಗದಿಪಡಿಸಿದ್ದಾರೆ ಎಂಬುದು ಗೊತ್ತಿಲ್ಲ. ಯಾವುದೇ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗೆ ಕನಿಷ್ಠವೆಂದರೂ 30–40 ಸಾವಿರ ಇರುತ್ತದೆ. ಅತ್ಯಾಧುನಿಕ ವೈದ್ಯಕೀಯ ಯಂತ್ರೋಪಕರಣಗಳನ್ನು ಅಳವಡಿಸಿಕೊಳ್ಳಬೇಕು ಎಂದರೆ ಖರ್ಚು ಜಾಸ್ತಿಯಾಗುತ್ತಿರುತ್ತಲೇ ಇರುತ್ತದೆ. ಆದರೆ ಸರ್ಕಾರದ ಯೋಜನೆಯಲ್ಲಿ ಚಿಕಿತ್ಸಾ ವೆಚ್ಚದ ಮೊತ್ತದಲ್ಲಿ ಯಾವುದೇ ಬದಲಾವಣೆ ಆಗಿರುವುದಿಲ್ಲ ಎಂದು ಸರ್ಕಾರದ ವೈದ್ಯಕೀಯ ಸಂಬಂಧಿತ ಯೋಜನೆಗಳ ಸ್ಥಿತಿ–ಗತಿ ವಿವರಿಸಿದರು.

ಕೃಷಿ ಬಿಟ್ಟರೆ, ಆರೋಗ್ಯ ಸೇವಾ ಕ್ಷೇತ್ರದಲ್ಲಿ ಕೋಟ್ಯಂತರ ಮಂದಿ ಉದ್ಯೋಗ ಕಂಡುಕೊಂಡಿದ್ದಾರೆ. ಅವರಿಗೆಲ್ಲಾ ಸಂಬಳ, ವಸತಿ, ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆ, ಆಸ್ಪತ್ರೆಗಳ ನಿರ್ವಹಣೆ ಸೇರಿದಂತೆ ಎಲ್ಲವನ್ನೂ ಸಮರ್ಪಕ ವಾಗಿ ನಿರ್ವಹಿಸಲು ಸಾಧ್ಯವಿಲ್ಲ ಎಂದರು.

ಮರು ಜಾರಿಯಲ್ಲಿ ಚಿಕಿತ್ಸಾ ದರ ಮತ್ತಷ್ಟು ಕಡಿಮೆಯಾಗಿದೆ...!



ಯಶಸ್ವಿನಿ ಯೋಜನೆ ಶುರುವಾಗಿದ್ದು 2004ರಲ್ಲಿ. ಮೊದಮೊದಲು ಸಾಮಾಜಿಕ ಸೇವೆಯಂತೆ ನಡೆದುಕೊಂಡು ಬಂತು. ಚಿಕಿತ್ಸಾ ವೆಚ್ಚದ ಮೊತ್ತದಲ್ಲಿ ಯಾವುದೇ ಬದಲಾವಣೆಯಾಗಿಲ್ಲ. 2010ರಲ್ಲಿ ಕೆಲವೊಂದು ಚಿಕಿತ್ಸೆಗೆ ಶೇ.5ರಿಂದ 10 ರಷ್ಟು ಹೆಚ್ಚಿಸಲಾಯಿತು. 2018ರಲ್ಲಿ ಯಶಸ್ವಿನಿ ಯೋಜನೆ ಸ್ಥಗಿತಗೊಂಡಿತು. ಈಗ ಮರು ಜಾರಿಗೊಳಿಸಿರುವ ರಾಜ್ಯ ಸರ್ಕಾರ 2004ರಲ್ಲಿ ನೀಡಿದ್ದ ಚಿಕಿತ್ಸಾ ಮೊತ್ತವನ್ನು ಮತ್ತಷ್ಟು ಕಡಿಮೆ ಮಾಡಿದೆ. ಹೆರಿಗೆಗೆ 2004ರಲ್ಲಿ 12 ಸಾವಿರ ರೂ. ಚಿಕಿತ್ಸಾ ವೆಚ್ಚವನ್ನು ನಿಗದಿ ಮಾಡಲಾಗಿತ್ತು, ಈಗ 8 ಸಾವಿರಕ್ಕೆ ಕಡಿತಗೊಳಿಸಲಾಗಿದೆ. ಸರ್ಕಾರದಿಂದ ಪೇಮೆಂಟ್ ವಿಚಾರದಲ್ಲಿ 45 ದಿನ ಎಂದು ಹೇಳುತ್ತಾರೆ. ಆದರೆ 45 ದಿನವಿರಲೀ ವರ್ಷವಾದರೂ ಬಾಕಿ ಸಂದಾಯವಾಗಿಲ್ಲ. ಯಶಸ್ವಿನಿ ಯೋಜನೆ ಸ್ಥಗಿತಗೊಂಡ ಬಳಿಕ ಹಳೇ ಚಿಕಿತ್ಸಾ ವೆಚ್ಚವನ್ನು ಇನ್ನೂ ಹಲವು ಆಸ್ಪತ್ರೆಗಳಿಗೆ ನೀಡಿಲ್ಲ. ನಮ್ಮ ಮುಖ್ಯ ಬೇಡಿಕೆ ಚಿಕಿತ್ಸೆ ಮುಗಿದ ಕೂಡಲೇ ಹಣ ಸಂದಾಯವಾಗಬೇಕು. ಯಶಸ್ವಿನಿ ಯೋಜನೆ ಜಾರಿಗೆ ತಂದಿದ್ದು ಒಳ್ಳೆಯದೆ. ಸಾಕಷ್ಟು ಜನರಿಗೆ ಅನುಕೂಲವಾಗಿದೆ. ಆದರೆ ಸ್ಪೆಷಲ್ ವಾರ್ಡ್‌ಗಳಲ್ಲಿ ಚಿಕಿತ್ಸೆ ನೀಡಿ ಎನ್ನುವುದು ಸರಿಯಲ್ಲ. ಸರ್ಕಾರ ಖಾಸಗಿ ಆಸ್ಪತ್ರೆಗಳ ವಿಚಾರದಲ್ಲಿ ಹಿಟ್ಲರ್ ರೂಲ್‌ನಂತೆ ನಡೆದುಕೊಳ್ಳುತ್ತಿದೆ. ಕಡೆ ಪಕ್ಷ ಸೌಜನ್ಯಕ್ಕಾದರೂ ಖಾಸಗಿ ಆಸ್ಪತ್ರೆಗಳ ವೈದ್ಯರನ್ನು ಕರೆದು ಯೋಜನೆಯ ಕುರಿತು ಚರ್ಚಿಸಬೇಕು.

–ಡಾ. ವಿಜಯ್ ಚೆಲುವರಾಜು, ವೈದ್ಯಕೀಯ ಅಧೀಕ್ಷಕ, ಭಾನವಿ ಆಸ್ಪತ್ರೆ

ಕೆ–ಸೆಟ್ ಅಕ್ರಮ ತನಿಖೆಗೆ ಸರ್ಕಾರದ ಆದೇಶ

ಮೂವರ ಒಳಗೊಂಡ ತನಿಖಾ ಸಮಿತಿ ರಚನೆ

ಮೈಸೂರು, ಡಿ.25(ಎಂಟಿವೈ)– ಮೈಸೂರು ವಿಶ್ವವಿದ್ಯಾಲಯವು ನಡೆಸಿರುವ ಕರ್ನಾಟಕ ರಾಜ್ಯ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ(ಕೆ–ಸೆಟ್)ಯಲ್ಲಿ ನಡೆದಿದೆ ಎನ್ನಲಾದ ಅಕ್ರಮ ತನಿಖೆಗೆ ಸರ್ಕಾರ ಆದೇಶಿಸಿದೆ.

ಕೆ–ಸೆಟ್ ಅಕ್ರಮ ತನಿಖೆಗೆ ಮೂವರನ್ನು ಒಳಗೊಂಡ ತನಿಖಾಧಿಕಾರಿಗಳ ಸಮಿತಿಯನ್ನು ಸರ್ಕಾರ ರಚಿಸಿದೆ. ಉನ್ನತ ಶಿಕ್ಷಣ ಇಲಾಖೆಯ ಉಪಕಾರ್ಯದರ್ಶಿ ಸ್ನೇಹಲ್ ಸುಧಾಕರ್ ಲೋಖಂಡೆ, ಮೈವಿವಿ ಕುಲಸಚಿವೆ ವಿ.ಆರ್.ಶೈಲಜಾ ಮತ್ತು ಹಣಕಾಸು ಅಧಿಕಾರಿ ಡಾ.ಸಂಗೀತಾ ಗಜಾನನಭಟ್ ಸಮಿತಿಯ ಸದಸ್ಯರಾಗಿದ್ದು, ಕೂಲಂಕಷ ಪರಿಶೀಲನೆ ನಡೆಸಿ ವರದಿ ಸಲ್ಲಿಸಲಿದ್ದಾರೆ. ಈ ಕುರಿತು ಉನ್ನತ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ವಿಶ್ವವಿದ್ಯಾಲಯ ಧನಸಹಾಯ ಆಯೋಗದ ನಿಯಮಗಳಿಗೆ ವಿರುದ್ಧವಾಗಿ ಮೈವಿವಿ ಕೆ–ಸೆಟ್ ಪರೀಕ್ಷೆ ನಡೆಸಿರುವ ಸಂಬಂಧ ದೂರು ದಾಖಲಾಗಿದೆ. ಈ ಹಿಂದೆ ವಿಶ್ವವಿದ್ಯಾನಿಲಯದ ಅನುಷ್ಠಾನ ಸಮಿತಿಯ ಮೂಲಕ ಪರೀಕ್ಷೆ, ಮೌಲ್ಯಮಾಪನ ನಡೆಸಲಾಗುತ್ತಿತ್ತು. ಎಲ್ಲಾ ಹಂತದಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲಾಗುತ್ತಿತ್ತು. ಅಲ್ಲದೆ, ಸಿಸಿ ಕ್ಯಾಮರಾ ಕಣ್ಗಾವಲಿನಲ್ಲಿ ಎಲ್ಲಾ ಚಟುವಟಿಕೆ ನಡೆಸಲಾಗುತ್ತಿತ್ತು. ಆದರೆ, 2020ರಲ್ಲಿ ನಡೆದ ಕೆ–ಸೆಟ್ ಪರೀಕ್ಷೆಯಲ್ಲಿ ಕೆಲವು ವಾಮಮಾರ್ಗ ಅನುಸರಿಸಲಾಗಿತ್ತು. ಯುಜಿಸಿ ನಿಯಮಾವಳಿಯಂತೆ ಪರೀಕ್ಷೆಯ ಒಎಂಆರ್ ಶೀಟ್‌ಗಳನ್ನು ಕಡ್ಡಾಯವಾಗಿ ಒಂದು ವರ್ಷ ಕಾಯ್ದಿಡಬೇಕು. ಆದರೆ, ಮೈವಿವಿ ಸಿಂಡಿಕೇಟ್ ಸಭೆಯಲ್ಲಿ 3 ತಿಂಗಳ ಅವಧಿಯ ನಂತರ ಎಂಆರ್ ಶೀಟ್‌ಗಳನ್ನು ನಾಶಪಡಿಸಲು ನಿರ್ಣಯ ಕೈಗೊಳ್ಳಲಾಗಿತ್ತು. ಇದು ನಿಯಮಬಾಹಿರವಾಗಿದ್ದು, ಅಕ್ರಮ ಮರೆಮಾಚುವ ಪ್ರಯತ್ನವಾಗಿದೆ.

ಕುಲಪತಿ, ಕೆ–ಸೆಟ್ ಸಂಯೋಜನಾಧಿಕಾರಿ ಹಲವಾರು ಅಕ್ರಮಗಳಲ್ಲಿ ಭಾಗಿಯಾಗಿದ್ದಾರೆ. ಆದ್ದರಿಂದ ತನಿಖೆ ನಡೆಸಬೇಕು ಎಂದು ಸಂಸದ ಪ್ರತಾಪ್ ಸಿಂಹ ಅವರು ಯುಜಿಸಿ ಮತ್ತು ರಾಜ್ಯ ಉನ್ನತ ಶಿಕ್ಷಣ ಸಚಿವರಿಗೆ ಮನವಿ ಸಲ್ಲಿಸಿದ್ದರು. ಅಲ್ಲದೇ, ವಿಧಾನಸಭೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಸಹ ತನಿಖೆ ನಡೆಸಲು ಒತ್ತಾಯಿಸಿದ್ದರು.

ಆದರೆ, ಕೆ–ಸೆಟ್ ಸಂಯೋಜನಾಧಿಕಾರಿಗಳು ಪರೀಕ್ಷೆಯಲ್ಲಿ ಅವ್ಯವಹಾರ ನಡೆದಿಲ್ಲ. ಆರೋಪವು ಸತ್ಯಕ್ಕೆ ದೂರ ಎಂದು ಸಮಜಾಯಿಷಿ ಕೊಟ್ಟಿದ್ದರು.

ಈ ಮಧ್ಯೆ ನೂರಾರು ವಿದ್ಯಾರ್ಥಿಗಳು, ಪರೀಕ್ಷಾರ್ಥಿಗಳು ನ್ಯಾಯ ದೊರಕಿಸಿಕೊಡುವಂತೆ ದೂರು ಸಲ್ಲಿಸಿದ್ದರು. ನಿಷ್ಪಕ್ಷಪಾತ ತನಿಖೆ ನಡೆದಿರುವ ವಿವರ ನೀಡಿಲ್ಲ. ವರದಿ ಸಲ್ಲಿಸದೆ ಕೇವಲ ಪತ್ರ ನೀಡಲಾಗಿದೆ. ಹಾಗಾಗಿ ಉನ್ನತ ಶಿಕ್ಷಣ ಇಲಾಖೆಯ ಅಧೀನ ಕಾರ್ಯದರ್ಶಿ ಶೀತಲ್ ಎಂ.ಹಿರೇಮಠ ತನಿಖೆಗೆ ಆದೇಶ ನೀಡಿದ್ದಾರೆ. 2019ರಿಂದ 2021ರ ಅವಧಿಯಲ್ಲಿ ಕೆ–ಸೆಟ್‌ನಲ್ಲಿ ನಡೆದಿರುವ ಅಕ್ರಮಗಳು, ಇದರಲ್ಲಿ ವಿವಿ ಅಧಿಕಾರಿ ವರ್ಗ, ಸಿಬ್ಬಂದಿ ಶಾಮೀಲು ಕುರಿತು ಪಾರದರ್ಶಕವಾಗಿ ತನಿಖೆ ನಡೆಸಬೇಕು. ಒಂದು ತಿಂಗಳ ಒಳಗೆ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಮೈಸೂರಲ್ಲಿ ಸಡಗರ–ಸಂಭ್ರಮದ ಕ್ರಿಸ್‌ಮಸ್ ಆಚರಣೆ

ಉಡುಗೊರೆ, ಶುಭಾಶಯ ವಿನಿಮಯ ಬಾಂಧವ್ಯ ಸಂದೇಶ



ಮೈಸೂರಿನ ಸೇಂಟ್ ಫಿಲೋಮಿನಾ ಚರ್ಚ್ ವೃತ್ತದಲ್ಲಿ ಮೈಸೂರು ಡಿವಿಜನ್ ಕ್ಯಾಥೋಲಿಕ್ ಕ್ರಿಶ್ಚಿಯನ್ ಅಸೋಸಿಯೇಷನ್ ವತಿಯಿಂದ ಸಾರ್ವಜನಿಕರಿಗೆ ಸಿಹಿ ಹಂಚಿ ಕ್ರಿಸ್‌ಮಸ್ ಆಚರಿಸಲಾಯಿತು. ಅಸೋಸಿಯೇಷನ್ ಅಧ್ಯಕ್ಷ ಜೆ.ಸ್ಟೀಫನ್ ಸುಜಿತ್, ಉಪಾಧ್ಯಕ್ಷ ಎಲ್ವಿನ್, ಜಾನ್ಸನ್ ಬೆನ್ನ, ಮರಿಯ ಫ್ರಾನ್ಸಿಸ್ ಮತ್ತಿತರರಿದ್ದರು.

ಮೈಸೂರು, ಡಿ.25(ಎಂಟಿವೈ)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಭಾನುವಾರ ಸಡಗರ ಸಂಭ್ರಮದಿಂದ ಕ್ರಿಸ್‌ಮಸ್ ಆಚರಿಸಲಾಯಿತು. ಬಹುತೇಕ ಎಲ್ಲಾ ಚರ್ಚ್‌ಗಳಲ್ಲೂ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು. ಸಾಂತಾಕ್ಲಾಸನ ಟೋಪಿ ಧರಿಸಿ ಸಂಭ್ರಮಿಸಿದರು.

ಕೊರೊನಾ ಹಿನ್ನೆಲೆಯಲ್ಲಿ ಎರಡು ವರ್ಷದಿಂದ ಸರಳ ಹಾಗೂ ಸಾಂಪ್ರದಾಯಿಕ ಆಚರಣೆಗಷ್ಟೇ ಸೀಮಿತವಾಗಿದ್ದ ಕ್ರಿಸ್‌ಮಸ್ ಹಬ್ಬವನ್ನು ಈ ಬಾರಿ ಎಲ್ಲೆಡೆ ಸಂಭ್ರಮದಿಂದ ಆಚರಿಸಲಾಯಿತು. ಇಂದು ಭಾನುವಾರವಾಗಿದ್ದರಿಂದ ವಿವಿಧೆಡೆಯಿಂದ ಮೈಸೂರಿಗೆ ಪ್ರವಾಸಕ್ಕೆ ಬಂದಿದ್ದ ಪ್ರವಾಸಿಗರು ಸಂತಫಿಲೋಮಿನಾ ಚರ್ಚ್ ಸೇರಿದಂತೆ ವಿವಿಧ ಚರ್ಚ್‌ಗಳಲ್ಲಿ ಕ್ರಿಸ್‌ಮಸ್ ಆಚರಣೆಯಲ್ಲಿ ತೊಡಗಿ, ಸಾಮರಸ್ಯ ಸಂದೇಶ ರವಾನಿಸಿದರು.

ಮೈಸೂರಿನ ವಿವಿಧೆಡೆ ಇರುವ ಚರ್ಚ್‌ಗಳಲ್ಲಿ ಕ್ರೈಸ್ತ ಧರ್ಮಿಯರು, ಬಾಲಯೇಸುವಿಗೆ ವಿಶೇಷ ಪೂಜೆ ಸಲ್ಲಿಸಿ ಪ್ರಾರ್ಥನೆ ಸಲ್ಲಿಸಿದರು. ಕರೋಲ್ ಗೀತೆಗಳನ್ನು ಹಾಡುವ ಮೂಲಕ ಬಾಲಯೇಸುವಿನ ಗುಣಗಾನ ಮಾಡಿದರು. ಸಂತ ಫಿಲೋಮಿನಾ ಚರ್ಚ್‌ನಲ್ಲಿ ಮಧ್ಯರಾತ್ರಿ 12ಕ್ಕೆ ಬಲಿಪೂಜೆ ಆರಂಭಿಸಿ ನಂತರ ಮೈಸೂರಿನ ಬಿಷಪ್ ಡಾ.ಕೆ. ವಿಲಿಯಂ 12.30ಕ್ಕೆ ಕ್ರಿಬ್(ಗೋದಲಿ)ನಲ್ಲಿ ಬಾಲಯೇಸುವಿನ ಮೂರ್ತಿಯನ್ನು ಸ್ಥಾಪಿಸಿ, ದೀಪ ಬೆಳಗಿ ಪೂಜಿಸಿದ ಬಳಿಕ ನಿರಂತರ ದರ್ಶನಕ್ಕೆ ಅವಕಾಶವಿತ್ತು.

ಚರ್ಚ್‌ನ ಆವರಣದಲ್ಲಿ ನಿರ್ಮಿಸಿರುವ ಜೆರುಸಲೇಮ್‌ನಲ್ಲಿರುವ ಮಾದರಿ ಕ್ರಿಬ್ ಮತ್ತು ಅದರ ಮುಂದಿರುವ ದೊಡ್ಡ ಬೈಬಲ್, ಸೇಂಟ್ ಫಿಲೋಮಿನಾ ಚರ್ಚ್ ಆಕೃತಿ, ಯೇಸು ಕಿಸ್ತನ ಶಿಷ್ಯರನ್ನು ಸೂಚಿಸುವ 12 ನಕ್ಷತ್ರಗಳು ಹಾಗೂ ವಿಶೇಷ ಸೌರಮಂಡಲ, ಪ್ರಾಣಿ ಸಂಕುಲದೊಂದಿಗೆ ಯೇಸು ಕ್ರಿಸ್ತನ ಜನನವನ್ನು ಸಂಭ್ರಮಿಸುವ ವಾತಾವರಣ ಚರ್ಚ್‌ನಲ್ಲಿ ಮೇಳೈಸಿತ್ತು. ಇದು ಕ್ರೈಸ್ತ ಸಮುದಾಯದವರು ಮತ್ತು ಪ್ರವಾಸಿಗರನ್ನು ಆಕರ್ಷಿಸುತ್ತಿತ್ತು. ಭಾನುವಾರ ದಿನವಿಡೀ ಚರ್ಚ್‌ಗೆ ಬಂದ ಪ್ರವಾಸಿಗರು ವನ್ಯಲೋಕದ ಪರಿಕಲ್ಪನೆಯಲ್ಲಿ ವ್ಯವಸ್ಥೆ ಮಾಡಿರುವ ಪ್ರಾಣಿ–ಪಕ್ಷಿಗಳ ಆಕೃತಿಗಳ ಮುಂದೆ ನಿಂತು ಸೆಲ್ಫಿ, ಫೋಟೋ ತೆಗೆದುಕೊಂಡು ಸಂಭ್ರಮಿಸಿದರು.

ಹಬ್ಬದ ಹಿನ್ನೆಲೆಯಲ್ಲಿ ಮನೆಗಳಲ್ಲಿ ವಿಶೇಷ ಖಾದ್ಯ ತಯಾರಿಸಿ ಸವಿದರು. ಬಂಧುಗಳೊಂದಿಗೆ ಪರಸ್ಪರ ಉಡುಗೊರೆ, ಶುಭಾಶಯ ವಿನಿಮಯ ಮಾಡಿಕೊಂಡು ಆನಂದಿಸಿದರು. ಬಗೆ ಬಗೆಯ ಕೇಕ್ ತಯಾರಿಸಿ ಜನರಿಗೆ ಹಂಚಿಯೂ ಶುಭ ಕೋರಿದರು. ಕ್ರಿಸ್‌ಮಸ್ ಟ್ರಿ ನಿರ್ಮಿಸಿ ನಕ್ಷತ್ರ, ವಿದ್ಯುತ್ ದೀಪದ ಅಲಂಕಾರ ಎಲ್ಲೆಡೆ ಕಂಡು ಬಂತು. ಅಲ್ಲದೆ ಬಿಷಪ್ ನಿವಾಸಕ್ಕೆ ವಿವಿಧ ಸಂಘಟನೆಗಳ ಮುಖಂಡರು, ರಾಜಕೀಯ ಪಕ್ಷಗಳ ಮುಖಂಡರು ತೆರಳಿ ಬಿಷಪ್ ಡಾ.ಕೆ.ವಿ.ವಿಲಿಯಮ್ ಅವರಿಗೆ ಶುಭ ಕೋರಿದರು.

ಕೊರೊನಾ ಬಗ್ಗೆ ನಾವು ಎಚ್ಚರವಾಗಿರಬೇಕು...

'ಮನ್ ಕಿ ಬಾತ್'ನಲ್ಲಿ ಪ್ರಧಾನಿ ಮೋದಿ ಕಿವಿಮಾತು



ನವದೆಹಲಿ, ಡಿ.25– ವಿಶ್ವದ ಹಲವು ರಾಷ್ಟ್ರಗಳಲ್ಲಿ ಕೊರೊನಾ ಸಾಂಕ್ರಾಮಿಕ ರೋಗ ಹೆಚ್ಚಾಗುತ್ತಿದ್ದು, ನಾವೂ ಎಚ್ಚರವಹಿಸಬೇಕಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಭಾನುವಾರ ಹೇಳಿದ್ದಾರೆ.

ಮಾಸಿಕ ರೇಡಿಯೋ ಕಾರ್ಯಕ್ರಮವಾದ 'ಮನ್ ಕಿ ಬಾತ್'ನ 96ನೇ ಆವೃತ್ತಿಯಲ್ಲಿ ಮಾತನಾಡಿದ ಮೋದಿಯವರು, ಪ್ರಪಂಚದ ಹಲವು ದೇಶಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ನಾವು ಜಾಗರೂಕರಾಗಿರಬೇಕಿದ್ದು, ಮಾಸ್ಕ್ ಧರಿಸುವುದು, ಕೈಗಳನ್ನು ತೊಳೆದುಕೊಳ್ಳುವುದು ಸೇರಿದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕಿದೆ. ಇದೇ ವೇಳೆ ಹಬ್ಬ ಹರಿದಿನಗಳನ್ನು ಎಚ್ಚರಿಕೆಯಿಂದ ಆಚರಿಸುವಂತೆ ಜನತೆಗೆ ಮೋದಿಯವರು ಸಲಹೆ ನೀಡಿದರು.

ಈ ಹಬ್ಬಗಳನ್ನು ಆನಂದದಿಂದ ಆಚರಿಸಿ, ಆದರೆ ಸ್ವಲ್ಪ ಜಾಗರೂಕರಾಗಿರಿ. ನಾವು ಜಾಗರೂಕರಾಗಿದ್ದರೆ ಸುರಕ್ಷಿತವಾಗಿರುತ್ತೇವೆ. ನಮ್ಮ ಸಂತೋಷಕ್ಕೆ ಯಾವುದೇ ಅಡ್ಡಿಯಾಗುವುದಿಲ್ಲ. ಇದರೊಂದಿಗೆ, ನಿಮ್ಮೆಲ್ಲರಿಗೂ ಮತ್ತೊಮ್ಮೆ ಶುಭಾಶಯಗಳು ಎಂದು ಹೇಳಿದರು.

2022ರ ವರ್ಷವು ಅದ್ಭುತವಾಗಿದೆ, ಭೂತ ಕಾಲದ ಅವಲೋಕನವು ಯಾವಾಗಲೂ ಪ್ರಸ್ತುತ ಮತ್ತು ಭವಿಷ್ಯದ ಸಿದ್ಧತೆಗಳಿಗೆ ನಮಗೆ ಸ್ಫೂರ್ತಿ ನೀಡುತ್ತದೆ. 2022ರಲ್ಲಿ ದೇಶದ ಜನರ ಶಕ್ತಿ, ಅವರ ಸಹಕಾರ, ಸಂಕಲ್ಪ, ಯಶಸ್ಸಿನ ವಿಸ್ತರಣೆ ಎಷ್ಟಿದೆ ಎಂದರೆ ಎಲ್ಲರನ್ನೂ ಈ 'ಮನ್ ಕಿ ಬಾತ್'ನಲ್ಲಿ ಸೇರಿಸುವುದು ಕಷ್ಟ, ನನ್ನ ಪಾಲಿಗೆ 2022 ಬಹಳ ವಿಶೇಷವಾದ ವರ್ಷವಾಗಿತ್ತು ಎಂದು ತಿಳಿಸಿದ್ದಾರೆ.

2022ರಲ್ಲಿ ದೇಶವಾಸಿಗಳು ಮತ್ತೊಂದು ಅಮರ ಇತಿಹಾಸ ಬರೆದಿದ್ದಾರೆ. ಆಗಸ್ಟ್ ತಿಂಗಳಿನಲ್ಲಿ ನಡೆದ 'ಹರ್ ಘರ್ ತಿರಂಗ' ಅಭಿಯಾನವನ್ನು ಮರೆಯಲು ಅಸಾಧ್ಯ. ಸ್ವಾತಂತ್ರ್ಯದ 75 ವರ್ಷಗಳ ಈ ಅಭಿಯಾನದಲ್ಲಿ ಇಡೀ ದೇಶವೇ ತ್ರಿವರ್ಣ ಧ್ವಜವನ್ನು ಹಿಡಿದು ಸಂಭ್ರಮಿಸಿತು. 6 ಕೋಟಿಗೂ ಹೆಚ್ಚು ಜನರು ತ್ರಿವರ್ಣ ಧ್ವಜದೊಂದಿಗೆ ಸೆಲ್ಫಿ ಕೂಡ ಕಳುಹಿಸಿದ್ದಾರೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವವು ಮುಂದಿನ ವರ್ಷವೂ ಅದೇ ರೀತಿಯಲ್ಲಿ ಮುಂದುವರಿಯುತ್ತದೆ. ಇದು ಅಮೃತ ಕಾಲದ ಅಡಿಪಾಯವನ್ನು ಮತ್ತಷ್ಟು ಬಲಪಡಿಸುತ್ತದೆ ಎಂದಿದ್ದಾರೆ.

ಭಾರತ ವೇಗವಾಗಿ ಪ್ರಗತಿ ಸಾಧಿಸಿದೆ ಮತ್ತು ವಿಶ್ವದ ಐದನೇ ಅತಿದೊಡ್ಡ ಆರ್ಥಿಕತೆಯಾಗಿ ಬೆಳೆದಿದೆ. 2022ರ ವಿವಿಧ ಯಶಸ್ಸುಗಳು ಇಂದು ಇಡೀ ಜಗತ್ತಿನಲ್ಲಿ ಭಾರತಕ್ಕೆ ವಿಶೇಷ ಸ್ಥಾನವನ್ನು ಸೃಷ್ಟಿಸಿವೆ. 2022 ಎಂದರೆ ಭಾರತವು ವಿಶ್ವದ ಐದನೇ ಅತಿದೊಡ್ಡ ಆರ್ಥಿಕತೆಯ ಸ್ಥಾನಮಾನವನ್ನು ಸಾಧಿಸಿದೆ. 2022 ಎಂದರೆ ಭಾರತದಿಂದ 220 ಕೋಟಿ ಲಸಿಕೆಗಳ ನಂಬಲಾಗದ ಅಂಕಿ ಅಂಶವನ್ನು ದಾಟಿದ ದಾಖಲೆ ನಿರ್ಮಾಣವಾಗಿದೆ.

2022 ಎಂದರೆ ದೇಶದ ಜನರಿಂದ 'ಸ್ವಾವಲಂಬಿ ಭಾರತ'ದ ಸಂಕಲ್ಪವನ್ನು ಅಳವಡಿಸಿಕೊಂಡು ಬದುಕುವುದು. 2022 ಎಂದರೆ ಭಾರತದ ಮೊದಲ ಸ್ವದೇಶಿ ವಿಮಾನವಾಹಕ ನೌಕೆ INS ವಿಕ್ರಾಂತ್‌ಗೆ ಸ್ವಾಗತ ಕೋರಿದ್ದು. 2022 ಎಂದರೆ ಬಾಹ್ಯಾಕಾಶ, ಡ್ರೋನ್ ಮತ್ತು ರಕ್ಷಣಾ ಕ್ಷೇತ್ರಗಳಲ್ಲಿ ಭಾರತದ ಕೀರ್ತಿ ಬೆಳಗಿದ್ದು. 2022 ಎಂದರೆ ಪ್ರತಿಯೊಂದು ಕ್ಷೇತ್ರದಲ್ಲೂ ಭಾರತದ ಶಕ್ತಿ ಹೊರಹೊಮ್ಮಿದ್ದು. ಕಾಮನ್‌ವೆಲ್ತ್ ಕ್ರೀಡಾಕೂಟವಾಗಲೀ ಅಥವಾ ನಮ್ಮ ಮಹಿಳಾ ಹಾಕಿ ತಂಡದ ವಿಜಯವಾಗಲೀ ಕ್ರೀಡಾ ಕ್ಷೇತ್ರದಲ್ಲಿಯೂ ಸಹ, ನಮ್ಮ ಯುವಕರು ಅದ್ಭುತ ಸಾಮರ್ಥ್ಯವನ್ನು ತೋರಿಸಿದ್ದಾರೆ ಎಂದು ಮೋದಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.